ಗುರುವಾರ, ಆಗಸ್ಟ್ 19, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಪಹರೆ...
ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನ ವಾಝಿರ್ ಅಕ್ಬರ್ ಖಾನ್ ಪ್ರದೇಶದಲ್ಲಿ ಬುಧವಾರ ಪಹರೆ ಕಾಯುತ್ತಿದ್ದ ತಾಲಿಬಾನ್ ಉಗ್ರನೊಬ್ಬ ಫೋಟೊಗೆ ಪೋಸ್ ನೀಡಿದ ಭಂಗಿ –ಎಪಿ/ಪಿಟಿಐ ಚಿತ್ರ

2022ರ ದಸರೆಗೆ ಮುನ್ನವೇ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಸಿದ್ಧ

ಎಕ್ಸ್‌ಪ್ರೆಸ್ ವೇ ಬದಿ ಆರಡಿ ಬೇಲಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಬೆಂಗಳೂರು– ಮೈಸೂರು ನಡುವಿನ ದಶಪಥ ಹೆದ್ದಾರಿ ಕಾಮಗಾರಿ 2022ರ ಸೆಪ್ಟೆಂಬರ್‌ನೊಳಗೆ ಮುಗಿಯಲಿದ್ದು, ಮುಖ್ಯ ಆರು ಪಥದ (ಎಕ್ಸ್‌ಪ್ರೆಸ್ ವೇ) ಉದ್ದಕ್ಕೂ ಎರಡೂ ಬದಿಯಲ್ಲಿ ಆರಡಿ ಎತ್ತರದ ಚೈನ್ ಲಿಂಕ್ ಬೇಲಿ ನಿರ್ಮಿಸಲಾಗುತ್ತಿದೆ' ಎಂದು ಸಂಸದ ಪ್ರತಾಪಸಿಂಹ ತಿಳಿಸಿದರು.

'ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಹಾಗೂ ಶ್ರೀರಂಗಪಟ್ಟಣ ಪಟ್ಟಣದಲ್ಲಿ ಮಾತ್ರ ಪ್ರವೇಶ ಹಾಗೂ ನಿರ್ಗಮನ ದ್ವಾರ, ಉಳಿದೆಡೆ ಸಂಪೂರ್ಣವಾಗಿ ಚೈನ್ ಲಿಂಕ್ ಇರಲಿದೆ. ಜನ, ಜಾನುವಾರು ಪ್ರವೇಶಿಸಲು, ಮಧ್ಯದಲ್ಲಿ ವಾಹನಗಳು ಬೇರೆಡೆ ಹೋಗಲು ಅವಕಾಶವಿರುವುದಿಲ್ಲ. ಅದರಿಂದ ಅಪಘಾತ ತಪ್ಪಿಸಬಹುದಾಗಿದ್ದು, ಬೆಂಗಳೂರಿನಿಂದ ಮೈಸೂರಿಗೆ 90 ನಿಮಿಷಗಳಲ್ಲಿ ತಲುಪಬಹುದು. ಬಿಡದಿ ಹಾಗೂ ಗಣಂಗೂರು ಬಳಿ ಟೋಲ್ ಗೇಟ್ ಇರಲಿದೆ. ಇಕ್ಕೆಲಗಳಲ್ಲಿ ಎರಡು ಪಥದ ಸರ್ವೀಸ್ ರಸ್ತೆಯೂ ಇರಲಿದೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'118 ಕಿ.ಮೀ ಉದ್ದದ ಹೆದ್ದಾರಿಯಲ್ಲಿ ಎರಡು ಕಡೆ ವಿಶ್ರಾಂತಿ ತಾಣವನ್ನು ನಿರ್ಮಿಸಲಾಗುತ್ತಿದೆ. ಸುಮಾರು 25 ಎಕರೆ ಪ್ರದೇಶದಲ್ಲಿ ಹೋಟೆಲ್, ಶೌಚಗೃಹ, ವಿಶ್ರಾಂತಿ ಕೊಠಡಿ, ಪೆಟ್ರೋಲ್ ಬಂಕ್ ವ್ಯವಸ್ಥೆ ಮಾಡಲಾಗುವುದು' ಎಂದು ಅವರು ತಿಳಿಸಿದರು.

ಮುಕ್ತಾಯ ಹಂತ: 'ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಹಾಗೂ ಶ್ರೀರಂಗಪಟ್ಟಣ ಪಟ್ಟಣದಲ್ಲಿ ಬೈಪಾಸ್ ರಸ್ತೆ ಅಭಿವೃದ್ಧಿ ಮುಕ್ತಾಯ ಹಂತದಲ್ಲಿದೆ. ಜನವರಿ ವೇಳೆಗೆ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು' ಎಂದರು.

₹8,066 ಕೋಟಿಗೇರಿದ ವೆಚ್ಚ: 'ಯೋಜನೆಯ ಕಾಮಗಾರಿ ವೆಚ್ಚ ₹8,066 ಕೋಟಿಗೇರಿದ್ದು, ಇನ್ನೂ ₹500 ಕೋಟಿ ಹೆಚ್ಚಾಗಬಹುದು. ಆರಂಭದಲ್ಲಿ ₹6,400 ಕೋಟಿ ನಿಗದಿಪಡಿಸಲಾಗಿತ್ತು. ಸಮಗ್ರ ಯೋಜನಾ ವರದಿ ತಯಾರಿಸುವ ವೇಳೆ ಲೋಕೋಪಯೋಗಿ ಇಲಾಖೆಯು ಹಣ ಉಳಿತಾಯಕ್ಕಾಗಿ ಕೆಲವೆಡೆ ಸೇತುವೆ, ಮೇಲ್ಸೇತುವೆ ಯೋಜನೆ ಕೈಬಿಟ್ಟಿತ್ತು. ನಂತರದ ದಿನಗಳಲ್ಲಿ ಸಮಸ್ಯೆ ಉಂಟಾಯಿತು. ಯೋಜನೆಯ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸಲಿದ್ದು, ರಾಜ್ಯ ಸರ್ಕಾರದಿಂದ ಒಂದು ರೂಪಾಯಿಯನ್ನೂ ಪಡೆದಿಲ್ಲ' ಎಂದು ಹೇಳಿದರು.

ಮುಖ್ಯಾಂಶಗಳು

- 2018ರಲ್ಲಿ ಆರಂಭವಾದ ಯೋಜನೆ
- 118 ಕಿ.ಮೀ ಉದ್ದದ ಹೆದ್ದಾರಿ
- ಪ್ಯಾಕೇಜ್–1 ಶೇ 81, ಪ್ಯಾಕೇಜ್–2 ಶೇ 72ರಷ್ಟು ಕಾಮಗಾರಿ ಪೂರ್ಣ

ಪುಣೆ–ಮುಂಬೈ ಹೆದ್ದಾರಿಯು ಪುಣೆ ನಗರದ ಭವಿಷ್ಯವನ್ನು ಬದಲಾಯಿಸಿದಂತೆಯೇ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯೂ ಮೈಸೂರಿನ ಗತಿಯನ್ನೇ ಬದಲಾಯಿಸಲಿದೆ

ಪ್ರತಾಪಸಿಂಹ, ಸಂಸದ



ದಶಪಥ ಹೆದ್ದಾರಿಯ ಕಾಮಗಾರಿ ವೀಕ್ಷಿಸಿದ ಪ್ರತಾಪಸಿಂಹ

ಮೈಸೂರು–ಕುಶಾಲನಗರ ಹೆದ್ದಾರಿ ಕಾಮಗಾರಿ

ಮೈಸೂರು–ಕುಶಾಲನಗರ ಹೆದ್ದಾರಿ ಕಾಮಗಾರಿಗೂ ಒಪ್ಪಿಗೆ ಸಿಕ್ಕಿದ್ದು, ಬೆಂಗಳೂರು–ಮಡಿಕೇರಿ ನಡುವಣ ಸಂಚಾರ ಸಮಯ 2 ಗಂಟೆ ಉಳಿತಾಯವಾಗಲಿದೆ ಎಂದು ಪ್ರತಾಪಸಿಂಹ ಹೇಳಿದರು.

ಬೆಂಗಳೂರಿನಿಂದ ಮಡಿಕೇರಿಗೆ ಹೋಗುವವರು ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿ ಬಳಿಯೇ ಡೀವಿಯೇಷನ್ ತೆಗೆದುಕೊಂಡು ಹುಣಸೂರು ತಲುಪಬಹುದು. ₹3,883 ಕೋಟಿ ವೆಚ್ಚದಲ್ಲಿ ಶ್ರೀರಂಗಪಟ್ಟಣದಿಂದ ಹುಣಸೂರಿಗೆ ಒಂದು ಪ್ಯಾಕೇಜ್, ಹುಣಸೂರಿನಿಂದ ಕುಶಾಲನಗರಕ್ಕೆ ಇನ್ನೊಂದು ಪ್ಯಾಕೇಜ್ ಮಾಡಿ 2022ರ ಮಾರ್ಚ್‌ನಲ್ಲಿ ಕಾಮಗಾರಿ ಆರಂಭಿಸಲಾಗುವುದು ಎಂದರು.

ಸುದ್ದಿ 2 ನಿಮಿಷ

ವಿಮರ್ಶಾ ಕಮ್ಮಟಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ರಾಜ್ಯ ಮಟ್ಟದ ಮೂರು ದಿನಗಳ ವಿಮರ್ಶಾ ಕಮ್ಮಟಕ್ಕೆ ಅರ್ಜಿ ಆಹ್ವಾನಿಸಿದೆ.

ಅಕ್ಟೋಬರ್ ತಿಂಗಳಲ್ಲಿ ಕಮ್ಮಟ ನಡೆಯಲಿದೆ. 20ರಿಂದ 45 ವರ್ಷದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಊಟೋಪಚಾರ ಮತ್ತು ವಸತಿ ವ್ಯವಸ್ಥೆ ಇರಲಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರೋತ್ಸಾಹಧನ ಹಾಗೂ ಪ್ರಯಾಣ ಭತ್ಯೆಯನ್ನೂ ನೀಡಲಾಗುತ್ತದೆ. ಅರ್ಜಿ ನಮೂನೆಗಳು ಅಕಾಡೆಮಿಯ ವೆಬ್‌ಸೈಟ್‌ನಲ್ಲಿ (karnataka sahithyaacademy.org) ಲಭ್ಯವಿದೆ.

ಸೆ.15 ಅರ್ಜಿ ಸಲ್ಲಿಸಲು ಕಡೆಯ ದಿನಾಂಕವಾಗಿದ್ದು, ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಅಂಚೆ ಅಥವಾ ಕೊರಿಯರ್ ಮೂಲಕ ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ ದೂ.: 080-22211730 ಅಥವಾ 22106460

ಬಸ್ ತಂಗುದಾಣಗಳ ಉದ್ಘಾಟನೆ



ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಬೆಟ್ಟಹಲಸೂರು ಮತ್ತು ನೆಲ್ಲುಕುಂಟೆ ಗ್ರಾಮದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ನಿರ್ಮಿಸಿರುವ ಬಸ್ ತಂಗುದಾಣಗಳು ಹಾಗೂ ಶುದ್ಧಕುಡಿಯುವ ನೀರಿನ ಘಟಕವನ್ನು ಶಾಸಕ ಕೃಷ್ಣಬೈರೇಗೌಡ ಸಾರ್ವಜನಿಕರ ಸೇವೆಗೆ ಸಮರ್ಪಿಸಿದರು.

ನಂತರ ಮಾತನಾಡಿದ ಅವರು, 'ಹಣವಿದ್ದವರಿಗೆ ಮಾತ್ರ ಶುದ್ಧ ಕುಡಿಯುವನೀರುಮತ್ತುಆರೋಗ್ಯಎಂದಾಗದೆ,ಕಷ್ಟಪಟ್ಟುದುಡಿಯುವಎಲ್ಲ ಬಡಜನರಿಗೂ ಮನೆಬಾಗಿಲಲ್ಲೇ ಕಡಿಮೆ ದರದಲ್ಲಿ ಒಳ್ಳೆಯ ನೀರು ದೊರಕಬೇಕೆಂಬ ಉದ್ದೇಶದಿಂದ ನೀರಿನ ಘಟಕ ನಿರ್ಮಿಸಲಾಗಿದೆ' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರ ವತಿಯಿಂದ 200 ಜನರಿಗೆ ಉಚಿತವಾಗಿ ನೀರಿನ ಕ್ಯಾನ್ ವಿತರಿಸಲಾಯಿತು. ಕಾಂಗ್ರೆಸ್ ಮುಖಂಡರಾದ ಕೆ.ಅಶೋಕನ್, ಬಿ.ಕೆ.ಮಂಜುನಾಥಗೌಡ, ನಾರಾಯಣಗೌಡ, ಉದಯಶಂಕರ್, ಕೆ.ಎನ್.ಮಹೇಶ್ ಕುಮಾರ್, ಲಕ್ಷ್ಮೀಪತಿ, ಶಿವಣ್ಣ, ನರಸಿಂಹಮೂರ್ತಿ, ಹಂಸವೇಣಿ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ದಶಪಥ ಹೆದ್ದಾರಿ: ಪ್ರತಾಪಸಿಂಹ–ಸುಮಲತಾ ನಡುವೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಡ್ಯ: ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಕಾಮಗಾರಿ ಗುಣಮಟ್ಟದ ವಿಚಾರದಲ್ಲಿ ಮೈಸೂರು ಸಂಸದ ಪ್ರತಾಪಸಿಂಹ ಹಾಗೂ ಮಂಡ್ಯ ಸಂಸದೆ ಸುಮಲತಾ ಬುಧವಾರ ಪರಸ್ಪರ ಟೀಕಾ ಪ್ರಹಾರ ನಡೆಸಿದರು.

'ಹೆದ್ದಾರಿ ಕಾಮಗಾರಿ ಅವೈಜ್ಞಾನಿಕವಾಗಿದೆ' ಎಂದು ಸುಮಲತಾ ಮಂಡ್ಯದಲ್ಲಿ ಹೇಳಿದರೆ, 'ಗುಣಮಟ್ಟದ ಬಗ್ಗೆ ಯಾರಿಗೆ ಅನುಮಾನ ಇದೆಯೋ ಅವರು ತಜ್ಞರನ್ನು ಕರೆದುಕೊಂಡು ಹೋಗಿ ಪರಿಶೀಲಿಸಲಿ' ಎಂದು ಪ್ರತಾಪ ಸಿಂಹ ಮೈಸೂರಿನಲ್ಲಿ ಸವಾಲು ಹಾಕಿದರು.

'ಅವರು ಸಂಸದೆಯಾಗುವ ಮುನ್ನವೇ ಪ್ರಧಾನಿ ಮೋದಿ ಯೋಜನೆಗೆ ಚಾಲನೆ ನೀಡಿದ್ದರು. ಮೈಸೂರು ನಗರವನ್ನು ಗುರಿಯಾಗಿಟ್ಟುಕೊಂಡು ಹೆದ್ದಾರಿ ನಿರ್ಮಿಸಲಾಗುತ್ತಿದ್ದು, ಎಲ್ಲರಿಗೂ ಅನುಕೂಲವಾಗಲಿದೆ. ಮಂಡ್ಯ ಹಾಗೂ ರಾಮನಗರ ಮೂಲಕ ಹಾದು ಹೋಗುತ್ತದೆ ಎಂಬ ಕಾರಣಕ್ಕೆ ತಕರಾರು ತೆಗೆಯುವುದು, ಈ ಯೋಜನೆ ತಮ್ಮದು ಎಂದು ಹೇಳುವುದರಲ್ಲಿ ಅರ್ಥವಿಲ್ಲ' ಎಂದು ಸಂಸದರಾದ ಡಿ.ಕೆ.ಸುರೇಶ್ ಮತ್ತು ಸುಮಲತಾ ವಿರುದ್ಧ ಅವರು ಪರೋಕ್ಷವಾಗಿ ಕಿಡಿಕಾರಿದರು.

ಜನರಿಗೆ ತೊಂದರೆ: 'ಸ್ಥಳೀಯ ಅಗತ್ಯಗಳನ್ನು ಪರಿಗಣಿಸದೆ ಕಾಮಗಾರಿ ಮಾಡಲಾಗುತ್ತಿದ್ದು, ಜನರಿಗೆ ತೊಂದರೆಯಾಗಲಿದೆ. ಅವೈಜ್ಞಾನಿಕ ಕಾಮಗಾರಿಯ ಬಗ್ಗೆ ಪ್ರಶ್ನಿಸಿದರೆ ಅಭಿವೃದ್ಧಿಗೆ ಅಡ್ಡಿ ವ್ಯಕ್ತಪಡಿಸುತ್ತೇನೆ ಎಂಬಂತೆ ಬಿಂಬಿಸಲಾಗುತ್ತದೆ. ಇದನ್ನು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಗಮನಕ್ಕೂ ತರಲಾಗಿದೆ' ಎಂದು ಸುಮಲತಾ ಹೇಳಿದರು.

'ಸಂಸದೆ ಸುಮಲತಾ ತಾಂತ್ರಿಕ ತಜ್ಞರು'

ಪ್ರಜಾವಾಣಿ ವಾರ್ತೆ

ಕೋಲಾರ: 'ಮಂಡ್ಯ ಸಂಸದೆ ಸುಮಲತಾ ತಾಂತ್ರಿಕ ತಜ್ಞರಿದ್ದಾರೆ. ಹೀಗಾಗಿ ಅವರಿಗೆ ಬೆಂಗಳೂರು–ಮೈಸೂರು ದಶಪಥದ ಬಗ್ಗೆ ಮಾಹಿತಿಯಿದೆ. ಅವರು ಬುದ್ಧಿವಂತರಾದ ಕಾರಣ ಮಾತನಾಡುತ್ತಿದ್ದಾರೆ' ಎಂದು ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಲೇವಡಿ ಮಾಡಿದ್ದಾರೆ.

ಬೆಂಗಳೂರು–ಮೈಸೂರು ಹೆದ್ದಾರಿ ವೈಜ್ಞಾನಿಕವಾಗಿಲ್ಲ ಎಂಬ ಸುಮಲತಾ ಅವರ ಹೇಳಿಕೆ ಕುರಿತು ಬುಧವಾರ ಪ್ರತಿಕ್ರಿಯಿಸಿದ ಅವರು, 'ಉತ್ತರ ನೀಡಲು ನಾನು ತಾಂತ್ರಿಕ ತಜ್ಞನಲ್ಲ. ನಾನು ಸಾಮಾನ್ಯ ಪದವೀಧರ. ರಸ್ತೆ ಅವೈಜ್ಞಾನಿಕವಾಗಿ ಎಂದರೆ ನಾನೇನು ಉತ್ತರ ನೀಡಲಿ. ಆ ಬಗ್ಗೆ ಕೇಂದ್ರ ಸಚಿವರು, ಇಲಾಖೆ ಅಧಿಕಾರಿಗಳು ಮಾತನಾಡಬೇಕು' ಎಂದರು.

'ಅಕ್ರಮ ಗಣಿಗಾರಿಕೆ ನಡೆಸುತ್ತಿರುವವರು ಎಷ್ಟೇ ಬಲಾಢ್ಯರಾಗಿದ್ದರೂ ಕ್ರಮ ಕೈಗೊಳ್ಳುವಂತೆ ನಾನೇ ಸರ್ಕಾರಕ್ಕೆ ತಿಳಿಸಿದ್ದೇನೆ. ಈ ವಿಚಾರವಾಗಿ ನಾನು ಒಂದು ಹೇಳಿಕೆ ನೀಡುವುದು, ಅದಕ್ಕೆ ಸುಮಲತಾ ಅವರೊಂದು ಕಥೆ ಹೇಳುವುದು, ಪಾಪ ಹೆಣ್ಣು ಮಗಳ ಬಗ್ಗೆ ನಾನೇಕೆ ಮಾತನಾಡಲಿ? ನಾನು ಸಂಸ್ಕೃತಿ ಬೇರೆ ಕಲಿಯಬೇಕಾಗಿದೆ' ಎಂದು ವ್ಯಂಗ್ಯವಾಡಿದರು.

ಯಾದಗಿರಿ ಜಿಲ್ಲೆಯಲ್ಲಿ ಕೇಂದ್ರ ಸಚಿವ ಭಗವಂತ ಖೂಬಾ ಅವರನ್ನು ಸ್ವಾಗತಿಸುವ ವೇಳೆ ಗಾಳಿಯಲ್ಲಿ ಗುಂಡು ಹಾರಿಸಿರುವ ಬಗ್ಗೆ ಪ್ರತಿಕ್ರಿಯಿಸಿ, 'ಈ ಪ್ರಕರಣ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಮುಂದಿನ ದಿನಗಳು ಹೇಗಿರಬಹುದು ಎಂಬ ಬಗ್ಗೆ ಮುನ್ಸೂಚನೆ ನೀಡಿದೆ. ಭವಿಷ್ಯದಲ್ಲಿ ಸಂಸ್ಕೃತಿ ಹೇಗಿರಲಿದೆ ಎಂಬುದನ್ನು ತಿಳಿಸಿದ್ದಾರೆ' ಎಂದುಕುಹಕವಾಡಿದರು.

'ದುಡ್ಡು ಹೊಡೆಯುವ ಯೋಜನೆ'

'ಮಹಾನಾಯಕ ರಮೇಶ್‌ಕುಮಾರ್ ಎತ್ತಿನಹೊಳೆ ಯೋಜನೆಯಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ 3 ವರ್ಷದಲ್ಲಿ ನೀರು ಹರಿಸುತ್ತೀನಿ ಎಂದಿದ್ದರು. ಆದರೆ, ಈಗ ಈ ಯೋಜನೆ ಏನಾಗಿದೆ ಎಂಬುದು ತಿಳಿದಿದೆಯೇ? ಎತ್ತಿನಹೊಳೆ ದುಡ್ಡು ಹೊಡೆಯುವ ಯೋಜನೆಯಾಗಿದೆ. ಈ ಯೋಜನೆಗೆ 50 ಸಾವಿರ ಕೋಟಿ ಖರ್ಚು ಮಾಡಿದರೂ ಅವಿಭಜಿತ ಜಿಲ್ಲೆಗೆ ನೀರು ತರಲು ಸಾಧ್ಯವಿಲ್ಲ' ಎಂದು ಕುಮಾರಸ್ವಾಮಿ ಹೇಳಿದರು.

'ಎತ್ತಿನಹೊಳೆ ಯೋಜನೆ ಬಗ್ಗೆ ಹಿಂದೆಯೇ ನಾನು, ರಮೇಶ್‌ಕುಮಾರ್ ಕೋಲಾರ ಮತ್ತು -ಚಿಕ್ಕಬಳ್ಳಾಪುರ ಜನರ ಹೆಸರಿನಲ್ಲಿ ದುಡ್ಡು ಹೊಡೆಯುವ ಯೋಜನೆ ಮಾಡುತ್ತಿದ್ದಾರೆ ಎಂದು ಹೇಳಿದ್ದೆ. ಅದೇ ಪ್ರಕಾರ ಯೋಜನಾ ವೆಚ್ಚ ₹ 8 ಸಾವಿರ ಕೋಟಿಯಿಂದ 12 ಸಾವಿರ ಕೋಟಿಗೆ ಏರಿಕೆಯಾಗಿತ್ತು. ಇದೀಗ ₹ 20 ಸಾವಿರ ಕೋಟಿ ದಾಟಿದೆ' ಎಂದು ಹೇಳಿದರು.

'ಯೋಜನೆ ಘೋಷಣೆಯಾಗಿ ಒಂದು ದಶಕವಾದರೂ ಕಾಮಗಾರಿಯಲ್ಲಿ ಏನು ಪ್ರಗತಿಯಾಗಿದೆ ಎಂಬುದನ್ನು ರಮೇಶ್‌ಕುಮಾರ್ ಗಮನಿಸಿದ್ದಾರಾ? ತುಮಕೂರು ಜಿಲ್ಲೆಯ ಬೈರಗೊಂಡ್ಲು ಬಳಿ 10 ಟಿಎಂಸಿ ನೀರು ಸಂಗ್ರಹಿಸಲು ಜಲಾಶಯ ನಿರ್ಮಿಸುವುದಾಗಿ ಹೇಳಿದ್ದರು. ಅರಣ್ಯ ಜಮೀನಿನ ಕಾರಣ ನೀಡಿ 5 ಟಿಎಂಸಿಗೆ ಹಾಗೂ ರೈತರಿಗೆ ಭೂಪರಿಹಾರ ನೀಡಬೇಕೆಂದು 2 ಟಿಎಂಸಿಗೆ ಇಳಿಸಿದ್ದಾರೆ' ಎಂದು ಕುಟುಕಿದರು.

ನಿರಾಣಿ ವಿರುದ್ಧ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಿಂದೂ ದೇವತೆಗಳ ವಿರುದ್ಧ ಆಕ್ಷೇಪಾರ್ಹ ಸಂದೇಶ ರವಾನಿಸಿದ ಆರೋಪದ ಬಗ್ಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ವಿರುದ್ಧ ತನಿಖೆ ನಡೆಸುವಂತೆ ಕೊಡಿಗೇಹಳ್ಳಿ ಪೊಲೀಸ್ ಠಾಣೆಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಗೋವಿಂದರಾಮ್ ಎಂಬುವರು ಸಲ್ಲಿಸಿದ್ದ ಖಾಸಗಿ ದೂರು ವಿಚಾರಣೆ ನಡೆಸಿದ ನ್ಯಾಯಾಲಯ, ಸೆ.13ರೊಳಗೆ ತನಿಖಾ ವರದಿ ಸಲ್ಲಿಸಲು ಸೂಚನೆ ನೀಡಿದೆ.

'ಹಿಂದೂ ದೇವತೆಗಳನ್ನು ಅವಹೇಳನ ಮಾಡುವ ಸಂದೇಶವನ್ನು ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ನಿರಾಣಿ ಅವರು ರವಾನಿಸಿದ್ದು, ಅವರ ವಿರುದ್ಧ ಐಪಿಸಿ ಸೆಕ್ಷನ್ 153, 259, 259ಎ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಕೊಡಿಗೇಹಳ್ಳಿ ಠಾಣೆಯಲ್ಲಿ ಈ ಸಂಬಂಧ ಎಫ್‌ಐಆರ್ ದಾಖಲಾಗುವ ಸಾಧ್ಯತೆ ಇದೆ.

'ಅಪಮಾನ ಮಾಡಿಲ್ಲ; ತನಿಖೆಗೆ ಸಹಕಾರ'

'ಹಿಂದೂ ಧರ್ಮ ಹಾಗೂ ದೇವತೆಗಳ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿರುವ ನಾನು ಧರ್ಮ ಮತ್ತು ದೇವತೆಗಳಿಗೆ ಅಪಮಾನ ಮಾಡಿಲ್ಲ. ಇದು ಅಚಾತುರ್ಯದಿಂದ ಆಗಿರುವ ಪ್ರಮಾದವೇ ಹೊರತು ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ' ಎಂದು ಸಚಿವ ಮುರುಗೇಶ ನಿರಾಣಿ ತಿಳಿಸಿದ್ದಾರೆ.

'ದೇಶದ ಕಾನೂನಿಗಿಂತ ಯಾರೂ ಕೂಡ ದೊಡ್ಡವರಿಲ್ಲ.ಈ ನೆಲದ ಜವಾಬ್ದಾರಿಯುತ ಪ್ರಜೆಯಾಗಿ,ನ್ಯಾಯಾಲಯ ನೀಡಿರುವ ಆದೇಶಕ್ಕೆ ಬದ್ಧನಾಗಿದ್ದೇನೆ. ಪೊಲೀಸರ ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇನೆ' ಎಂದು ಹೇಳಿದ್ದಾರೆ.

ಪ್ಲಾಸ್ಟಿಕ್ ಮುಕ್ತ ಗ್ರಾಮಕ್ಕೆ ಪಣ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಪ್ಲಾಸ್ಟಿಕ್ ಕೈಚೀಲಗಳನ್ನು ಸಂಪೂರ್ಣವಾಗಿ ತೊರೆದು ಪರಿಸರ ಉಳಿಸಿಲು ಹುರುಳಿಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿಯ ಮೊದಲ ಸುತ್ತಿನ ಗ್ರಾಮಸಭೆಯಲ್ಲಿ ಗ್ರಾಮಸ್ಥರು ಪಣ ತೊಟ್ಟರು.

'ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪ್ರತಿ ಮನೆಗಳಿಗೆ ಬಟ್ಟೆ ಚೀಲಗಳನ್ನು ವಿತರಿಸುವ ಯೋಜನೆ ಸಿದ್ದಪಡಿಸಲಾಗಿದೆ. ಪಂಚಾಯಿತಿಯಲ್ಲಿ ಅಲ್ಪಾವಧಿಯ ಫ್ಯಾಷನ್ ಹೊಲಿಗೆ ತರಬೇತಿಯನ್ನು ಮಹಿಳೆಯರಿಗೆ ನೀಡಲಾಗುತ್ತದೆ. ತರಬೇತಿ ಪಡೆದ ಮಹಿಳೆಯರಿಗೆ ಬಟ್ಟೆ ಕೈ ಚೀಲಗಳನ್ನು ಹೊಲೆಯುವ ಕೆಲಸ ಕೊಡಲಾಗುತ್ತದೆ. ತರಬೇತಿ ಪಡೆದು ಮನೆಯಲ್ಲಿ ಸುಮ್ಮನೆ ಕೂರುವ ಬದಲು ಕೈಗೆ ಕೆಲಸ ನೀಡಿದರೆ ಮಹಿಳೆಯರಿಗೂ ಹೆಚ್ಚು ಅನುಕೂಲವಾಗುತ್ತದೆ. ಆ ಮೂಲಕ ಇಡೀ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಪ್ಲಾಸ್ಟಿಕ್ ಮುಕ್ತ ಗ್ರಾಮವಾಗಿಸಲು ಸಾಧ್ಯವಾಗುತ್ತದೆ' ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾರಾಯಣಸ್ವಾಮಿ ತಿಳಿಸಿದರು.

'ಸೋಲದೇವನಹಳ್ಳಿ ಗ್ರಾಮದಲ್ಲಿರುವ ಆಚಾರ್ಯ ಕಾಲೇಜಿನ ಸಮಾಜ ಕಾರ್ಯ ವಿಭಾಗವು ಐದು ಸಾವಿರ ಬಟ್ಟೆಯ ಕೈ ಚೀಲಗಳನ್ನು ತಯಾರಿಸಲು ನೆರವು ನೀಡಿದೆ. ನಮ್ಮ ಪರಿಸರವನ್ನು ಪ್ಲಾಸ್ಟಿಕ್ ಮುಕ್ತವಾಗಿಸುವುದು ನಮ್ಮ ಗುರಿ' ಎಂದು ಅವರು ಹೇಳಿದರು.

ಪಂಚಾಯಿತಿ ಅಧ್ಯಕ್ಷ ರಘು ಮಾತನಾಡಿ, 'ಗ್ರಾಮ ಪಂಚಾಯಿತಿಯನ್ನು ಮಾದರಿ ಗ್ರಾಮ ಪಂಚಾಯಿತಿಯಾಗಿ ಕಟ್ಟಲು ಶ್ರಮವಹಿಸಲಾಗುವುದು. ಜನರ ಕುಂದುಕೊರತೆಗಳಿಗೆ ಪರಿಹಾರ ಮಾರ್ಗಗಳನ್ನು ಕಂಡುಕೊಂಡು ಅಭಿವೃದ್ದಿಯತ್ತ ಹೆಜ್ಜೆ ಹಾಕಲಾಗುವುದು' ಎಂದರು.



ಬಟ್ಟೆ ಕೈ ಚೀಲಗಳನ್ನು ಪಂಚಾಯಿತಿ ಅಧ್ಯಕ್ಷ ರಘು, ಉಪಾಧ್ಯಕ್ಷರಾದ ಲತಾ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾರಾಯಣ ಸ್ವಾಮಿ ಹಾಗೂ ಇಲಾಖೆಗಳ ಅಧಿಕಾರಿಗಳು ಪ್ರದರ್ಶಿಸಿದರು

ವರಮಹಾಲಕ್ಷ್ಮಿ ಹಬ್ಬದ ಖರೀದಿಗೆ ಗ್ರಾಹಕರ ದಂಡು– ಏರಿದ ದರ

ಮಾರುಕಟ್ಟೆಗಳಲ್ಲಿ ಕಳೆಗಟ್ಟಿದ ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬದ ಸಂದರ್ಭದಲ್ಲಿ ಹೂವು ಮತ್ತು ಹಣ್ಣಿನ ದರಗಳು ಗಗನಕ್ಕೇರಿವೆ. ಹಬ್ಬಕ್ಕೂ ಎರಡು ದಿನ ಮುನ್ನವೇ ಗ್ರಾಹಕರು ಮಾರುಕಟ್ಟೆಗಳಲ್ಲಿ ಖರೀದಿಗೆ ಮುಗಿಬಿದ್ದರು.

ಪ್ರತಿವರ್ಷ ಹಬ್ಬಕ್ಕೂ ಹಿಂದಿನ ಐದು ದಿನಗಳಿಂದಲೇ ಮಾರುಕಟ್ಟೆಗಳಲ್ಲಿ ಹಬ್ಬಕ್ಕೆ ಬೇಕಾದ ವಸ್ತುಗಳ ಖರೀದಿ ಗರಿಗೆದರುತ್ತಿತ್ತು. ನಗರದ ವಿವಿಧ ಸ್ಥಳಗಳಲ್ಲಿ ಕಿರು ಮಾರುಕಟ್ಟೆಗಳು ತಲೆ ಎತ್ತುತ್ತಿದ್ದವು.

ಕೆ.ಆರ್. ಮಾರುಕಟ್ಟೆಯಲ್ಲಿ ನಡೆದಾಡಲು ಕಷ್ಟವೆಂಬಂತೆ ಗ್ರಾಹಕರು ಬುಧವಾರ ಸಂಜೆ ಜಮಾಯಿಸಿದ್ದರು. ಈ ಬಾರಿ ವರಮಹಾಲಕ್ಷ್ಮಿ ವ್ರತ ಹಾಗೂ ಓಣಂ ಹಬ್ಬಗಳು ಸರತಿಯಾಗಿ ಬಂದಿವೆ. ಹಾಗಾಗಿ, ಹಬ್ಬದ ಖರೀದಿಗೆ ಬಂದಿದ್ದ ಗ್ರಾಹಕರ ಪ್ರಮಾಣ ಹೆಚ್ಚಾಗಿತ್ತು.

ಕೋವಿಡ್ ಕಾರಣದಿಂದ ಮಾರುಕಟ್ಟೆಯ ಅಕ್ಕಪಕ್ಕದ ರಸ್ತೆಗಳಲ್ಲಿ ವ್ಯಾಪಾರ ನಡೆಸಲು ಈ ಬಾರಿ ಅವಕಾಶ ನೀಡಿರಲಿಲ್ಲ. ಬಿಬಿಎಂಪಿ ಮಾರ್ಷಲ್‌ಗಳು ಗಸ್ತು ತಿರುಗುತ್ತಾ ಅಂತರ ಕಾಯ್ದುಕೊಳ್ಳದವರಿಗೆ ಹಾಗೂ ಮಾಸ್ಕ್ ಧರಿಸದವರಿಗೆ ದಂಡ ವಿಧಿಸುತ್ತಿದ್ದರು.

ವರಮಹಾಲಕ್ಷ್ಮಿ ಹಬ್ಬದಂದು ಮನೆಗಳಲ್ಲಿ ಲಕ್ಷ್ಮಿ ಮೂರ್ತಿಗಳನ್ನು ಕೂರಿಸಿ, ಪೂಜಿಸುವುದು ವಾಡಿಕೆ. ಈ ವೇಳೆ ಅಲಂಕಾರಕ್ಕಾಗಿ ತರಹೇವಾರಿ ಹೂಗಳು ಮತ್ತು ಹಣ್ಣನ್ನು ಬಳಸುತ್ತಾರೆ. ಹಾಗಾಗಿ, ಪ್ರತಿ ವರ್ಷದಂತೆ ಈ ಬಾರಿಯೂ ಹೂವು ಮತ್ತು ಹಣ್ಣಿನ ದರಗಳು ಏರಿವೆ.

'ಹಬ್ಬಕ್ಕೆ ಎರಡು ದಿನ ಇರುವಾಗಲೇ ಮಾರುಕಟ್ಟೆ ಗ್ರಾಹಕರಿಂದ ತುಂಬಿರುತ್ತಿತ್ತು. ಈ ಹಬ್ಬದಲ್ಲೇ ಹೂವಿನ ಬೆಳೆಗಾರರು ಮತ್ತು ವರ್ತಕರು ಕೊಂಚ ಲಾಭ ಕಾಣುತ್ತಾರೆ. ಈ ವರ್ಷವೂ ಹೂವಿನ ದರಗಳು ದುಬಾರಿಯಾಗಿವೆ. ಹಬ್ಬದ ವೇಳೆ ಇರುತ್ತಿದ್ದ ಗ್ರಾಹಕರ ದಂಡು ಬುಧವಾರ ಕಂಡೆವು' ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆಯ ಹೂವಿನ ವರ್ತಕ ಗೋಪಿ.

'ಐದು ದಿನಗಳಿಂದ ಹೂವಿನ ದರಗಳು ಏರಿಕೆ ಕಂಡಿವೆ. ಕೋವಿಡ್ ಕಾರಣದಿಂದ ಮಾರುಕಟ್ಟೆಗೆ ಬರುತ್ತಿರುವ ಗ್ರಾಹಕರ ಸಂಖ್ಯೆ ಕ್ರಮೇಣ ಏರುತ್ತಿದೆ. ಶುಕ್ರವಾರ ಹಬ್ಬ ಇರುವುದರಿಂದ ಗುರುವಾರದ ವೇಳೆಗೆ ಗ್ರಾಹಕರು ಸಂಖ್ಯೆ ಮತ್ತಷ್ಟು ಏರುವ ನಿರೀಕ್ಷೆ ಇದೆ' ಎಂದರು.

ಹೂಗಳು ಗಗನಮುಖಿ: ಕಳೆದ ವರ್ಷದ ವರಮಹಾಲಕ್ಷ್ಮಿ ಹಬ್ಬದ ಸಂದರ್ಭದಲ್ಲಿ ಮಲ್ಲಿಗೆ ದರ ಗರಿಷ್ಠ ₹400ರವರೆಗೆ ಮಾರಾಟವಾಗಿತ್ತು. ಈ ಬಾರಿ ಮಲ್ಲಿಗೆ ಹಾಗೂ ಕನಕಾಂಬರ ದರಗಳು ಪ್ರತಿ ಕೆ.ಜಿ.ಗೆ ₹800ರಿಂದ ₹1,200ರವರೆಗೆ ಮಾರಾಟ ಆಗುತ್ತಿವೆ. ಸೇವಂತಿಗೆ, ಗುಲಾಬಿ, ಸುಗಂಧರಾಜ ದರಗಳು ₹250ರ ಆಸುಪಾಸಿನಲ್ಲಿವೆ.

ಹಬ್ಬದಲ್ಲಿ ಲಕ್ಷ್ಮಿ ಪೂಜೆಯ ವೇಳೆ ಬಗೆಬಗೆಯ ಹಣ್ಣುಗಳನ್ನು ಜೋಡಿಸುವುದರಿಂದ ಹಣ್ಣಿನ ದರಗಳೆಲ್ಲ ಸ್ವಲ್ಪ ಏರಿವೆ. ತರಕಾರಿಗಳ ಪೈಕಿ ಕೆಲವು ದರಗಳು ಮಾತ್ರ ಏರಿಳಿತ ಕಂಡಿವೆ. ಉಳಿದ ತರಕಾರಿ ದರಗಳೆಲ್ಲ ಸ್ಥಿರವಾಗಿವೆ. ಸೊಪ್ಪಿನ ದರಗಳೂ ಇಳಿಕೆ ಕಂಡಿದ್ದು, ಮೆಂತ್ಯೆ ಸೊಪ್ಪಿನ ದರ ತುಸು ಹೆಚ್ಚಾಗಿದೆ.



ವರಮಹಾಲಕ್ಷ್ಮಿ ಹಬ್ಬದ ಹಿನ್ನಲೆಯಲ್ಲಿ ಜನರು ಹೂ, ಹಣ್ಣು ಮತ್ತು ತರಕಾರಿ ಖರೀದಿಯಲ್ಲಿ ತೊಡಗಿದ್ದ ದೃಶ್ಯ ಕೆ. ಆರ್ ಮಾರುಕಟ್ಟೆಯಲ್ಲಿ ಬುಧವಾರ ಕಂಡು ಬಂತು – ಪ್ರಜಾವಾಣಿ ಚಿತ್ರ/ ಅನುಪ್ ರಾಘ.ಟಿ.

ಹೂವಿನ ದರಗಳು (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ಕನಕಾಂಬರ	1,200
ಮಲ್ಲಿಗೆ	1,000
ಸೇವಂತಿಗೆ	250
ಗುಲಾಬಿ	250
ಸುಗಂಧರಾಜ	200
ತಾವರೆ	20 (ಒಂದಕ್ಕೆ)
ಡೇರಾ	15 (ಒಂದಕ್ಕೆ)

ಹಣ್ಣು	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಸೇಬು	150	174
ದಾಳಿಂಬೆ	140	213
ದ್ರಾಕ್ಷಿ	80	148
ಸೀಬೆ	50	60
ಸಪೋಟ	50	74
ಸೀತಾಫಲ	60	60
ಮೂಸಂಬಿ	50	52
ಏಲಕ್ಕಿ ಬಾಳೆ	52	55
ಅನಾನಸ್	40	47

ಸೊಪ್ಪು	ಚಿಲ್ಲರೆ (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ಕೊತ್ತಂಬರಿ	15	40
ಸಬ್ಬಕ್ಕಿ	15	52
ಮೆಂತ್ಯೆ	18	83
ದಂಟು	15	48
ಪಾಲಕ್	15	52

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಬೆಳ್ಳುಳ್ಳಿ	80	158
ಶುಂಠಿ	60	65
ಕ್ಯಾರೆಟ್	70	80
ಬದನೆ	50	56
ಬೀನ್ಸ್	30	30
ಬೆಂಡೆಕಾಯಿ	20	26
ಹೂಕೋಸು	35	52
ಈರುಳ್ಳಿ	30	36
ಆಲೂಗಡ್ಡೆ	25	28
ಎಲೆಕೋಸು	15	22
ಮೂಲಂಗಿ	20	31
ಟೊಮೆಟೊ	10	15

ಪಿಯುಸಿ : ಮೊದಲ 3 ದಿನ ಶೇ 50ರಷ್ಟು ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಪೂರ್ವ ಕಾಲೇಜುಗಳು ಇದೇ 23ರಿಂದ ಆರಂಭವಾಗಲಿದ್ದು, ಕೋವಿಡ್ ಹಿನ್ನೆಲೆಯಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆಗಳಿಗೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ಬುಧವಾರ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣಾ ವಿಧಾನ) ಬಿಡುಗಡೆ ಮಾಡಿದೆ.

ಎಸ್‌ಒಪಿ ಅನ್ವಯ, ಕಾಲೇಜುಗಳು ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಯನ್ನು ಏಕಕಾಲದಲ್ಲಿ ನಡೆಸಬೇಕು. ತರಗತಿಗೆ ಹಾಜರಾಗಲು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ಮತ್ತು ಪೋಷಕರ ಸಮ್ಮತಿ ಪತ್ರ ನೀಡಲೇಬೇಕು. ಅಲ್ಲದೆ, ತಮ್ಮ ಮಕ್ಕಳಿಗೆ ಕೋವಿಡ್ ಲಕ್ಷಣ ಇಲ್ಲ ಎಂದೂ ಪೋಷಕರು ದೃಢೀಕರಣ ಪತ್ರ ನೀಡಬೇಕು.

ಪ್ರತಿ ತರಗತಿಯ ಶೇ 50 ರಷ್ಟು ವಿದ್ಯಾರ್ಥಿಗಳು ಮೊದಲ 3 ದಿನ (ಸೋಮವಾರ, ಮಂಗಳವಾರ, ಬುಧವಾರ), ಉಳಿದ ಶೇ 50ರಷ್ಟು ವಿದ್ಯಾರ್ಥಿಗಳು ನಂತರದ ಮೂರು ದಿನ (ಗುರುವಾರ, ಶುಕ್ರವಾರ, ಶನಿವಾರ) ತರಗತಿಗಳಿಗೆ ಹಾಜರಾಗಬೇಕು. ತರಗತಿಗೆ ಹಾಜರಾಗದ ದಿನಗಳಲ್ಲಿ ಮನೆಯಲ್ಲಿಯೇ ಆನ್‌ಲೈನ್ ತರಗತಿಗೆ ಹಾಜರಾಗಬೇಕು.

ವಿದ್ಯಾರ್ಥಿಗಳ ಸಂಖ್ಯೆ 100ಕ್ಕಿಂತ ಕಡಿಮೆ ಇದ್ದು, ವಿಶಾಲವಾದ ಕೊಠಡಿ ಇದ್ದರೆ, ಎಲ್ಲ ವಿದ್ಯಾರ್ಥಿಗಳಿಗೆ ಭೌತಿಕ ತಗರಗತಿಗಳನ್ನು ವಾರ ಪೂರ್ತಿ ನಡೆಸಬಹುದು. ಸ್ಥಳೀಯ ಪರಿಸ್ಥಿತಿಗೆ ಅನುಸಾರವಾಗಿ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯಗೊಳಿಸಬೇಕು ಎಂದೂ ಎಸ್‌ಒಪಿಯಲ್ಲಿ ತಿಳಿಸಲಾಗಿದೆ.

ಕೆಪಿಟಿಸಿಎಲ್: ಪರಾಮರ್ಶೆ ಸಭೆ ನಡೆಸಿದ ಇಂಧನ ಸಚಿವ ಸುನಿಲ್‌ಕುಮಾರ್

ಪಡಿತರ ಚೀಟಿ ಹೊಂದಿರುವ ಮನೆಗಳಿಗೂ ವಿದ್ಯುತ್ ಸಂಪರ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಎಲ್ಲ ಮನೆಗಳಿಗೂ ವಿದ್ಯುತ್ ಸಂಪರ್ಕ ನೀಡಲಾಗುವುದು ಎಂದು ಇಂಧನ ಸಚಿವ ಸುನಿಲ್ ಕುಮಾರ್ ಹೇಳಿದ್ದಾರೆ.

ನಗರದ ಕೆಪಿಟಿಸಿಎಲ್ ಕಚೇರಿಯ ಸಮ್ಮೇಳನ ಸಭಾಂಗಣದಲ್ಲಿ ಬುಧವಾರ ಇಂಧನ ಇಲಾಖೆ, ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಅದರ ಅಂಗಸಂಸ್ಥೆಗಳ ಕಾರ್ಯನಿರ್ವಹಣೆ ಪರಾಮರ್ಶೆ ಸಭೆ ನಡೆಸಿದ ಬಳಿಕ ಅವರು ಮಾತನಾಡಿದರು.

ಬಿಪಿಎಲ್ ಪಡಿತರ ಚೀಟಿ ಹೊಂದಿದ್ದೂ ವಿದ್ಯುತ್ ಸಂಪರ್ಕ ಸಿಕ್ಕಿಲ್ಲವಾದರೆ, ಅಂತಹ ಮನೆಗಳನ್ನು ಗುರುತಿಸಿ ವಿದ್ಯುತ್ ಸಂಪರ್ಕ ನೀಡಬೇಕು ಎಂದು ಸೂಚಿಸಿದರು.



ಕೆಜಿಎಫ್ ಉಪವಿಭಾಗದಲ್ಲಿ ಜುಲೈ ತಿಂಗಳಲ್ಲಿ ಅತ್ಯುತ್ತಮ ಕಾರ್ಯ ನಿರ್ವಹಣೆ ಮಾಡಿದ ಸಹಾಯಕ ಎಂಜಿನಿಯರ್ ಹೇಮಲತಾ ಅವರಿಗೆ ಪ್ರಶಸ್ತಿ ಮತ್ತು ₹10 ಸಾವಿರ ಬಹುಮಾನವನ್ನು ಸಚಿವ ಸುನಿಲ್‌ಕುಮಾರ್ ನೀಡಿದರು

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಲಾಖೆಗೆ ಸಂಬಂಧಿಸಿದಂತೆ ಆಯವ್ಯಯದಲ್ಲಿ ಘೋಷಿಸಿರುವ ಕಾರ್ಯಕ್ರಮಗಳು ಮತ್ತು ಕೇಂದ್ರ ಸರ್ಕಾರದ ಸಹಯೋಗದ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚನೆ ಸೂಚಿಸಿದರು.

ಟ್ರಾನ್ಸ್‌ಫಾರ್ಮರ್‌ಗಳ ಕೆಟ್ಟು ಹೋಗುತ್ತಿರುವ ಮತ್ತು ಬದಲಾಯಿಸುವುದಕ್ಕೆ ಸಂಬಂಧಿಸಿದಂತೆ ಸಾಕಷ್ಟು ದೂರುಗಳು ಬರುತ್ತಿವೆ. ಅವುಗಳ ಬಗ್ಗೆ ತಕ್ಷಣವೇ ಕ್ರಮಕೈಗೊಳ್ಳಬೇಕು. ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ ಸಲ್ಲಿಕೆಯಾಗಬೇಕಾಗಿರುವ ಪ್ರಸ್ತಾವನೆಗಳನ್ನೂ ನಿಗದಿತ ಕಾಲಾವಧಿಯೊಳಗೇ ಸಲ್ಲಿಸಲು ಕ್ರಮ ಕೈಗೊಳ್ಳಬೇಕೆಂದು ಸುನಿಲ್ ಹೇಳಿದರು.

ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡುವ ಕೆಲಸವೂ ಕಾಲಮಿತಿಯೊಳಗೆ ಮತ್ತು ಪರಿಣಾಮಕಾರಿಯಾಗಿ ಆಗಬೇಕು. ವಿದ್ಯುತ್ ಸೋರಿಕೆ ತಡೆಗಟ್ಟಬೇಕು. ವಿದ್ಯುತ್ ಸಂಪರ್ಕ ಮತ್ತು ಮೀಟರ್ ಅಳವಡಿಕೆಯಲ್ಲಿಆಗುತ್ತಿರುವವಿಳಂಬವನ್ನುತಡೆಯಬೇಕು ಎಂದು ಸಲಹೆ ನೀಡಿದರು.

ರೀಚಾರ್ಜ್ ಕೇಂದ್ರಗಳ ಆರಂಭಕ್ಕೆ ಆದ್ಯತೆ

ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಚಾಲಿತ ವಾಹನಗಳು ಹೆಚ್ಚಿನ ಪ್ರಮಾಣದಲ್ಲಿ ತಯಾರಿಕೆ ಆಗುತ್ತಿರುವುದರಿಂದ ಇಂತಹ ವಾಹನಗಳ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಲು ಆದ್ಯತೆ ನೀಡಬೇಕು. ಈಗಾಗಲೇ ಗುರುತಿಸಿರುವ ಸ್ಥಳಗಳಲ್ಲಿ ವಿದ್ಯುತ್ ರೀಚಾರ್ಜಿಂಗ್ ಮಾಡುವ ಕಾರ್ಯಕ್ಕೆ ವೇಗ ನೀಡಬೇಕು ಎಂದು ಸುನಿಲ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಹಕ ಸಂಬಂಧಿ ಸಮಸ್ಯೆಗಳ ಪರಿಹಾರ, ಹೊಸ ವಿದ್ಯುತ್ ಸಂಪರ್ಕ ನೀಡಿಕೆ ಸೇರಿದಂತೆ ವಿವಿಧ ಸೇವೆಗಳನ್ನು ಒಂದೇ ಕಡೆ 24 ಗಂಟೆಯೊಳಗೆ ಒದಗಿಸುವ ಫಾಸ್ಟ್‌ಟ್ರಾಕ್ ಸೆಲ್ ಅನ್ನು ಕೂಡಲೇ ಆರಂಭಿಸಲು ಸಚಿವರು ಆದೇಶಿಸಿದರು.

ಕಾಂಗ್ರೆಸ್‌ನಿಂದ ಗೂಂಡಾಗಿರಿ ಪ್ರವೃತ್ತಿ: ಕಾರ್ಣಿಕ್

ಬೆಂಗಳೂರು: ಲೋಕಸಭೆ ಮತ್ತು ರಾಜ್ಯಸಭೆಯ ಕಲಾಪದ ವೇಳೆ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ, ದಾಂಧಲೆ ನಡೆಸಿದ ಕಾಂಗ್ರೆಸ್ ಗೂಂಡಾಗಿರಿ ಪ್ರವೃತ್ತಿಯನ್ನು ದೇಶಕ್ಕೆ ಪ್ರದರ್ಶಿಸಿದೆ ಎಂದು ರಾಜ್ಯ ಬಿಜೆಪಿಯ ಮುಖ್ಯ ವಕ್ತಾರ ಗಣೇಶ್ ಕಾರ್ಣಿಕ್ ಕಿಡಿ ಕಾರಿದ್ದಾರೆ.

ಆದರೆ, ಸಂಸದ ಎಲ್. ಹನುಮಂತಯ್ಯ ಮತ್ತು ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಬಿಜೆಪಿ ಕುರಿತು ಆಡಿರುವ ಮಾತುಗಳು ದೆವ್ವದ ಬಾಯಿಯಿಂದ ಬೈಬಲ್ ನುಡಿದಂತಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಕಲಾಪ ಧಿಕ್ಕರಿಸಿದ್ದು ಮಾತ್ರವಲ್ಲದೇ ಯಾವುದೇ ಚರ್ಚೆ ನಡೆಯದಂತೆ ತಡೆಯೊಡ್ಡಿ ಸಭ್ಯತೆಯ ಎಲ್ಲೆ ಮೀರಿದೆ ಎಂದು ಕಾರ್ಣಿಕ್ ಹೇಳಿದ್ದಾರೆ.

ಗುರುವಾರ, ಆಗಸ್ಟ್ 19, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 231 | ಪುಟ 14 + 2

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾದವರ ನೋಟ್ಸ್ ಮೇಲೆ ಕಣ್ಣಾಡಿಸಿ ಎನ್ನುತ್ತಾರೆ ಸೇನೆಯಿಂದ ನಿವೃತ್ತರಾದ ನಂತರ ಪರೀಕ್ಷೆ ಬರೆದು ಯಶ ಸಾಧಿಸಿದ ಕೆಎಎಸ್ ಅಧಿಕಾರಿ ಕಲಗೌಡ ಪಾಟೀಲ



ಸೆನ್ಸೆಕ್ಸ್	ನಿಫ್ಟಿ	₹/$
55,629 ▼	16,568 ▼	74.24 ▲

ಗುಜರಿಗೆ ವಾಹನ: ರಸ್ತೆ ತೆರಿಗೆ ವಿನಾಯ್ತಿಗೆ ಶೀಘ್ರ ಸೂಚನೆ

ನವದೆಹಲಿ (ಪಿಟಿಐ): ಹೊಸ ಗುಜರಿ ನೀತಿ ಅನ್ವಯ, ಹಳೆ ವಾಹನಗಳನ್ನು ಗುಜರಿಗೆ ಹಾಕಿದ ಬಳಿಕ ಖರೀದಿಸುವ ಹೊಸ ವೈಯಕ್ತಿಕ ವಾಹನಗಳಿಗೆ ರಸ್ತೆ ತೆರಿಗೆಯಲ್ಲಿ ಶೇ 25ರವರೆಗೆ ಮತ್ತು ವಾಣಿಜ್ಯ ಉದ್ದೇಶದ ವಾಹನಗಳಿಗೆ ಶೇ 15ರವರೆಗೆ ವಿನಾಯಿತಿ ನೀಡುವಂತೆ ಕೇಂದ್ರ ಸರ್ಕಾರವು ಶೀಘ್ರದಲ್ಲಿಯೇ ರಾಜ್ಯ ಸರ್ಕಾರಗಳನ್ನು ಕೋರಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

'ರಾಷ್ಟ್ರೀಯ ಆಟೊಮೊಬೈಲ್ ಗುಜರಿ ನೀತಿ ಅನುಷ್ಠಾನಗೊಂಡ ಬಳಿಕ ರಾಜ್ಯಗಳ ಆದಾಯವು ಹೆಚ್ಚಲಿದೆ. ಈ ಬಗ್ಗೆ ಯಾವುದೇ ರೀತಿಯ ಆತಂಕ ಬೇಡ' ಎಂದು ಅವರು ತಿಳಿಸಿದ್ದಾರೆ.

'ರಸ್ತೆ ತೆರಿಗೆಗೆ ವಿನಾಯಿತಿ ನೀಡುವಂತೆ ರಾಜ್ಯಗಳಿಗೆ ಕೇವಲ ಸಲಹೆ ನೀಡುತ್ತಿಲ್ಲ. ಇದಕ್ಕೆ ಸಂಬಂಧಿಸಿದ ನಿಯಮಾವಳಿಗಳಲ್ಲಿ ಬದಲಾವಣೆಗಳನ್ನು ತರುತ್ತೇವೆ' ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಮಿತ್ ವರದನ್ ಹೇಳಿದ್ದಾರೆ.

ಆರೋಗ್ಯ ಇಲಾಖೆ– 2017ರ ಕಾಯ್ದೆ ಉಲ್ಲಂಘಿಸಿದರೆ ಶಿಸ್ತುಕ್ರಮ: ಎಚ್ಚರಿಕೆ

ವರ್ಗಾವಣೆಗೆ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವರ್ಗಾವಣೆ ಪ್ರಕ್ರಿಯೆಯನ್ನು ಇನ್ನು ಮುಂದೆ ಕಡ್ಡಾಯವಾಗಿ ಕೌನ್ಸೆಲಿಂಗ್ ಮೂಲಕವೇ ನಡೆಸಬೇಕು ಎಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸೂಚಿಸಿದ್ದಾರೆ.

'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಕಾಯ್ದೆ – 2011'ರಲ್ಲಿರುವ ನಿಯಮಗಳ ಪ್ರಕಾರ ಇಲಾಖೆಯ ವ್ಯಾಪ್ತಿಯ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ಮಾತ್ರ ಕೈಗೊಳ್ಳಬೇಕು. ಈ ಕಾಯ್ದೆಯಲ್ಲಿರುವ ನಿಯಮಗಳಿಗೆ 2017ರಲ್ಲಿ ತಿದ್ದುಪಡಿ ತರಲಾಗಿದೆ. ಕಾಯ್ದೆಯ ಕಲಂ 5ರಲ್ಲಿ ಆಡಳಿತಾತ್ಮಕ ಹುದ್ದೆಗಳ ವರ್ಗಾವಣೆಗೆ ಮಾತ್ರ ಕೌನ್ಸೆಲಿಂಗ್‌ನಿಂದ ವಿನಾಯಿತಿ ನೀಡಲಾಗಿದೆ.

'ಈ ಕಾಯ್ದೆಯಲ್ಲಿರುವ ನಿಯಮಗಳ ಅನ್ವಯವೇ ಇನ್ನು ಮುಂದೆ ವರ್ಗಾವಣೆ ಪ್ರಕ್ರಿಯೆ ನಡೆಸಬೇಕು. ಕೌನ್ಸೆಲಿಂಗ್‌ನಿಂದ ವಿನಾಯಿತಿ ನೀಡಿರುವ ವರ್ಗಾವಣೆ ಪ್ರಸ್ತಾವಗಳನ್ನು ಮಾತ್ರ ಸಚಿವರಿಗೆ ಕಳುಹಿಸಬೇಕು. ಇತರೆ ವರ್ಗಾವಣೆ ಪ್ರಸ್ತಾವಗಳನ್ನು ಯಾವುದೇ ಕಾರಣಕ್ಕೂ ಕಳುಹಿಸಬಾರದು. ನಿಯಮ ಉಲ್ಲಂಘಿಸಿ ವರ್ಗಾವಣೆ ಪ್ರಸ್ತಾವನೆ, ಶಿಫಾರಸು ತಂದರೆ ಕಡತ ನಿರ್ವಹಿಸುವ ವಿಷಯ ನಿರ್ವಾಹಕರು ಸೇರಿದಂತೆ ಸಂಬಂಧಿಸಿದ ಎಲ್ಲರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು' ಎಂದು ಅವರು ಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

'ಇಲಾಖೆಯ ಆಡಳಿತದಲ್ಲಿ ದಕ್ಷತೆ ತಂದು, ಭ್ರಷ್ಟಾಚಾರ ಮುಕ್ತಗೊಳಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಪಾರದರ್ಶಕ ಹಾಗೂ ನಿಗದಿತ ಕಾಲಮಿತಿಯಲ್ಲಿ ಸಕ್ಷಮ ಪ್ರಾಧಿಕಾರಗಳ ಮೂಲಕವೇ ವರ್ಗಾವಣೆ ಮಾಡುವ ಕಾನೂನನ್ನು ಕಡ್ಡಾಯವಾಗಿ ಜಾರಿಗೊಳಿಸಲು ಉನ್ನತ ಅಧಿಕಾರಿಗಳ ಸಭೆಯಲ್ಲಿ ಸೂಚಿಸಲಾಗಿದೆ. ಈ ಸಂಬಂಧ ಈಗಾಗಲೇ ಆದೇಶ ಹೊರಡಿಸಲಾಗಿದೆ. ಶಿಫಾರಸು, ಲಾಬಿಗಳಿಗೆ ಇದರಿಂದ ತಡೆ ಬೀಳಲಿದೆ' ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

5ನೇ ಪುಟ ನೋಡಿ



ಇಲಾಖೆಯಲ್ಲಿ ಅನಿಯಮಿತ ವರ್ಗಾವಣೆಗೆ ತಡೆ ಹಾಕಿ ಕಾರ್ಯ ನಿರ್ವಹಣೆಯಲ್ಲಿ ಶಿಸ್ತು, ದಕ್ಷತೆ ತರುವ ಮೂಲಕ ಸಮರ್ಪಕ ಸೇವೆ ನೀಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

ಸರ್ಕಾರಿ ಆಸ್ಪತ್ರೆಯತ್ತ ತಜ್ಞ ವೈದ್ಯರ ನಿರಾಸಕ್ತಿ

ವಿವಿಧ ಹಂತಗಳ ಸರ್ಕಾರಿ ಆಸ್ಪತ್ರೆಗಳಿಗೆ ಮೇ– ಜೂನ್ ತಿಂಗಳಲ್ಲಿ ಆರೋಗ್ಯ ಇಲಾಖೆ ನೇಮಕಾತಿ ಮಾಡಿಕೊಂಡಿದ್ದ 692 ತಜ್ಞ ವೈದ್ಯರ ಪೈಕಿ, ನೇಮಕಾತಿ ಆದೇಶ ಪಡೆದ 364 ಜನ ಕರ್ತವ್ಯಕ್ಕೆ ಹಾಜರಾಗಿಲ್ಲ.

153 ಮಕ್ಕಳ ತಜ್ಞರ ಪೈಕಿ, 80 ವೈದ್ಯರು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ತಜ್ಞ ವೈದ್ಯರ ಜತೆ ನೇಮಕವಾಗಿದ್ದ 1,048 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಪೈಕಿ, 850 ವೈದ್ಯರು ಕೆಲಸಕ್ಕೆ ಸೇರಿದ್ದಾರೆ.

'ತಜ್ಞ ವೈದ್ಯರ ಪೈಕಿ, 17 ಮಂದಿ (ಐವರು ಮಕ್ಕಳ ತಜ್ಞರು, ತಲಾ ಒಬ್ಬರು ನೇತ್ರ ಮತ್ತು ಚರ್ಮ ರೋಗ ತಜ್ಞರು, ನಾಲ್ವರು ಅರಿವಳಿಕೆ, ಆರು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು) ಕರ್ತವ್ಯಕ್ಕೆ ಹಾಜರಾಗಲು ನಿಗಪಡಿಸಿದ್ದ ಕೊನೆ ದಿನವನ್ನು (ಜೂನ್ 16) ವಿಸ್ತರಿಸಿ, ಇನ್ನಷ್ಟು ಕಾಲಾವಕಾಶ ನೀಡುವಂತೆ ಮನವಿ ಮಾಡಿದ್ದಾರೆ. 35 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕೂಡಾ ಕರ್ತವ್ಯಕ್ಕೆ ಹಾಜರಾಗಲು ಸಮಯ ಕೇಳಿದ್ದಾರೆ' ಎಂದು ಇಲಾಖೆ ಮೂಲಗಳು ತಿಳಿಸಿವೆ.

'ಶಾಶ್ವತ ನೇಮಕಾತಿಗೆ ವೈದ್ಯರು ಬಾರದಿದ್ದರೂ 2020–21ನೇ ಸಾಲಿನಲ್ಲಿ ಎಂಬಿಬಿಎಸ್ ಮುಗಿಸಿದ ವಿದ್ಯಾರ್ಥಿಗಳು ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆ ನೀಡಬೇಕೆಂಬ ರಾಜ್ಯದ ನಿಲುವನ್ನು ಹೈಕೋರ್ಟ್ ಎತ್ತಿ ಹಿಡಿದಿರುವುದರಿಂದ 1,600 ವೈದ್ಯರು ಇಲಾಖೆಗೆ ಸೇರ್ಪಡೆಯಾಗಿದ್ದಾರೆ' ಎಂದು ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.



ಪ್ರತಿಭಟನೆ ಅಫ್ಗಾನಿಸ್ತಾನದ ಜಲಾಲಾಬಾದ್‌ನಲ್ಲಿ ಬುಧವಾರ ಸಾರ್ವಜನಿಕರು ಅಫ್ಗಾನಿಸ್ತಾನದ ಧ್ವಜ ಪ್ರದರ್ಶಿಸುವ ಮೂಲಕ ತಾಲಿಬಾನ್ ವಿರುದ್ಧ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ತಾಲಿಬಾನ್ ವಿರುದ್ಧ ಪ್ರತಿಭಟನೆ ಗುಂಡಿಗೆ 3 ಮಂದಿ ಸಾವು

ಕಾಬೂಲ್ (ರಾಯಿಟರ್ಸ್): ಅಫ್ಗಾನಿಸ್ತಾನವನ್ನು ಕೈವಶ ಮಾಡಿಕೊಂಡಿರುವ ತಾಲಿಬಾನ್ ಸರ್ಕಾರ ರಚನೆಯ ಯತ್ನಗಳನ್ನು ಆರಂಭಿಸಿದ್ದರೆ, ಪಶ್ಚಿಮದ ದೇಶಗಳು ತಮ್ಮ ರಾಜತಾಂತ್ರಿಕರು ಹಾಗೂ ನಾಗರಿಕರನ್ನು ತೆರವುಗೊಳಿಸುವ ಯತ್ನವನ್ನು ತೀವ್ರಗೊಳಿಸಿವೆ. ಈ ನಡುವೆಯೇ ತಾಲಿಬಾನ್ ವಿರುದ್ಧ ಪ್ರತಿಭಟನೆಗಳು ಬುಧವಾರ ಆರಂಭ ಆಗಿವೆ.

ರಾಜಧಾನಿ ಕಾಬೂಲ್‌ನಿಂದ 150 ಕಿ.ಮೀ. ಪೂರ್ವಕ್ಕಿರುವ ಜಲಾಲಾಬಾದ್‌ನಲ್ಲಿ ನಡೆದ ಪ್ರತಿಭಟನೆಯನ್ನು ತಾಲಿಬಾನ್ ಹತ್ತಿಕ್ಕಿದೆ. ತಾಲಿಬಾನ್ ಹೋರಾಟಗಾರರು ಹಾರಿಸಿದ ಗುಂಡಿಗೆ ಮೂವರು ಬಲಿಯಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ ಎಂಬ ಮಾಹಿತಿಯನ್ನು ತಾಲಿಬಾನ್ ನೀಡಿದೆ.

ಜಲಾಲಾಬಾದ್‌ನ ಚೌಕವೊಂದರಲ್ಲಿ ಅಫ್ಗಾನಿಸ್ತಾನದ ಧ್ವಜ ಹಾರಿಸಲು ಸ್ಥಳೀಯರ ಗುಂಪು ಯತ್ನಿಸಿತು. ಇದರ ನಡುವೆಯೇ ಗುಂಡು ಹಾರಾಟದ ಸದ್ದು ಕೇಳಿಸಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಧ್ವಜ ಹಿಡಿದು ಮೆರವಣಿಗೆ ನಡೆಸುತ್ತಿದ್ದ ಜನರು ಗುಂಡು ಹಾರಾಟದ ಸದ್ದು ಕೇಳಿದ ಬಳಿಕ ಚೆಲ್ಲಾಪಿಲ್ಲಿಯಾಗಿ ಓಡುವ ದೃಶ್ಯಗಳಿರುವ ವಿಡಿಯೊವನ್ನು ಸ್ಥಳೀಯ ಸುದ್ದಿ ಸಂಸ್ಥೆ ಪಜ್‌ವೊಕ್ ಅಫ್ಗನ್ ನ್ಯೂಸ್ ಬಿಡುಗಡೆ ಮಾಡಿದೆ.

ನಾಲ್ವರು ಮೃತಪಟ್ಟಿದ್ದು 13 ಮಂದಿ ಗಾಯಗೊಂಡಿದ್ದಾರೆ ಎಂದು ಮಾಜಿ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. ಎಷ್ಟು ಜನರು ಸತ್ತಿದ್ದಾರೆ ಮತ್ತು ಸಾವು ಹೇಗೆ ಸಂಭವಿಸಿತು ಎಂಬುದನ್ನು ದೃಢಪಡಿಸಿಕೊಳ್ಳಲು ಸಾಧ್ಯವಾಗಿಲ್ಲ.

ಇನ್ನಷ್ಟು ಸುದ್ದಿಗಳು 6

ನ್ಯಾಟೊ ಸಭೆ ನಾಳೆ

- ನ್ಯಾಟೊ ದೇಶಗಳ ವಿದೇಶಾಂಗ ಸಚಿವರು ವಿಡಿಯೊ ಕಾನ್ಫರೆನ್ಸ್ ಮೂಲಕ ಶುಕ್ರವಾರ ಸಭೆ ನಡೆಸಿ ಅಫ್ಗಾನಿಸ್ತಾನ ಪರಿಸ್ಥಿತಿ ಕುರಿತು ಚರ್ಚೆ ನಡೆಸಲಿದ್ದಾರೆ
- ಅಫ್ಗಾನಿಸ್ತಾನದಲ್ಲಿ ಭಾರತದ ಹಿತಾಸಕ್ತಿಯನ್ನು ರಕ್ಷಿಸಲು ಸರ್ಕಾರ ಏನು ಮಾಡಿದೆ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ವಿವರಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ
- ಫ್ರಾನ್ಸ್ ಸಿಬ್ಬಂದಿಯನ್ನು ತೆರವುಗೊಳಿಸಿದ ಮೊದಲ ವಿಮಾದನಲ್ಲಿ 21 ಮಂದಿ ಭಾರತೀಯರು ಇದ್ದರು. ಅವರು ಫ್ರಾನ್ಸ್ ರಾಯಭಾರ ಕಚೇರಿಯ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು
- ಕಾಬೂಲ್ ವಿಮಾನ ನಿಲ್ದಾಣದ ರಕ್ಷಣೆಗೆ ಅಮೆರಿಕ ನಿಯೋಜಿಸಿರುವ ಯೋಧರ ಸಂಖ್ಯೆಯು 4,500ಕ್ಕೂ ಹೆಚ್ಚು ಎಂದು ಹೇಳಲಾಗಿದೆ

ರಾಜ್ಯ ಕೋವಿಡ್ ಅಂಕಿ–ಅಂಶ

29,33,192 ▲	ಒಟ್ಟು ಸೋಂಕಿತರು (29,31,827 ನಿನ್ನೆಯ ವಿವರ)
21,266 ▼	ಸಕ್ರಿಯ ಪ್ರಕರಣಗಳು
28,74,839 ▲	ಗುಣಮುಖರಾದವರು
37,061 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,365	▲
ಗುಣಮುಖ	1,558	▼
ಸಾವು	22	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ | ಪ್ರಜಾವಾಣಿ ಗ್ರಾಫಿಕ್ಸ್

ಮಹಿಳೆಯರಿಗೂ ಎನ್‌ಡಿಎ ಅವಕಾಶ



ನವದೆಹಲಿ (ಪಿಟಿಐ): ರಾಷ್ಟ್ರೀಯ ರಕ್ಷಣಾ ಅಕಾಡೆಮಿಯು (ಎನ್‌ಡಿಎ) ಸೆಪ್ಟೆಂಬರ್ 5ರಂದು ನಡೆಸಲು ಉದ್ದೇಶಿಸಿರುವ ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಲು ಅರ್ಹ ಮಹಿಳೆಯರಿಗೆ ಸುಪ್ರೀಂ ಕೋರ್ಟ್ ಬುಧವಾರ ಅವಕಾಶ ನೀಡಿದೆ. ಭದ್ರತಾ ಪಡೆಗಳಲ್ಲಿ ಲಿಂಗ ಸಮಾನತೆ ಸಾಧಿಸುವ ದಿಸೆಯಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದು ಹೇಳಲಾಗಿದೆ.

ಪರೀಕ್ಷೆಯ ಫಲಿತಾಂಶವು ಈ ವಿಚಾರಕ್ಕೆ ಸಂಬಂಧಿಸಿದ ಅರ್ಜಿಯ ಬಗೆಗಿನ ತೀರ್ಪಿಗೆ ಬದ್ಧವಾಗಿರಲಿದೆ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಹೃಷಿಕೇಶ್ ರಾಯ್ ಅವರ ಪೀಠವು ಹೇಳಿದೆ.

ಮಹಿಳಾ ಅಭ್ಯರ್ಥಿಗಳು ನೌಕಾ ಅಕಾಡೆಮಿ ಪರೀಕ್ಷೆಗೂ ಹಾಜರಾಗಬಹುದು. ಎನ್‌ಡಿಎಯಲ್ಲಿ ತರಬೇತಿ ಪಡೆಯುವುದಕ್ಕೂ ಅವರಿಗೆ ಅವಕಾಶ ಇದೆ. ಇದಕ್ಕೆ ಸಂಬಂಧಿಸಿ ಅಧಿಸೂಚನೆ ಹೊರಡಿಸಬೇಕು ಮತ್ತು ಅದಕ್ಕೆ ಅಗತ್ಯ ಪ್ರಚಾರ ನೀಡಬೇಕು ಎಂದು ಕೇಂದ್ರ ಲೋಕಸೇವಾ ಆಯೋಗಕ್ಕೆ (ಯುಪಿಎಸ್‌ಸಿ) ಪೀಠವು ಸೂಚಿಸಿದೆ.

ಮಹಿಳೆಯರಿಗೆ ಪರೀಕ್ಷೆಗೆ ಅವಕಾಶ ನೀಡುವುದು ನೀತಿಗೆ ಸಂಬಂಧಿಸಿದ ವಿಚಾರ ಎಂಬುದು ಸ್ಪಷ್ಟ. ಹಾಗಾಗಿ, ಇದರಲ್ಲಿ ನ್ಯಾಯಾಲಯವು ಮಧ್ಯಪ್ರವೇಶ ಮಾಡುವಂತಿಲ್ಲ ಎಂದು ಸರ್ಕಾರವು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಲಾಗಿದೆ ಎಂಬುದರತ್ತ ಅರ್ಜಿದಾರರ ವಕೀಲ ಚಿನ್ಮಯ್ ಪ್ರದೀಪ್ ಶರ್ಮಾ ಪೀಠದ ಗಮನ ಸೆಳೆದರು.

ಭೂಸೇನೆ ಮತ್ತು ನೌಕಾಪಡೆಯಲ್ಲಿ ಮಹಿಳೆಯರನ್ನು ಕಾಯಂ ಸೇವೆಗೆ ಸೇರಿಸಿಕೊಳ್ಳಲು ಅವಕಾಶ ನೀಡಬೇಕು ಎಂದು ಈ ನ್ಯಾಯಾಲಯವು ಸ್ಪಷ್ಟವಾದ ತೀರ್ಪು ನೀಡಿದ್ದರೂ ಸರ್ಕಾರವು ಈ ರೀತಿ ಯೋಚಿಸಲು ಕಾರಣವೇನು ಎಂದು ಕೋರ್ಟ್ ಪ್ರಶ್ನಿಸಿದೆ.

ಹಲವು ಮಹಿಳೆಯರನ್ನು ಕಾಯಂ ಸೇವೆಗೆ ನಿಯೋಜಿಸಲಾಗಿದೆ. ಆದರೆ, ಎನ್‌ಡಿಎಯಲ್ಲಿ ಮಹಿಳೆಯರ ಪ್ರವೇಶವು ಸರ್ಕಾರದ ನೀತಿಗೆ ಸಂಬಂಧಿಸಿದ ವಿಚಾರವಾಗಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರು ಪೀಠಕ್ಕೆ ತಿಳಿಸಿದರು.

'ಸಹ ಶಿಕ್ಷಣವು ಅಷ್ಟೊಂದು ಸಮಸ್ಯಾತ್ಮಕವೇ? ಸರ್ಕಾರದ ನೀತಿಯು ಲಿಂಗ ತಾರತಮ್ಯ ಆಧಾರಿತವಾಗಿದೆ' ಎಂದು ಪೀಠವು ಹೇಳಿದೆ.

ಸೇನೆಯಲ್ಲಿ ಮಹಿಳೆಯರಿಗೆ ಕಾಯಂ ಸೇವೆಗೆ ಅವಕಾಶ ಒದಗಿಸಬೇಕು ಮತ್ತು ಅವರಿಗೆ ನಾಯಕತ್ವದ ಹುದ್ದೆಗೆ ಏರಲು ಅವಕಾಶ ಇರಬೇಕು ಎಂಬ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ ಕಳೆದ ವರ್ಷ ನೀಡಿತ್ತು.

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



'ತೃತೀಯ ಲಿಂಗಿಗಳ ಮೀಸಲಾತಿ ವಿಸ್ತರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗರಿಕ ಸೇವಾ ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ತೃತೀಯ ಲಿಂಗಿಗಳಿಗೆ ಉದ್ಯೋಗದಲ್ಲಿ ಕಲ್ಪಿಸಿರುವ ಶೇ 1ರಷ್ಟು ಮೀಸಲಾತಿಯನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೂ ವಿಸ್ತರಿಸುವುದು ಸೂಕ್ತ' ಎಂದು ಹೈಕೋರ್ಟ್ ಪ್ರತಿಪಾದಿಸಿದೆ.

ತೃತೀಯ ಲಿಂಗಿ ಸಮುದಾಯದ ಪರ ಕೆಲಸ ಮಾಡುತ್ತಿರುವ 'ಸಂಗಮ' ಸಂಸ್ಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಸೂಚನೆ ನೀಡಿದೆ.

'ತೃತೀಯ ಲಿಂಗಿಗಳಿಗೆ ಮೀಸಲಾತಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮ ಶ್ಲಾಘನೀಯ. ಈ ನಿಯಮ ಸರ್ಕಾರಿ ಸ್ವಾಮ್ಯದ ಎಲ್ಲಾ ನಿಗಮ ಮತ್ತು ಸಂಸ್ಥೆಗಳಲ್ಲೂ ಜಾರಿಗೊಳಿಸುವಂತೆ ಅಧಿಕಾರಿಗಳಿಗೆ ಸರ್ಕಾರ ನಿರ್ದೇಶನ ನೀಡಬೇಕಾಗುತ್ತದೆ' ಎಂದು ಹೇಳಿತು.

ಈ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ 6 ವಾರಗಳಲ್ಲಿ ವರದಿ ಸಲ್ಲಿಸಬೇಕು ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಸೆ.22ಕ್ಕೆ ಮುಂದೂಡಿತು.

'ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ಪಡೆಯುವುದು ತೃತೀಯ ಲಿಂಗಿಗಳ ಮೂಲಭೂತ ಹಕ್ಕು' ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಇದನ್ನು ಉಲ್ಲಂಘಿಸಿ ಪೊಲೀಸ್ ಇಲಾಖೆ 2,467 ಸಿಬ್ಬಂದಿ ನೇಮಕಕ್ಕೆ ಮುಂದಾಗಿದೆ. ಪುರುಷ, ಮಹಿಳೆಯರಿಗಷ್ಟೇ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ' ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ವಿಶ್ವೇಶ್ವರಯ್ಯ ಸೊಸೈಟಿಗೆ ಅವಿರೋಧ ಆಯ್ಕೆ

ಬೆಂಗಳೂರು: ನಗರದ ಸರ್.ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿ ಡಾ. ರೇಖಾ ಲಕ್ಷ್ಮಣ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಬಿ.ಎಸ್. ಶ್ರೀಪತಿರಾವ್ ಚುನಾಯಿತರಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೋಯಾಲುಕ್ಕಾಸ್: ಬ್ರೈಡಲ್ ಫೆಸ್ಟ್

ಬೆಂಗಳೂರು: ಚಿನ್ನಾಭರಣ ಮಾರಾಟ ಕಂಪನಿ ಜೋಯಾಲುಕ್ಕಾಸ್ 'ಬ್ರೈಡಲ್ ಫೆಸ್ಟ್'ಗೆ ಚಾಲನೆ ನೀಡಿದೆ. ಸೀಮಿತ ಅವಧಿಯ ಬ್ರೈಡಲ್ ಫೆಸ್ಟ್‌ನಲ್ಲಿ ವಧುವಿಗೆ ಸಮಕಾಲೀನ ಹಾಗೂ ಸಾಂಪ್ರದಾಯಿಕ ಆಭರಣಗಳ ಸಂಗ್ರಹ ಇರಲಿದೆ ಎಂದು ಕಂಪನಿ ಹೇಳಿದೆ.

ಈ ಫೆಸ್ಟ್‌ನ ಅಂಗವಾಗಿ, ವಿಶೇಷವಾದ ವಿವಾಹ ಪ್ಯಾಕೇಜ್‌ಅನ್ನು ಕಂಪನಿ ಪ್ರಕಟಿಸಿದ್ದು, ಎಲ್ಲ ಬಗೆಯ ಆಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ ಶೇಕಡ 30ರಷ್ಟು ವಿನಾಯಿತಿ ಘೋಷಿಸಿದೆ. 'ಮೇಕಿಂಗ್ ಚಾರ್ಜಸ್ ಮೇಲಿನ ರಿಯಾಯಿತಿಯ ಪ್ರಯೋಜನ ಪಡೆಯಬೇಕು ಎಂದು ನಾನು ನಮ್ಮೆಲ್ಲ ಗ್ರಾಹಕರನ್ನು ಕೋರುತ್ತಿದ್ದೇನೆ' ಎಂದು ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಜಾಯ್ ಅಲುಕ್ಕಾಸ್ ಹೇಳಿದ್ದಾರೆ.

ಅಂತರ್ಜಾಲದಲ್ಲಿ ಕನ್ನಡ ಬರವಣಿಗೆ ತರಬೇತಿ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಅಂತರ್ಜಾಲದಲ್ಲಿ ಕನ್ನಡ ಬರವಣಿಗೆ ಹಾಗೂ ಅನುವಾದದ ಪ್ರಾಯೋಗಿಕ ತರಬೇತಿಗೆ ಅರ್ಜಿ ಆಹ್ವಾನಿಸಿದೆ.

ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಎರಡು ದಿನಗಳು ತರಬೇತಿ ನೀಡಲು ಯೋಜನೆ ರೂಪಿಸಲಾಗಿದೆ. ಅರ್ಜಿ ನಮೂನೆಗಳು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ (kuvempubhashabharathi.karnataka.gov.in) ಲಭ್ಯವಿವೆ. ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಲು ಆ.31 ಕಡೆಯ ದಿನಾಂಕ ಎಂದು ಪ್ರಕಟಣೆ ತಿಳಿಸಿದೆ.

ಮೀಸಲಾತಿ ಹೆಚ್ಚಳಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡ ಸಮುದಾಯಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 3ರಿಂದ 7.5ಕ್ಕೆ ಹೆಚ್ಚಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದ ನಿಯೋಗ ಆಗ್ರಹಿಸಿದೆ.

ಮುಖ್ಯಮಂತ್ರಿಯನ್ನು ಗೃಹ ಕಚೇರಿ 'ಕೃಷ್ಣಾ'ದಲ್ಲಿ ಬುಧವಾರ ಭೇಟಿ ಮಾಡಿದ ಸ್ವಾಮೀಜಿ, 'ಪರಿಶಿಷ್ಟ ಪಂಗಡ ಸಮುದಾಯದವರ ಶಿಕ್ಷಣ, ಉದ್ಯೋಗಕ್ಕಾಗಿ ಮೀಸಲಾತಿ ಹೆಚ್ಚಿಸಬೇಕು. ಈ ಹಿಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು ಬೇಡಿಕೆ ಈಡೇರಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದ ನಿಯೋಗ ಬುಧವಾರ ಭೇಟಿ ಮಾಡಿತು. ಬಿ. ಶ್ರೀರಾಮುಲು, ಶಿವನಗೌಡ ನಾಯಕ, ಸತೀಶ ಜಾರಕಿಹೊಳಿ ಇದ್ದರು

'ಸಮುದಾಯದ ಆಶೋತ್ತರಗಳಿಗೆ ರಾಜ್ಯ ಸರ್ಕಾರ ಸ್ಪಂದಿಸಿಲ್ಲ. ನಮ್ಮ ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸುವ ಮೂಲಕ ಶಕ್ತಿ ನೀಡಬೇಕು. ನಿಮ್ಮ ಅವಧಿಯಲ್ಲಿ ಈ ಕೆಲಸ ಆಗಬೇಕು' ಎಂದು ಮನವಿ ಮಾಡಿದರು. ಬೇಡಿಕೆಯ ಬಗ್ಗೆ ಪರಿಶೀಲನೆ ನಡೆಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು.

ಸಮುದಾಯದ ನಾಯಕರಾದ ಸಾರಿಗೆ ಸಚಿವ ಬಿ. ಶ್ರೀರಾಮುಲು, ಶಾಸಕರಾದ ಶಿವನಗೌಡ ನಾಯಕ ಮತ್ತು ಸತೀಶ ಜಾರಕಿಹೊಳಿ ಇದ್ದರು.

ಓಣಂಗೆ ಪ್ರಿನ್ಸ್ ಜುವೆಲರಿಯಿಂದ ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಣಂ ಹಬ್ಬದ ಸಂಭ್ರಮಕ್ಕಾಗಿ ಪ್ರಿನ್ಸ್ ಜುವೆಲರಿ ಕಂಪನಿಯು ಹೊಸ ಚಿನ್ನಾಭರಣಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ಓಣಂನಲ್ಲಿ ಹೂವುಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ. ಇದನ್ನು ಸ್ಫೂರ್ತಿಯಾಗಿ ಇಟ್ಟುಕೊಂಡು ಚಿನ್ನಾಭರಣಗಳನ್ನು ವಿನ್ಯಾಸಗೊಳಿಸಲಾಗಿದೆ. ಪ್ರತಿ ಚಿನ್ನಾಭರಣವೂ ಪ್ರಮಾಣೀಕೃತ ಬಿಐಎಸ್ 916 ಹಾಲ್‌ಮಾರ್ಕ್ ಚಿನ್ನದಿಂದ ತಯಾರಾಗಿದ್ದು, ಶುದ್ಧತೆಯನ್ನು ಖಾತರಿಪಡಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಯಾವುದೇ ಮಳಿಗೆಯಲ್ಲಿ ಖರೀದಿಸಿದ ಹಳೆಯ ಚಿನ್ನಾಭರಣವನ್ನು ಪ್ರಿನ್ಸ್ ಜುವೆಲರಿ ಮಳಿಗೆಯಲ್ಲಿ ಬಿಐಎಸ್ 916 ಹಾಲ್‌ಮಾರ್ಕ್ ಇರುವ ಹೊಸ ಚಿನ್ನಾಭರಣದೊಂದಿಗೆ ವಿನಿಮಯ ಮಾಡಿಕೊಳ್ಳಬಹುದು. ಈ ರೀತಿ ಹಳೆಯದನ್ನು ವಿನಿಮಯ ಮಾಡುವಾಗ ₹ 50 ಹೆಚ್ಚಿಗೆ ದರ ಪಡೆಯಬಹುದು. ಹೊಸ ಚಿನ್ನಾಭರಣ ಖರೀದಿಸಿದರೆ ₹ 50 ದರ ಕಡಿಮೆ ಆಗಲಿದೆ ಎಂದು ತಿಳಿಸಿದೆ.

ಶಿವರಾಮ ಕಾರಂತ ಬಡಾವಣೆ

ಕಟ್ಟಡ ಸಕ್ರಮ: ಅರ್ಜಿ ಸಲ್ಲಿಕೆಗೆ ಸೆ.9 ಕೊನೆಯ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾಮಕಾರಂತ ಬಡಾವಣೆ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳಲ್ಲಿರುವ ಕಟ್ಟಡಗಳಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಲು ಸೆ. 9 ಕೊನೆಯ ದಿನ ಎಂದು ಈ ಬಡಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೇಮಕ ಮಾಡಿರುವ ನ್ಯಾ. ಎ.ವಿ. ಚಂದ್ರಶೇಖರ್ ಸಮಿತಿ ತಿಳಿಸಿದೆ.

ಸೋಮಶೆಟ್ಟಿಹಳ್ಳಿ ಮತ್ತು ಮೇಡಿ ಅಗ್ರಹಾರದಲ್ಲಿರುವ ಸಹಾಯ ಕೇಂದ್ರಗಳಲ್ಲಿ ಸೆ.9 ರವರೆಗೂ ಅರ್ಜಿ ಸ್ವೀಕರಿಸಲಾಗುತ್ತದೆ. ಆ ಬಳಿಕ ಸಹಾಯ ಕೇಂದ್ರಗಳಲ್ಲಾಗಲೀ ಅಥವಾ ಆನ್‌ಲೈನ್ ಪೋರ್ಟಲ್ (jcc-skl.in) ಮೂಲಕವಾಗಲೀ ಅರ್ಜಿ ಸ್ವೀಕಾರ ಮಾಡುವುದಿಲ್ಲ ಎಂದು ಸಮಿತಿಯು ಸ್ಪಷ್ಟಪಡಿಸಿದೆ. ಇನ್ನೂ ಯಾರಾದರೂ ಭೂಮಾಲೀಕರು, ಸಾರ್ವಜನಿಕರು ಈ ಪ್ರದೇಶಗಳಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಲು ಬಾಕಿ ಇದ್ದರೆ ಗಡುವಿನೊಳಗೆ ಅರ್ಜಿಗಳನ್ನು ಸಲ್ಲಿಸುವಂತೆ ಸಮಿತಿ ಕೋರಿದೆ.

ಶಿವರಾಮ ಕಾರಂತ ಬಡಾವಣೆಗೆ ಗೊತ್ತುಪಡಿಸಿರುವ ಪ್ರದೇಶಗಳಲ್ಲಿ 2018ರ ಆ.3ಕ್ಕೆ ಮುಂಚಿತವಾಗಿ ನಿರ್ಮಿಸಲಾದ ಕಟ್ಟಡಗಳನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲ. ಹೀಗಾಗಿ, ಈ ಕಟ್ಟಡಗಳನ್ನು ಒಡೆದು ಹಾಕಬಹುದಾಗಿದೆ ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಮತ್ತು ಸಂಜೀವ್ ಖನ್ನಾ ಅವರನ್ನೊಳಗೊಂಡ ಪೀಠವು ಹೇಳಿದೆ. 2018ರ ಆ.3ಕ್ಕೆ ಮುನ್ನ ನಿರ್ಮಿಸಿರುವ ಕಟ್ಟಡಗಳು ಮತ್ತು ಮನೆಗಳ ಬಗ್ಗೆ ವರದಿ ನೀಡಲು ಸುಪ್ರೀಂ ಕೋರ್ಟ್ ನ್ಯಾ. ಎ.ವಿ. ಚಂದ್ರಶೇಖರ್ ಸಮಿತಿಯನ್ನು ನೇಮಿಸಿತ್ತು. ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಮಿತಿಯು ಮಾರ್ಚ್ 1ರಂದು ಚಾಲನೆ ನೀಡಿತ್ತು. ಈ ಬಡಾವಣೆಯ ಅಧಿಸೂಚಿತ ಪ್ರದೇಶಗಳಲ್ಲಿ ಐದು ಸಹಾಯ ಕೇಂದ್ರಗಳನ್ನು ಆರಂಭಿಸಿತ್ತು. ಅವುಗಳಲ್ಲಿ ಮೂರು ಸಹಾಯಕೇಂದ್ರಗಳು ಈಗ ಅಸ್ತಿತ್ವದಲ್ಲಿ ಇಲ್ಲ. ಎರಡು ಸಹಾಯ ಕೇಂದ್ರಗಳಲ್ಲಿ ಸಮಿತಿಯು ಈಗಲೂ ದಾಖಲೆಗಳನ್ನು ಸಂಗ್ರಹಿಸುತ್ತಿದೆ. ಈ ಸಮಿತಿಯ ಅವಧಿಯನ್ನು ಸುಪ್ರೀಂ ಕೋರ್ಟ್ 2022ರ ಮಾರ್ಚ್ 31ರವರೆಗೆ ವಿಸ್ತರಿಸಿದೆ.

‘ಅಧಿಸೂಚಿತ ಪ್ರದೇಶದಲ್ಲಿ ನಿರ್ಮಿಸಿರುವ ಕಟ್ಟಡಗಳ ಸಂಬಂಧ ನಮಗೆ ಇದುವರೆಗೆ 4,900ಕ್ಕೂ ಅಧಿಕ ಅರ್ಜಿಗಳು ಬಂದಿವೆ. ಅವುಗಳಲ್ಲಿ ಸುಮಾರು 4,500 ಅರ್ಜಿಗಳನ್ನು ಪರಿಶೀಲನೆಗಾಗಿ ಪರಿಗಣಿಸಲಾಗಿದೆ’ ಎಂದು ಸಮಿತಿಯ ಸದಸ್ಯರಾಗಿರುವ ನಿವೃತ್ತ ಐಎಎಸ್ ಅಧಿಕಾರಿ (ನಿವೃತ್ತ) ಜೈಕರ್ ಜೆರೋಮ್ ‘ಪ್ರಜಾವಾಣಿ’ಗೆ ತಿಳಿಸಿದರು.

‘2018ರ ಆ.3ರ ಬಳಿಕವೂ ನಿರ್ಮಿಸಿದ ಎಲ್ಲ ಕಟ್ಟಡಗಳನ್ನೂ ಸಕ್ರಮಗೊಳಿಸಲು ಸಾಧ್ಯವಾಗದು. ಕೆಲವೊಂದು ಕಟ್ಟಡಗಳು ಗೋಮಾಳ, ಬಿ–ಖರಾಬು ಜಮೀನು ಹಾಗೂ ಕೆರೆ ಅಥವಾ ರಾಜಕಾಲುವೆಗಳ ಮೀಸಲು ಪ್ರದೇಶದಲ್ಲಿವೆ. ಅಂತಹ ಕಟ್ಟಡಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಪರಿಶೀಲಿಸಲು ಸಾಧ್ಯವಿಲ್ಲ’ ಎಂದರು.

ಈ ಬಡಾವಣೆಗೆ ಗೊತ್ತುಪಡಿಸಿದ ಜಾಗದಲ್ಲಿ 2018ರ ಆ 3ರ ಬಳಿಕ ನಿರ್ಮಾಣವಾಗಿರುವ ಕಟ್ಟಡಗಳನ್ನು ಕೆಡಹುವ ಕಾರ್ಯವನ್ನು ಬಿಡಿಎ ಈಗಾಗಲೇ ಆರಂಭಿಸಿದೆ.

ಶಿವರಾಮಯ್ಯಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ಪ್ರಶಸ್ತಿ



ಶಿವರಾಮಯ್ಯ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ ‘ಸಾವಿತ್ರಮ್ಮ–ಪ್ರೊ.ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ’ಕ್ಕೆ ಸಾಹಿತಿ ಪ್ರೊ. ಶಿವರಾಮಯ್ಯ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 30 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಬೈರಮಂಗಲ ರಾಮೇಗೌಡ ಹಾಗೂ ಬೇಲೂರು ರಘುನಂದನ್ ನೇತೃತ್ವದ ಆಯ್ಕೆ ಸಮಿತಿಯು ಈ ಆಯ್ಕೆ ಮಾಡಿದೆ ಎಂದು ಪ್ರಕಟಣೆಯಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಆರ್. ಲಕ್ಷ್ಮೀನಾರಾಯಣ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ನಗರದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ 2021–22ನೇ ಸಾಲಿನ ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಂಸ್ಥೆಯಲ್ಲಿ ಲಭ್ಯವಿರುವ 14 ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಇದೇ 21 ಕೊನೆಯ ದಿನ. ಮಾಹಿತಿಗೆ, www.dte.kar.nic.in ವೆಬ್‌ಸೈಟ್ ಸಂಪರ್ಕಿಸಬಹುದು ಅಥವಾ ಸಂಸ್ಥೆಗೆ ಭೇಟಿ ನೀಡಿ ವಿವರ ಪಡೆಯಬಹುದು.

ಅನಂತಕುಮಾರ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭೂಮಿಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದ್ಮನಾಭನಗರ ಕ್ಷೇತ್ರದಲ್ಲಿ ₹25 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕಂದಾಯ ಸಚಿವ ಮತ್ತು ಕ್ಷೇತ್ರದ ಶಾಸಕ ಆರ್. ಅಶೋಕ ಬುಧವಾರ ಭೂಮಿಪೂಜೆ ನೆರವೇರಿಸಿದರು.

ಕರಿಸಂದ್ರ ವಾರ್ಡ್‌ನಲ್ಲಿ ದಿವಂಗತ ಎಚ್.ಎನ್. ಅನಂತಕುಮಾರ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭೂಮಿಪೂಜೆ ನೆರವೇರಿಸಲಾಯಿತು. ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅಡಿ ಈ ಆಸ್ಪತ್ರೆ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.

ಅತ್ಯಾಧುನಿಕ ಸೌಲಭ್ಯಗಳುಳ್ಳ ಆಸ್ಪತ್ರೆ ಇದಾಗಲಿದ್ದು, ಹಲವು ಸಮಸ್ಯೆಗಳಿಗೆ ಒಂದೇ ಸೂರಿನಡಿ ಚಿಕಿತ್ಸೆ ನೀಡುವ ಉದ್ದೇಶವಿದೆ. 15 ಹಾಸಿಗೆಗಳ ಡಯಾಲಿಸಿಸ್ ಕೇಂದ್ರ, 30 ಹಾಸಿಗೆಗಳ ಹೆರಿಗೆ ಕೇಂದ್ರ ಮತ್ತು 30 ಹಾಸಿಗೆಗಳ ಮಕ್ಕಳ ಚಿಕಿತ್ಸಾ ಘಟಕದ ಜೊತೆಗೆ, ಅತೀ ಕಡಿಮೆ ಬೆಲೆಗೆ ಔಷಧಿ ನೀಡುವ ಜನೌಷಧಿ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರವು ಕೂಡಾ ಈ ಆಸ್ಪತ್ರೆ ಕಟ್ಟಡದಲ್ಲಿ ತಲೆ ಎತ್ತಲಿದೆ.



ದಿವಂಗತ ಅನಂತಕುಮಾರ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಆರ್. ಅಶೋಕ ಭೂಮಿಪೂಜೆ ನೆರವೇರಿಸಿದರು. ಯಶೋದಾ ಲಕ್ಷ್ಮೀಕಾಂತ್ ಇತರರು ಇದ್ದರು

‘ಈ ಭಾಗದ ಜನರಿಗೆ ಕೈಗೆಟಕುವ ದರದಲ್ಲಿ ಅತ್ಯುತ್ತಮ ಚಿಕಿತ್ಸೆ ದೊರೆಯಬೇಕೆಂಬ ಸದಾಶಯದೊಂದಿಗೆ ಈ ಆಸ್ಪತ್ರೆಯನ್ನು ನಿರ್ಮಿಸಲಾಗುತ್ತಿದೆ. ಬಿಜೆಪಿಯ ಜನಪ್ರಿಯ ನಾಯಕರಾಗಿದ್ದ, ಈ ಭಾಗದ ಜನಾನುರಾಗಿ ಸಂಸದರೂ ಆಗಿದ್ದ ಕೇಂದ್ರದ ಅನಂತಕುಮಾರ್ ಅವರ ಹೆಸರಿನಲ್ಲಿ ಆರಂಭವಾಗಲಿರುವ ಆಸ್ಪತ್ರೆಯು ಈ ಭಾಗದ ಜನರ ಪಾಲಿಗೆ ಸಂಜೀವಿನಿಯಾಗಲಿದೆ’ ಎಂದು ಅಶೋಕ ಹೇಳಿದರು.

ವಿವಿಧೋದ್ದೇಶ ಕಟ್ಟಡಕ್ಕೆ ಚಾಲನೆ

ಕ್ಷೇತ್ರದಲ್ಲಿ ವಿವಿಧೋದ್ದೇಶ ಕಟ್ಟಡ ನಿರ್ಮಾಣ ಕಾಮಗಾರಿಗೂ ಆರ್. ಅಶೋಕ ಗುದ್ದಲಿ ಪೂಜೆ ನೆರವೇರಿಸಿದರು. ಈ ಕಟ್ಟಡದಲ್ಲಿ ಬಾಲ ಭವನ, ಇ ಗ್ರಂಥಾಲಯ, ಶುದ್ಧ ಕುಡಿಯುವ ನೀರಿನ ಘಟಕ, ಹಾಪ್‌ಕಾಮ್ಸ್ ಮಳಿಗೆ ಇರಲಿವೆ.

ಇದರ ಜೊತೆಗೆ, ಕ್ಷೇತ್ರದ ಕಾವೇರಿ ವಾರ್ಡ್‌ನಲ್ಲಿ ಎಪಿಜೆ ಅಬ್ದುಲ್ ಕಲಾಂ ಉದ್ಯಾನಕ್ಕೂ ಸಚಿವರು ಭೂಮಿಪೂಜೆ ನೆರವೇರಿಸಿದರು. ಪಕ್ಷದ ಸ್ಥಳೀಯ ಮುಖಂಡರಾದ ಯಶೋದಾ ಲಕ್ಷ್ಮೀಕಾಂತ್ ಮತ್ತು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಜರಿದ್ದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 19ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ. ಟಿಂಬರ್ ಯಾರ್ಡ್ ಬಡಾವಣೆ, ಮೈಸೂರ್ ಲ್ಯಾಂಡ್ ಬಡಾವಣೆ, ಟಿ.ಜಿ. ಪಾಳ್ಯ ಮುಖ್ಯರಸ್ತೆ, ಮಹದೇಶ್ವರನಗರ ಮುಖ್ಯರಸ್ತೆ, ಹೊಯ್ಸಳ ವೃತ್ತ, ಅಪೂರ್ವ ಬಡಾವಣೆ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು.



ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಮ್ಯಾಗ್ನಂ ಹೋಂಡಾ ಷೋರೂಂನಲ್ಲಿ, ಹೊಸ ಹೋಂಡಾ ಅಮೇಜ್ ಕಾರನ್ನು ಬುಧವಾರ ಬಿಡುಗಡೆ ಮಾಡಲಾಯಿತು. ಮ್ಯಾಗ್ನಂ ಹೋಂಡಾ ಸಿಇಒ ಅವಿನಾಶ್ ಎನ್., ಹೋಂಡಾ ಕಾರ್ಸ್ ಇಂಡಿಯಾ ಲಿಮಿಟೆಡ್‌ನ ಏರಿಯಾ ಮ್ಯಾನೇಜರ್ ಶಶಾಂಕ್ ಆರ್.ಆರ್., ಮ್ಯಾಗ್ನಂ ಹೋಂಡಾದ ಮಾರಾಟ ವಿಭಾಗದ ಉಪಾಧ್ಯಕ್ಷ ಜಿ. ಆದರ್ಶಸೀಲನ್ ಇದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮತ • 2019– 20ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗಳು ಪ್ರದಾನ

‘ಮಾತೃಭಾಷೆ ಕಡೆಗಣಿಸಿದ ನಾಡು ಶ್ರೀಮಂತವಾಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾತೃ ಭಾಷೆಯನ್ನು ಯಾವುದೇ ಕಾರಣಕ್ಕೂ ಇತರ ಭಾಷೆಗಳಿಗೆ ಹೋಲಿಕೆ ಮಾಡಬಾರದು. ಮಾತೃಭಾಷೆಯನ್ನು ಕಡೆಗಣಿಸಿದ ನಾಡು ಶ್ರೀಮಂತವಾಗಲು ಸಾಧ್ಯವಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 2019-20ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಮಾತನಾಡಿದರು.

‘ಮಾತೃಭಾಷೆಯನ್ನು ಇತರ ಭಾಷೆಗೆ ಹೋಲಿಸುವುದರಿಂದ ಭಾಷೆಯ ಬಗೆಗಿನ ಭಾವ ಹಾಗೂ ಭಾವನೆ ಕಡಿಮೆಯಾಗುತ್ತದೆ. ಮಾತೃಭಾಷೆಯ ಮಹತ್ವವನ್ನು ಅರಿತಿರುವ ನಾಡು ಶ್ರೀಮಂತವಾಗುತ್ತದೆ. ಕಲಿಯುಗದಲ್ಲಿ ಎಲ್ಲದಕ್ಕೂ ಬೆಲೆ ಕಟ್ಟಲಾಗುತ್ತಿದೆ. ಕಲೆ, ಸಂಸ್ಕೃತಿಗೂ ಬೆಲೆ ನಿಗದಿ ಮಾಡಲಾಗುತ್ತದೆ. ಇಂತಹ ಸಂದರ್ಭದಲ್ಲಿ ಕೆಲವರು ಬೆಲೆಗೆ ಮಹತ್ವ ನೀಡದೆಯೇ ಅರ್ಥ ಕೊಡುವ ಕೆಲಸವನ್ನು ಮಾಡುತ್ತಿದ್ದಾರೆ. ಹಸಿವು, ಅರಿವು, ಮರೆವು ಹಾಗೂ ಸಾವನ್ನು ದೇವರು ನಮಗೆ ವರವಾಗಿ ನೀಡಿದ್ದಾನೆ. ಅದನ್ನು ತಿಳಿದು ಬದುಕಿದರೆ ಜೀವನ ಅರ್ಥಪೂರ್ಣವಾಗುತ್ತದೆ’ ಎಂದರು.

ಪ್ರಶಸ್ತಿ ಪುರಸ್ಕೃತ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿ, ‘ಇನ್ನೊಬ್ಬರನ್ನು ಅವಕಾಶ ವಂಚಿತರನ್ನಾಗಿ ಮಾಡಿ, ನಾವು ಅಧಿಕಾರ ಅನುಭವಿಸಬಾರದು. ಮಹಾವೀರನು ಅಣ್ಣ ಭರತನ ವಿರುದ್ಧ ಗೆದ್ದರೂ ಎಲ್ಲವನ್ನು ತ್ಯಜಿಸಿ, ಶಾಂತಿ ಸಂದೇಶ ಸಾರಿದ. ನಾವು ಬದುಕುವುದರ ಜೊತೆಗೆ ಇತರರಿಗೂ ಬದುಕಲು ಅವಕಾಶ ನೀಡಬೇಕು. ಯಶಸ್ಸು ಸಾಧಿಸುವ ಭರದಲ್ಲಿ ಬೇರೆಯವರನ್ನು ಅವಕಾಶ ವಂಚಿತರನ್ನಾಗಿ ಮಾಡಬಾರದು’ ಎಂದರು.

ಭಾಲ್ಕಿಯ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದೇವರು, ‘ಅನುಭವ ಮಂಟಪವನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸುವುದಾಗಿ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದರು. ಆ ಕಾರ್ಯವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು. ಅದೇ ರೀತಿ, ವಿಧಾನಸೌಧದ ಮುಂದೆ ಬಸವೇಶ್ವರರ ಪ್ರತಿಮೆಯನ್ನು ಆದಷ್ಟು ಬೇಗ ಅನಾವರಣ ಮಾಡುವ ಮೂಲಕ ಈ ಹಿಂದಿನ ಯೋಜನೆಯನ್ನು ಸಾಕಾರ ಮಾಡಬೇಕು. ಮಹಾರಾಷ್ಟ್ರದಲ್ಲಿ ಶಿವಾಜಿ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಸ್ವೀಕರಿಸಲಾಗಿದೆ. ಕರ್ನಾಟಕದಲ್ಲಿ ಬಸವೇಶ್ವರರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಬೇಕು’ ಎಂದು ಮನವಿ ಮಾಡಿದರು.

ವಿವಿಧ ಸಾಧಕರಿಗೆ ಪ್ರಶಸ್ತಿಗಳು ಪ್ರದಾನ

‘ಬಸವ ರಾಷ್ಟ್ರೀಯ ಪ್ರಶಸ್ತಿ’ಯನ್ನು ಬಸವಲಿಂಗಪಟ್ಟದೇವರು, ‘ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ’ಯನ್ನು ಪಂ. ನರಸಿಂಹಲು ವಡವಾಟಿ, ‘ಭಗವಾನ್ ಮಹಾವೀರ ರಾಷ್ಟ್ರೀಯ ಶಾಂತಿ ಪ್ರಶಸ್ತಿ’ಯನ್ನು ಡಿ.ವೀರೇಂದ್ರ ಹೆಗ್ಗಡೆ, ‘ನಾಟ್ಯರಾಣಿ ಶಾಂತಲಾ ಪ್ರಶಸ್ತಿ’ಯನ್ನು ಬಿ.ಕೆ. ವಸಂತಲಕ್ಷ್ಮಿ, ‘ಜಕಣಾಚಾರಿ ಪ್ರಶಸ್ತಿ’ಯನ್ನು ಬಿ.ಎಸ್. ಯೋಗಿರಾಜ, ‘ಡಾ. ಗುಬ್ಬಿ ವೀರಣ್ಣ ಪ್ರಶಸ್ತಿ’ಯನ್ನು ಮದಿರೆ ಮರಿಸ್ವಾಮಿ, ‘ಜಾನಪದಶ್ರೀ ಪ್ರಶಸ್ತಿ’ಯನ್ನು ಬಿ. ಟಾಕಪ್ಪ ಕಣ್ಣೂರು ಅವರಿಗೆ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು.

‘ಸಂಗೊಳ್ಳಿ ರಾಯಣ್ಣ ಪ್ರಶಸ್ತಿ’ಯನ್ನು ರಾ.ನಂ. ಚಂದ್ರಶೇಖರ, ‘ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ’ಯನ್ನು ಚೂಡಾಮಣಿ ನಂದಗೋಪಾಲ್, ‘ಪ್ರೊ. ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ’ಯನ್ನು ಪ್ರೊ. ಸಿದ್ದಣ್ಣ ಉತ್ನಾಳ, ‘ಅಕ್ಕಮಹಾದೇವಿ ಪ್ರಶಸ್ತಿ’ಯನ್ನು ಜಯಶ್ರೀ ದಂಡೆ, ‘ನಿಜಗುಣ ಪುರಂದರ ಪ್ರಶಸ್ತಿ’ಯನ್ನು ಗೌರಿ ಕುಪ್ಪುಸ್ವಾಮಿ, ‘ಸಂತಶಿಶುನಾಳ ಶರೀಫ ಪ್ರಶಸ್ತಿ’ಯನ್ನು ಪಂ. ವಾದಿರಾಜ ನಿಂಬರಗಿ, ‘ಬಿ.ವಿ. ಕಾರಂತ ಪ್ರಶಸ್ತಿ’ಯನ್ನು ಎಚ್.ವಿ. ವೆಂಕಟಸುಬ್ಬಯ್ಯ ಹಾಗೂ ‘ಕುಮಾರವ್ಯಾಸ ಪ್ರಶಸ್ತಿ’ಯನ್ನು ಗಂಗಮ್ಮ ಕೇಶವಮೂರ್ತಿ ಅವರಿಗೆ ಪ್ರದಾನ ಮಾಡಿದರು.

ತಿಂಗಳಲ್ಲಿ 2 ದಿನ ಕನ್ನಡ ಭವನದಲ್ಲಿ ಕೆಲಸ: ಸಚಿವ ಸುನಿಲ್ ಕುಮಾರ್

‘ಕೋವಿಡ್‌ನಿಂದಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯದಿರುವುದರಿಂದ ಕಲಾವಿದರು ಸಂಕಷ್ಟ ಎದುರಿಸಿದ್ದಾರೆ. ಸರ್ಕಾರದಿಂದ 20 ಸಾವಿರ ಕಲಾವಿದರಿಗೆ ತಲಾ ₹ 3 ಸಾವಿರ ನೀಡಲಾಗಿದೆ. ವಿಧಾನಸೌಧದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನು ಭೇಟಿ ಮಾಡುವುದು ಕಷ್ಟ ಎಂದು ಈ ಹಿಂದೆ ಹಿರಿಯರು ಮತ್ತು ಕಲಾವಿದರು ಅಳಲು ತೋಡಿಕೊಂಡಿದ್ದರು. ನಾನು ತಿಂಗಳಲ್ಲಿ ಎರಡು ದಿನ ಕೆಲವಷ್ಟು ಗಂಟೆಗಳನ್ನು ಕನ್ನಡ ಭವನದಲ್ಲಿ ಕಳೆದು, ಅಹವಾಲು ಆಲಿಸಲು ನಿರ್ಧರಿಸಿದ್ದೇನೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

‘ಸೆಪ್ಟೆಂಬರ್‌ನಲ್ಲಿ ಮಕ್ಕಳಿಗೆ ಲಸಿಕೆ?’

ನವದೆಹಲಿ: ಸೆಪ್ಟೆಂಬರ್ ವೇಳೆಗೆ ಮಕ್ಕಳಿಗೆ ಕೋವಿಡ್ ಲಸಿಕೆಗಳು ಲಭ್ಯವಾಗಬಹುದು. 2 ರಿಂದ 18 ವರ್ಷದೊಳಗಿನವರಿಗೆ ಲಸಿಕೆ ಹಾಕುವ ಪ್ರಯೋಗಗಳು ನಡೆಯುತ್ತಿವೆ ಎಂದು ರಾಷ್ಟ್ರೀಯ ವೈರಾಲಜಿ ಸಂಸ್ಥೆಯ ನಿರ್ದೇಶಕಿ ಪ್ರಿಯಾ ಅಬ್ರಹಾಂ ಹೇಳಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಒಟಿಟಿ ವೇದಿಕೆಯಾದ ಭಾರತ ವಿಜ್ಞಾನಕ್ಕೆ ನೀಡಿದ ಸಂದರ್ಶನದಲ್ಲಿ, ಅಬ್ರಹಾಂ ಅವರು 2 ರಿಂದ 18 ವರ್ಷ ವಯಸ್ಸಿನವರಿಗೆ 2/3 ಹಂತದ ಕ್ಲಿನಿಕಲ್ ಪ್ರಯೋಗಗಳು ನಡೆಯುತ್ತಿವೆ ಎಂದರು.

‘ಫಲಿತಾಂಶಗಳು ಶೀಘ್ರದಲ್ಲೇ ಲಭ್ಯವಾಗುತ್ತವೆ. ಅವುಗಳನ್ನು ನಿಯಂತ್ರಕರಿಗೆ ನೀಡಲಾಗುವುದು. ಬಹುಶಃ ಸೆಪ್ಟೆಂಬರ್ ಅಥವಾ ಸೆಪ್ಟೆಂಬರ್ ನಂತರ, ನಾವು ಮಕ್ಕಳಿಗೆ ಲಸಿಕೆ ನೀಡಬಹುದು‘ ಎಂದು ಅವರು ಹೇಳಿದರು.

ಎನ್‌ಐವಿ, ಆರೋಗ್ಯ ಸಚಿವಾಲಯದ ಅಡಿಯಲ್ಲಿ ಬರುವ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ಅಡಿಯಲ್ಲಿರುವ ಒಂದು ಸಂಸ್ಥೆಯಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟನೆ • ಮಾರ್ಗಸೂಚಿ ಕಡ್ಡಾಯ ಪಾಲನೆಗೆ ಸಲಹೆ

ಹಬ್ಬ: ಜಾತ್ರೆ, ಜಾಥಾಕ್ಕೆ ಅವಕಾಶ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೂಗಳ ಹಬ್ಬವಿರಲಿ ಅಥವಾ ಮುಸ್ಲಿಮರ ಹಬ್ಬವಿರಲಿ, ಕೋವಿಡ್ ಹರಡುತ್ತಿರುವ ಸಂದರ್ಭದಲ್ಲಿ ಅದರ ಆಚರಣೆ ಸೀಮಿತವಾಗಿ ನಡೆಯಬೇಕು. ಗಣೇಶ ಚತುರ್ಥಿಯಾಗಲೀ, ಮೊಹರಂ ಆಗಲೀ ಅಥವಾ ಬೇರೆ ಯಾವುದೇ ಹಬ್ಬದಲ್ಲೂ ಧಾರ್ಮಿಕ ಸಭೆ ಸಮಾರಂಭ ಹಮ್ಮಿಕೊಳ್ಳುವಂತಿಲ್ಲ. ಜಾತ್ರೆ ಹಾಗೂ ಜಾಥಾ ನಡೆಸುವಂತಿಲ್ಲ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದರು.

‘ಹಬ್ಬಗಳ ಆಚರಣೆ ಕುರಿತು ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯನ್ನು ಎಲ್ಲರೂ ಪಾಲಿಸಬೇಕು. ಅವುಗಳ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಬಿಬಿಎಂಪಿ ಸನ್ನದ್ಧವಾಗಿದೆ’ ಎಂದು ಅವರು ಸುದ್ದಿಗಾರರಿಗೆ ಬುಧವಾರ ತಿಳಿಸಿದರು.

‘ಜನ ಮಾಸ್ಕ್ ಧರಿಸದೇ ಸಾರ್ವಜನಿಕ ಸ್ಥಳಗಳಲ್ಲಿ ಓಡಾಡಿದರೆ ಸೋಂಕು ಹರಡುವ ಅಪಾಯ ಹೆಚ್ಚು. ಕೋವಿಡ್ ಮುಂಜಾಗ್ರತಾ ಕ್ರಮಗಳ ಅನುಷ್ಠಾನಕ್ಕೆ ಮಾರ್ಷಲ್‌ಗಳು, ಗೃಹರಕ್ಷಕ ದಳದ ಸಿಬ್ಬಂದಿಯನ್ನು ಒಳಗೊಂಡ 54 ತಂಡಗಳನ್ನು ರಚಿಸಿದ್ದೇವೆ. ಪೌರರಕ್ಷಣಾ ದಳದ ಸ್ವಯಂ ಸೇವಕರನ್ನೂ ಈ ಉದ್ದೇಶಕ್ಕೆ ಬಳಸಿಕೊಳ್ಳಲಿದ್ದೇವೆ. ಮಾರುಕಟ್ಟೆಗಳಲ್ಲಿ ಹೆಚ್ಚಿನ ಜನ ಸೇರುತ್ತಾರೆ. ಹಾಗಾಗಿ ಅಲ್ಲಿ ಇಂತಹ ತಂಡಗಳನ್ನು ಆದ್ಯತೆ ಮೇರೆಗೆ ನಿಯೋಜಿಸುತ್ತೇವೆ. ಅವಶ್ಯಕತೆ ಇರುವಲ್ಲಿ ಕೋವಿಡ್ ನಿಯಂತ್ರಣದ ನಿರ್ಬಂಧಗಳನ್ನು ಇನ್ನಷ್ಟು ಕಠಿಣಗೊಳಿಸಲಿದ್ದೇವೆ’ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

‘ಕೋವಿಡ್ ಮೂರನೇ ಅಲೆ ಎದುರಿಸಲು ಬಿಬಿಎಂಪಿಯ ತಜ್ಞರ ಸಮಿತಿ ಹಾಗೂ ಮಕ್ಕಳ ತಜ್ಞರ ಸಮಿತಿ ಜೊತೆ ಸಮಾಲೋಚಿಸಿ ಕ್ರಮ ಕೈಗೊಳ್ಳುತ್ತಿದ್ದೇವೆ. ಆಸ್ಪತ್ರೆಗಳನ್ನು ಸಜ್ಜಾಗಿ ಇಟ್ಟದ್ದೇವೆ. ಕೋವಿಡ್ ಪೀಡಿತ ಮಕ್ಕಳ ಆರೈಕೆಗೂ ವ್ಯವಸ್ಥೆ ಕಲ್ಪಿಸಿದ್ದೇವೆ. ಸಾರ್ವಜನಿಕರ ಆರೋಗ್ಯ ಮಾಹಿತಿ ಸಂಗ್ರಹಿಸಲು ಮನೆ ಮನೆ ಸರ್ವೆ ನಡೆಸುತ್ತಿದ್ದೇವೆ. ಕೊರೊನಾ ವೈರಾಣು ವಿರುದ್ಧ ಸೆಣಸಲು ಜನರ ದೇಹದಲ್ಲಿ ಎಷ್ಟರ ಮಟ್ಟಿಗೆ ಪ್ರತಿಕಾಯಗಳು ನಿರ್ಮಾಣವಾಗಿವೆ ಎಂಬುದನ್ನು ತಿಳಿಯಲು ಸೆರೊ ಸಮೀಕ್ಷೆ ಆರಂಭಿಸಿದ್ದೇವೆ. ಜೊತೆಗೆ, ಬಿಬಿಎಂಪಿ ಹಂತದಲ್ಲೂ ಪ್ರಾಯೋಗಿಕವಾಗಿ ಜೀನೋಮ್ ಸೀಕ್ವೆನ್ಸಿಂಗ್ ನಡೆಸಲು ಕ್ರಮ ಕೈಗೊಂಡಿದ್ದೇವೆ’ ಎಂದು ವಿವರಿಸಿದರು.

‘ಲಸಿಕೆ ಪಡೆಯಲು ಹಿಂಜರಿಕೆ ಬೇಡ’

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ವಿತರಣೆಗೆ ಸಮಸ್ಯೆ ಇಲ್ಲ. ಈಗಾಗಲೇ ಶೇ 70ಕ್ಕೂ ಹೆಚ್ಚು ಮಂದಿ ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ. ಆದರೂ ಕೆಲವರು ಲಸಿಕೆ ಪಡೆಯಲು ಹಿಂಜರಿಕೆ ಹೊಂದಿದ್ದಾರೆ. ಎಲ್ಲರೂ ಧೈರ್ಯದಿಂದ ಲಸಿಕೆ ಪಡೆದುಕೊಳ್ಳಬೇಕು’ ಎಂದು ಗೌರವ್ ಗುಪ್ತ ಹೇಳಿದರು.

‘ಬಿಬಿಎಂಪಿಗೆ ಲಸಿಕೆ ಪೂರೈಕೆ ಪ್ರಮಾಣ ಹೆಚ್ಚು ಮಾಡುವಂತೆ ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಪೂರೈಕೆ ಆಗುವ ವಿಶ್ವಾಸವಿದೆ. ಪ್ರತಿ ವಾರ್ಡ್‌ನಲ್ಲಿ ಕನಿಷ್ಠಪಕ್ಷ ಒಂದು ಕಡೆ ಲಸಿಕೆ ನೀಡಲು ವ್ಯವಸ್ಥೆ ಮಾಡಿದ್ದೇವೆ’ ಎಂದರು.

‘ಶಾಲಾ ಶಿಕ್ಷಕರಿಗೆ ಲಸಿಕೆ ಕಡ್ಡಾಯ’

‘ಶಾಲಾ ಕಾಲೇಜುಗಳು ಇದೇ 23ರಿಂದ ಆರಂಭವಾಗಲಿವೆ. ಈ ಸಂದರ್ಭದಲ್ಲಿ ಕಾಲೇಜು ವಿದ್ಯಾರ್ಥಿಗಳು ಲಸಿಕೆ ಪಡೆದಿರಬೇಕು. ಶಾಲೆಯ ವಿದ್ಯಾರ್ಥಿಗಳ ವಯಸ್ಸು 18 ವರ್ಷಕ್ಕಿಂತ ಕಡಿಮೆ ಇರುವುದರಿಂದ ಅವರು ಲಸಿಕೆ ಪಡೆಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಶಾಲೆಗಳ ಶಿಕ್ಷಕರು, ಇತರ ಸಿಬ್ಬಂದಿ ಹಾಗೂ ವಾಹನ ಚಾಲಕರೆಲ್ಲರೂ ಕೋವಿಡ್ ಲಸಿಕೆ ಪಡೆಯುವುದು ಹಾಗೂ ಮಾಸ್ಕ್ ಧರಿಸುವುದು ಕಡ್ಡಾಯ. ಶಾಲಾ ಕಾಲೇಜು ಕಟ್ಟಡಗಳಿಗೆ ಸೋಂಕು ನಿವಾರಕ ದ್ರಾವಣವನ್ನೂ ಸಿಂಪಡಿಸಲಿದ್ದೇವೆ’ ಎಂದು ಗೌರವ್ ಗುಪ್ತ ತಿಳಿಸಿದರು.

ಸುದ್ದಿ 2 ನಿಮಿಷ

ಕೆಎಸ್‌ಆರ್‌ಟಿಸಿಗೆ ಸಾಮಾಜಿಕ ಕಳಕಳಿ ಪ್ರಶಸ್ತಿ

ಬೆಂಗಳೂರು: ಕೋವಿಡ್ ಸಮಯದಲ್ಲಿ ಅನುಷ್ಠಾನಗೊಳಿಸಿದ ಉಪಕ್ರಮಗಳಿಗಾಗಿ ಕೆಎಸ್‌ಆರ್‌ಟಿಸಿಗೆ ರೋಟರಿ 3190 ಡಿಸ್ಟ್ರಿಕ್ಟ್‌ನ ಸಾಮಾಜಿಕ ಕಳಕಳಿ ಪ್ರಶಸ್ತಿ ಲಭಿಸಿದೆ.

ಹಳೆಯ ಬಸ್‌ಗಳನ್ನು ಬಳಸಿಕೊಂಡು 20 ಕಡೆ ಸಂಚಾರಿ ಜ್ವರ ಕ್ಲಿನಿಕ್ ತೆರೆಯಲಾಗಿತ್ತು. ಮಿನಿ ಬಸ್‌ಗಳನ್ನು ಸಾರಿಗೆ ಸಂಜೀವಿನಿ ಆಂಬುಲೆನ್ಸ್ ಆಗಿ ಪರಿವರ್ತಿಸಲಾಗಿತ್ತು. ಬಸವೇಶ್ವರ ನಗರದ ಬಸ್ ನಿಲ್ದಾಣದಲ್ಲಿ ರೋಟರಿ ಆಡ್ವಿಕಾ ನಯೋನಿಕಾ ಸಹಯೋಗದಲ್ಲಿ 200 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರ ತೆರೆಯಲಾಗಿತ್ತು.

ಕ್ಯಾನ್ಸರ್ ಬಗ್ಗೆ ಹಳ್ಳಿ-ಹಳ್ಳಿಗಳಲ್ಲಿ ಜಾಗೃತಿ ಮೂಡಿಸಲು ಮತ್ತು ಸಂಚಾರಿ ರಕ್ತ ನಿಧಿಯಾಗಿ ಬಳಸಿಕೊಳ್ಳಲು ಹಳೆಯ ಐರಾವತ ಹವಾ ನಿಯಂತ್ರಿತ ಬಸ್ಸನ್ನು ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಗೆ ಉಚಿತವಾಗಿ ನೀಡಲಾಗಿದೆ.

‘ದೇಶದಲ್ಲೇ ಮೊದಲ ಪ್ರಯತ್ನವಾಗಿ 5 ಹಾಸಿಗೆಯ ಐಸಿಯು ಬಸ್ ನಿರ್ಮಿಸಲಾಗಿದ್ದು, ಪುತ್ತೂರು ವಿಭಾಗದ ವ್ಯಾಪ್ತಿಯಲ್ಲಿನ 21 ಗ್ರಾಮಗಳ 1303 ಜನ ಇದರ ಪ್ರಯೋಜನ ಪಡೆದಿದ್ದಾರೆ. ಈ ಎಲ್ಲ ಉಪಕ್ರಮಗಳನ್ನು ಗುರುತಿಸಿ ಸಾಮಾಜಿಕ ಕಳಕಳಿ ಪ್ರಶಸ್ತಿಯನ್ನು ರೋಟರಿ ಸಂಸ್ಥೆ ನೀಡಿದೆ’ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.



‘ಸ್ವೈಸಿ ಭೋಜನಂ’ ಹೊಸ ಶಾಖೆ ಉದ್ಘಾಟನೆ

ಬೆಂಗಳೂರು: ‘ಸ್ವೈಸಿ ಭೋಜನಂ’ ರೆಸ್ಟೋರೆಂಟ್‌ನ ನೂತನ ಶಾಖೆಯನ್ನು ನಗರದ ವಸಂತಪುರ ಮುಖ್ಯರಸ್ತೆಯಲ್ಲಿ ಇತ್ತೀಚೆಗೆ ತೆರೆಯಲಾಯಿತು.

ಶಾಖೆ ಉದ್ಘಾಟಿಸಿ ಮಾತನಾಡಿದ ರೆಸ್ಟೋರೆಂಟ್ ಮಾಲೀಕರಾದ ಸ್ವಪ್ನಾ ಅರುಣ್,‘ ನಮ್ಮದು ನಾಟಿ ಸ್ಟೈಲ್ ಮತ್ತು ಪರಿಸರಸ್ನೇಹಿ ಅಡುಗೆಗಳು. ಮಣ್ಣಿನ ಮಡಿಕೆಗಳಲ್ಲೇ ಹಂಡಿ ಬಿರಿಯಾನಿ ತಯಾರಿ ನಮ್ಮ ವಿಶೇಷ. ಮಾಂಸಾಹಾರ ಪ್ರಿಯರಿಗೆ ಒಂದೇ ಕಡೆ ಮಂಗಳೂರು, ಆಂಧ್ರ ಹಾಗೂ ಚೆಟ್ಟಿನಾಡು ಶೈಲಿಯ ಬಿರಿಯಾನಿ ಸವಿಯುವ ಅವಕಾಶ ಕಲ್ಪಿಸಿದ್ದೇವೆ’ ಎಂದರು.

‘ಕುಂಬಳಗೋಡಿನಲ್ಲಿರುವ ಆಹಾರ ತಯಾರಿ ಘಟಕದಿಂದ ಎಲ್ಲ ಶಾಖೆಗಳಿಗೆ ಆಹಾರ ಪೂರೈಕೆಯಾಗುತ್ತದೆ. ನಗರದಲ್ಲಿ 40 ಶಾಖೆಗಳನ್ನು ತೆರೆಯಲು ನಿರ್ಧರಿಸಲಾಗಿದೆ’ ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.97 ಕೋಟಿ ▲	3.23 ಕೋಟಿ ▲
ಸಕ್ರಿಯ ಪ್ರಕರಣ	1.73 ಕೋಟಿ ▲	3.58 ಲಕ್ಷ ▼
ಗುಣಮುಖ	18.79 ಕೋಟಿ ▲	3.15 ಕೋಟಿ ▲
ಸಾವು	44.00ಲಕ್ಷ ▲	4.33 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.50 ಲಕ್ಷ ▲	35,786 ▲
ಗುಣಮುಖ	5.60 ಲಕ್ಷ ▲	37,812 ▲
ಸಾವು	9,938 ▲	511 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

1.37 ಲಕ್ಷ ▲ ಅಮೆರಿಕ	38,218 ಬ್ರೆಜಿಲ್	26,766 ▼ ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

69.66 ▲ ಅಮೆರಿಕ	13.01 ▼ ಬ್ರಿಟನ್	5.32 ಬ್ರೆಜಿಲ್

(* ರಾತ್ರಿ 12ರವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.354 ಲಕ್ಷ ▲	ಮಹಾರಾಷ್ಟ್ರ
34,610 ▲	ತಮಿಳುನಾಡು
25,077 ▲	ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

64.06 ▲	ಮಹಾರಾಷ್ಟ್ರ
37.45 ▲	ಕೇರಳ
25.94 ▲	ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಮಾರುಕಟ್ಟೆಗೆ ಅನಿರೀಕ್ಷಿತ ಭೇಟಿ ಹೆಚ್ಚಿಸುವಂತೆ ಅಧಿಕಾರಿಗಳಿಗೆ ಸೂಚನೆ

ಅಂತರ ಕಾಪಾಡದಿದ್ದರೂ ಬೀಳುತ್ತೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಎರಡು ತಿಂಗಳಲ್ಲಿ ಸಾಲುಸಾಲು ಹಬ್ಬಗಳು ಬರುತ್ತಿರುವುದರಿಂದ ಮಾರುಕಟ್ಟೆಗಳಲ್ಲಿ ಜನದಟ್ಟಣೆ ಉಂಟಾಗುವುದನ್ನು ತಪ್ಪಿಸುವುದು ಬಿಬಿಎಂಪಿ ಪಾಲಿಗೆ ತಲೆನೋವಾಗಿದೆ. ಹಬ್ಬಗಳ ಖರೀದಿ ಭರಾಟೆ ವೇಳೆ ನಗರದ ಮಾರುಕಟ್ಟೆಗಳಲ್ಲಿ ಹಾಗೂ ಮಳಿಗೆಗಳಲ್ಲಿ ಕೋವಿಡ್ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈ ವಾರದಲ್ಲಿ ವರಮಹಾಲಕ್ಷ್ಮೀ ವ್ರತ, ಮೊಹರಂ, ತಿಂಗಳ ಅಂತ್ಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಸೆಪ್ಟೆಂಬರ್‌ನಲ್ಲಿ ಗಣೇಶ ಚತುರ್ಥಿ, ದುರ್ಗಾ ಪೂಜೆ ಹಾಗೂ ಮತ್ತು ಅಕ್ಟೋಬರ್ ತಿಂಗಳಲ್ಲಿ ನವರಾತ್ರಿ ಹಬ್ಬಗಳು ಇವೆ. ಹಬ್ಬದ ಸಾಮಗ್ರಿ ಖರೀದಿ ಸಂದರ್ಭದಲ್ಲಿ ಮಾರುಕಟ್ಟೆ ಪ್ರದೇಶಗಳಲ್ಲಿ ಜನದಟ್ಟಣೆ ತಡೆಯುವ ಉದ್ದೇಶದಿಂದ ಹಲವು ಕಟ್ಟುನಿಟ್ಟಿನ ನಿರ್ಬಂಧಗಳನ್ನು ಬಿಬಿಎಂಪಿ ವಿಧಿಸಿದೆ.

ಮಾರ್ಷಲ್‌ಗಳು, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳು ಅಂಗಡಿಗಳು, ರೆಸ್ಟೋರೆಂಟ್‌ಗಳು, ಮಾಲ್‌ಗಳು ಮತ್ತು ಮಾರುಕಟ್ಟೆಗಳಿಗೆ ಅನಿರೀಕ್ಷಿತ ಭೇಟಿ ನೀಡುವ ಮೂಲಕ ಕೋವಿಡ್ ನಿಯಂತ್ರಣ ನಿಯಮಗಳು ಪಾಲನೆ ಆಗುತ್ತಿರುವುದನ್ನು ಖಾತರಿಪಡಿಸಿಕೊಳ್ಳಬೇಕು. ರಾತ್ರಿ ಕರ್ಫ್ಯೂ ಸಮಯದಲ್ಲಿ ಎಲ್ಲ ವಾಣಿಜ್ಯ ಮಳಿಗೆಗಳನ್ನು ಕಡ್ಡಾಯವಾಗಿ ಮುಚ್ಚಿಸಬೇಕು.

ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ನಿಯಮಗಳನ್ನು ಪಾಲಿಸದಿರುವುದು ಕಂಡು ಬಂದಲ್ಲಿ ಅಂತಹವರಿಗೆ ದಂಡ ವಿಧಿಸುವುದರ ಜೊತೆಗೆ ಅವರ ವಿರುದ್ಧ 2005ರ ವಿಪತ್ತು ನಿರ್ವಹಣಾ ಕಾಯ್ದೆಯನ್ವಯ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತರು ಬುಧವಾರ ಆದೇಶ ಹೊರಡಿಸಿದ್ದಾರೆ.

ಮಾಸ್ಕ್ ಧರಿಸದವರಿಗೆ ಮಾತ್ರವಲ್ಲ ಅಂತರ ಕಾಪಾಡದ ಸಾರ್ವಜನಿಕರಿಗೆ ಇದಕ್ಕೆ ಕ್ರಮ ಕೈಗೊಳ್ಳದ ವರ್ತಕರಿಗೂ ₹ 250 ದಂಡ ವಿಧಿಸಬೇಕು. ಈ ನಿರ್ದೇಶನಗಳ ಜಾರಿಯ ಬಗ್ಗೆ ಮೇಲ್ವಿಚಾರಣೆ ನಡೆಸುವಂತೆ ಆಯಾ ವಲಯಗಳ ಜಂಟಿ ಆಯುಕ್ತರಿಗೆ, ಆರೋಗ್ಯಾಧಿಕಾರಿಗಳಿಗೆ ಮತ್ತು ಮುಖ್ಯ ಮಾರ್ಷಲ್‌ಗಳಿಗೆ ಸೂಚಿಸಿದ್ದಾರೆ

ಜನಜಾಗೃತಿ: ‘ಕೋವಿಡ್ ನಿಯಂತ್ರಣಕ್ಕೆ ಮುಂಜಾಗ್ರತೆ ವಹಿಸುವುದನ್ನು ಉತ್ತೇಜಿಸಲು ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳ ಬೇಕು. ಈ ಬಗ್ಗೆ ಪಾಲಿಕೆಯ ಆರೋಗ್ಯ ವೈದ್ಯಾಧಿಕಾರಿಗಳು ತಮ್ಮ ಅಧೀನದ ಪ್ರಮುಖ ಮಾರುಕಟ್ಟೆಗಳಲ್ಲಿ ಒಂದು ವಾಹನ ಬಳಸಿಕೊಂಡು ಹಬ್ಬದ ಹಿಂದಿನ ದಿನ ಹಾಗೂ ಹಬ್ಬದ ದಿನ ಸಂದೇಶ ಹಾಗೂ ಸೂಚನೆಗಳನ್ನು ಧ್ವನಿವರ್ಧಕದ ಮೂಲಕ ಘೋಷಿಸುವ ಮೂಲಕ ಸಾರ್ವಜನಿಕರಲ್ಲಿ ಮತ್ತು ವರ್ತಕರಲ್ಲಿ ಅರಿವು ಮೂಡಿಸಬೇಕು. ಮುಖ್ಯ ಮಾರ್ಷಲ್ ಅವರು ಮಾರ್ಷಲ್‌ಗಳಿಗೆ ನಿಯೋಜಿಸಿರುವ ಗಸ್ತು ವಾಹನಗಳ ಮೂಲಕವೂ ಹಬ್ಬದ ಹಿಂದಿನ ದಿನ ಹಾಗೂ ಹಬ್ಬದ ದಿನ ಕೋವಿಡ್ ಮುಂಜಾಗ್ರತಾ ಕ್ರಮಗಳ ಬಗ್ಗೆ ಸಂದೇಶ ಹಾಗೂ ಸೂಚನೆಗಳನ್ನು ಧ್ವನಿವರ್ಧಕದ ಮೂಲಕ ಘೋಷಿಸಬೇಕು’ ಎಂದು ಗೌರವ್ ಗುಪ್ತ ಸಲಹೆ ನೀಡಿದ್ದಾರೆ.

ಸೋಂಕು ನಿಯಂತ್ರಣಕ್ಕೆ ಮಾರ್ಗಸೂಚಿಗಳು

- ಮಾಸ್ಕ್ ಧರಿಸುವ ಸರಿಯಾದ ಕ್ರಮದ ಬಗ್ಗೆಯೂ ಸರಿಯಾದ ತಿಳಿವಳಿಕೆ ನೀಡಬೇಕು. ಪ್ರಮುಖ ಮಾರುಕಟ್ಟೆಗಳಲ್ಲಿ ಮಾಸ್ಕ್ ಧರಿಸದವರಿಗೆ ತಲಾ ₹ 250 ದಂಡ ವಿಧಿಸುವುದನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು.
- ಪಾಲಿಕೆ ವ್ಯಾಪ್ತಿಯ ಎಲ್ಲ ಮಾರುಕಟ್ಟೆಗಳಲ್ಲಿ ಅಂತರ ಕಾಯ್ದುಕೊಳ್ಳುವುದಕ್ಕೆ ಮಾರ್ಷಲ್‌ಗಳು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ಅಗತ್ಯ ಕ್ರಮವಹಿಸಬೇಕು. ಅಂತರ ಕಾಪಾಡಲು ಕ್ರಮ ವಹಿಸದ ವರ್ತಕರಿಗೆ ಮತ್ತು ಈ ನಿಯಮ ಉಲ್ಲಂಘಿಸುವ ಸಾರ್ವಜನಿಕರಿಗೆ ₹ 250 ದಂಡ ವಿಧಿಸಬೇಕು.
- ಅಂಗಡಿಗಳು, ರೆಸ್ಟೋರೆಂಟ್‌ಗಳು ಮತ್ತು ಮಾಲ್‌ಗಳ ಮಾಲೀಕರು ಹಾಗೂ ಸಿಬ್ಬಂದಿ ಕಡ್ಡಾಯವಾಗಿ ಕನಿಷ್ಠ ಪಕ್ಷ ಕೋವಿಡ್ ಲಸಿಕೆಯ ಮೊದಲನೇ ಡೋಸ್ ಲಸಿಕೆ ಪಡೆದಿರಬೇಕು.
- ಅಂಗಡಿಗಳು, ರೆಸ್ಟೋರೆಂಟ್‌ಗಳು ಮತ್ತು ಮಾಲ್‌ಗಳ ಮಾಲೀಕರು ಹಾಗೂ ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಮಾಸ್ಕ್ ಧರಿಸುವಂತೆ ಮತ್ತು ಅಂತರ ಕಾಯ್ದುಕೊಳ್ಳುವಂತೆ ವ್ಯವಸ್ಥೆ ಕಲ್ಪಿಸಬೇಕು ಮತ್ತು ನಿಗಾ ಇಡಬೇಕು.

ಬಿಎಸ್‌ವೈ ಮಾಲ್ಡೀವ್ಸ್‌ಗೆ ಪ್ರವಾಸ

ಬೆಂಗಳೂರು:ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾಲ್ಡೀವ್ಸ್‌ಗೆ ಪ್ರವಾಸ ತೆರಳಿದ್ದಾರೆ.

ತಮ್ಮ ರಾಜಕೀಯೇತರ ಹಳೆಯ ಗೆಳೆಯರು ಮತ್ತು ಕುಟುಂಬದ ಸದಸ್ಯರ ಜತೆಗೆ ತೆರಳಿದ್ದು, ಭಾನುವಾರ ವಾಪಾಸಾಗಲಿದ್ದಾರೆ. ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಬಳಿಕ ವಿಶ್ರಾಂತಿ ಪಡೆಯುವ ಉದ್ದೇಶವೂ ಅವರದ್ದಾಗಿದೆ ಎಂದು ಮೂಲಗಳು ಹೇಳಿವೆ. ಪುತ್ರ ವಿಜಯೇಂದ್ರ ಅವರೂ ತೆರಳಿದ್ದಾರೆ ಎನ್ನಲಾಗಿದೆ.



ಯಡಿಯೂರಪ್ಪ

ಚಿತ್ರಾವಳಿ



ಮೈಸೂರಿನ ಚಿಕ್ಕಗಡಿಯಾರದ ಆವರಣದಲ್ಲಿ ಬುಧವಾರ ಮಳೆಯ ನಡುವೆಯೇ ಕೊಡೆ ಹಿಡಿದು ಕುಳಿತಿದ್ದ ತಾಯಿಯ ಜತೆ ನಿಂತ ಬಾಲಕ ಹೂವಿನ ಹಾರ ಖರೀದಿಸುವವರಿಗಾಗಿ ಎದುರು ನೋಡುತ್ತಿದ್ದ ಪ್ರಜಾವಾಣಿ ಚಿತ್ರ/ಬಿ.ಆರ್‌.ಸವಿತಾ



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 2019–20ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮದಲ್ಲಿ ಬಸವಲಿಂಗ ಪಟ್ಟದೇವರು ಅವರಿಗೆ ‘ಬಸವ ರಾಷ್ಟ್ರೀಯ ಪ್ರಶಸ್ತಿ’ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿತರಿಸಿದರು. (ಎಡದಿಂದ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್‌. ರಂಗಪ್ಪ, ಸಚಿವ ಸುನಿಲ್ ಕುಮಾರ್, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಜಿ. ರವಿಶಂಕರ್ ಹಾಗೂ ಚಿಕ್ಕಪೇಟೆ ಶಾಸಕ ಉದಯ್ ಗರುಡಾಚಾರ್ ಇದ್ದರು. –ಪ್ರಜಾವಾಣಿ ಚಿತ್ರ



ಕೆ.ಆರ್‌.ಪುರ ಸಮೀಪದ ಸಂಜಯನಗರದಲ್ಲಿ ಅಪ್ಸಾ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಕಟ್ಟಡ ಮತ್ತು ಗೃಹ ಕಾರ್ಮಿಕರ ಸೇವಾ ಸೌಲಭ್ಯಗಳ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಜನರಿಗೆ ಆಹಾರ ಧಾನ್ಯಗಳ ಕಿಟ್, ಸುರಕ್ಷತಾ ಕಿಟ್ ಗಳನ್ನು ಸಂಯೋಜಕ ಐ.ಎಸ್‌.ಪಾಟೀಲ್ ವಿತರಿಸಿದರು. ಗ್ಲೋಬಲ್ ವೆಲ್‌ಫೇರ್ ಫೌಂಡೇಷನ್ ಅಧ್ಯಕ್ಷೆ ಜಯಲಕ್ಷ್ಮಿ ಪುತ್ರನ್, ಮುಖಂಡ ಮಾರುತಿ, ಮಹಿಳಾ ಪ್ರತಿನಿಧಿಗಳಾದ ಕವಿತಾ, ಜಯಮ್ಮ, ಹರ್ಷಾ, ಶಾಹಿರಾ, ಫಿಜಾ ಇದ್ದರು.

ಇಳಿಕೆ ಕಂಡಿದ್ದ ಪರೀಕ್ಷೆ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,365 ಮಂದಿ ಕೊರೊನಾ ಸೋಂಕಿತರಾಗಿರುವುದು ಬುಧವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.33 ಲಕ್ಷ ದಾಟಿದೆ.

ಈ ವಾರ 1.13 ಲಕ್ಷಕ್ಕೆ ಇಳಿಕೆಯಾಗಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಒಂದು ದಿನದಲ್ಲಿ 1.79 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.76ರಷ್ಟು ವರದಿಯಾಗಿದೆ. 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 9 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ, ರಾಮನಗರ ಹಾಗೂ ಕೊಪ್ಪಳದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 268, ಮೈಸೂರಿನಲ್ಲಿ 123 ಹಾಗೂ ಕೊಡಗಿನಲ್ಲಿ 86 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 327 ಹಾಗೂ ಹಾಸನದಲ್ಲಿ 107 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 22 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 13 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡ ಹಾಗೂ ಮೈಸೂರಿನಲ್ಲಿ ತಲಾ 3, ಉಡುಪಿ, ತುಮಕೂರು, ಬೆಂಗಳೂರು, ಬೆಳಗಾವಿ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉತ್ತರ ಕನ್ನಡ ಸೇರಿದಂತೆ ಆರು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.61 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,061ಕ್ಕೆ ಏರಿದೆ. ಸೋಂಕಿತರಲ್ಲಿ 1,558 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.74 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 21,266ಕ್ಕೆ ಇಳಿಕೆಯಾಗಿದೆ.

ನಗರದ ಕೋವಿಡ್ ಅಂಕಿ–ಅಂಶ

12,33,839 ▲	ಒಟ್ಟು ಪ್ರಕರಣಗಳು (12,33,512 ನಿನ್ನೆಯ ವಿವರ)
7,920 ▲	ಸಕ್ರಿಯ ಪ್ರಕರಣಗಳು
12,09,965 ▲	ಗುಣಮುಖರಾದವರು
15,953 ▲	ಒಟ್ಟು ಸಾವು

ಶುಕ್ರವಾರದ ಏರಿಕೆ

ಹೊಸ ಪ್ರಕರಣ	327 ▼
ಗುಣಮುಖ	318 ▼
ಸಾವು	02 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಚಿವೆ ಶಶಿಕಲಾಗೆ ಝೀರೋ ಟ್ರಾಫಿಕ್: ಹೈಕೋರ್ಟ್‌ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜಭವನಕ್ಕೆ ಬರಲು ಶಶಿಕಲಾ ಜೊಲ್ಲೆ ಅವರಿಗೆ ಝೀರೋ ಟ್ರಾಫಿಕ್ (ತಡೆರಹಿತ ಸಂಚಾರ) ಸೌಲಭ್ಯ ಕಲ್ಪಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಅಧಿಕಾರ ದುರುಪಯೋಗ ಮಾಡಿಕೊಂಡಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆರೋಪಿಸಿ ನಗರದ ವಕೀಲ ಜಿ. ಬಾಲಾಜಿ ನಾಯ್ಡು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಆ.4ರಂದು ಮಧ್ಯಾಹ್ನ 2.14ರಿಂದ 2.40ರವರೆಗೆ 34 ಕಿಲೋ ಮೀಟರ್ ಝೀರೋ ಟ್ರಾಫಿಕ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಇದರಿಂದ ಸಾಮಾನ್ಯ ಜನ ತೊಂದರೆ ಅನುಭವಿಸಿದರು. ಶಿಷ್ಟಾಚಾರದ ಪ್ರಕಾರ ರಾಜ್ಯಪಾಲರು, ಮುಖ್ಯಮಂತ್ರಿ, ಗೃಹ ಸಚಿವ, ಮುಖ್ಯ ನ್ಯಾಯಮೂರ್ತಿ ಮತ್ತು ಡಿಜಿಪಿ ಅನುಮತಿ ಮೇರೆಗೆ ಅಗತ್ಯವಿದ್ದಲ್ಲಿ ಮಾತ್ರ ಇತರರಿಗೆ ಈ ಸೌಲಭ್ಯ ಕಲ್ಪಿಸಬಹುದು ಎಂದು ಅರ್ಜಿದಾರರು ತಿಳಿಸಿದ್ದಾರೆ.

ಶಶಿಕಲಾ ಜೊಲ್ಲೆಯವರು ಆ.4ರಂದು ಕೇವಲ ಶಾಸಕರಾಗಿದ್ದರು. ಝೀರೋ ಟ್ರಾಫಿಕ್ ಸೌಲಭ್ಯ ಪಡೆಯಲು ಅವರು ಅರ್ಹರಾಗಿರಲಿಲ್ಲ ಎಂದು ಹೇಳಿದ್ದಾರೆ.

ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಮೊದಲು ಈ ಸಂಬಂಧ ಯಾರಿಗೂ ದೂರು ನೀಡಿಲ್ಲ ಎಂದು ಸರ್ಕಾರಿ ವಕೀಲರು ಆಕ್ಷೇಪ ವ್ಯಕ್ತಪಡಿಸಿದರು. ಹಲವು ವಿಷಯಗಳನ್ನು ಈ ಅರ್ಜಿ ಹೊಂದಿದೆ ಎಂಬುದನ್ನು ಗಮನಿಸಿದ ಪೀಠ, ಇದೇ ಅರ್ಜಿಯನ್ನೇ ದೂರು ಎಂದು ಪರಿಗಣಿಸಿ ಪ್ರತಿಕ್ರಿಯೆ ಸಲ್ಲಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿತು. ವಿಚಾರಣೆಯನ್ನು ಸೆ.22ಕ್ಕೆ ಮುಂದೂಡಿತು.



ಬಿಡಿಎ ಅಧಿಕಾರಿಗಳ ವಿರುದ್ಧ ರೈತರು ಹಮ್ಮಿಕೊಂಡಿದ್ದ ಪಾದಯಾತ್ರೆಯನ್ನು ಪೊಲೀಸರು, ಯಲಹಂಕ ಸಮೀಪದ ಅನಂತಪುರ ಗೇಟ್ ಬಳಿ ತಡೆದರು.

ರೈತರ ಪಾದಯಾತ್ರೆ ತಡೆದ ಪೊಲೀಸರು

ಯಲಹಂಕ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಲು ಹೊರಟಿರುವ ಡಾ.ಶಿವರಾಮ ಕಾರಂತ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ದೌರ್ಜನ್ಯ ಮತ್ತು ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿ, ದಲಿತ ಸಂಘರ್ಷ ಸಮಿತಿ (ಸಂಯೋಜಕ) ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯಕರ್ತರು ಹಾಗೂ ರೈತರು ಹಮ್ಮಿ ಕೊಂಡಿದ್ದ ಪಾದಯಾತ್ರೆಯನ್ನು ಪೊಲೀಸರು ಅನಂತಪುರ ಗೇಟ್ ಬಳಿ ತಡೆದರು.

ರಾಮಗೊಂಡನಹಳ್ಳಿಯಿಂದ ಬಿಡಿಎ ಕಚೇರಿಯವರೆಗೆ ಪಾದಯಾತ್ರೆ ನಡೆಸಲು ರೈತರು ತೀರ್ಮಾನಿಸಿದ್ದರು. ಆದರೆ, ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆಗೊಂಡಿದ್ದ ಪೊಲೀಸರು, ಮಾರ್ಗಮಧ್ಯೆ ಕಾರ್ಯಕರ್ತರನ್ನು ತಡೆದು, ಸೆಕ್ಷನ್ 144 ಜಾರಿಯಲ್ಲಿರುವುದರಿಂದ ಪಾದಯಾತ್ರೆ ನಿಲ್ಲಿಸುವಂತೆ ಮನವೊಲಿಸಿದರು.

ಈ ವೇಳೆ ಮಾತನಾಡಿದ ಸಮಿತಿಯ ಬೆಂಗಳೂರು ಜಿಲ್ಲಾ ಸಂಯೋಜಕ ಎಂ.ರಮೇಶ್, ’ಶಿವರಾಮ ಕಾರಂತ ಬಡಾವಣೆಗೆ ತಗಲುವ ವೆಚ್ಚವನ್ನು ಬಿಡಿಎ ಯಾವ ಮೂಲದಿಂದ ಸಂಗ್ರಹಿಸಿದೆ ಎಂಬ ವಿಚಾರವನ್ನು ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಬೇಕು. ಆ್ಯಕ್ಟ್-2013ರ ಕಾಯ್ದೆ ಅಡಿಯಲ್ಲಿ ಬಿಡಿಎ ವಶಪಡಿಸಿಕೊಂಡಿರುವ ರೈತರ ಜಮೀನುಗಳಿಗೆ ಸೂಕ್ತ ಭೂಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಬೇಕು‘ ಎಂದು ಆಗ್ರಹಿಸಿದರು.

‘ಉದ್ದೇಶಿಸಿರುವ ಯೋಜನೆಯು ವಸತಿ ಹಾಗೂ ನಿವೇಶನ ಹಂಚುವ ಯೋಜನೆಯಾಗಿರುವುದರಿಂದ ಈಗಾಗಲೇ ಈ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳಿಂದ ಮೂಲಸೌಕರ್ಯಗಳನ್ನು ಒದಗಿಸಿರುವುದರಿಂದ ವಸತಿ ನಿರ್ಮಿಸಿಕೊಂಡಿರುವವರು ಹಾಗೂ ನಿವೇಶನದಾರರನ್ನು ಒಕ್ಕಲೆಬ್ಬಿಸದೆ, ಈ ಯೋಜನೆಯಿಂದ ಹೊರಗಿಡಬೇಕು‘ ಎಂದರು.

ರೈತಮುಖಂಡ ಮಾವಳಿಪುರ ಬಿ.ಶ್ರೀನಿವಾಸ್ ಮಾತನಾಡಿ, ‘ಕೋರ್ಟ್ ಆದೇಶಕ್ಕೆ ನಾವು ಗೌರವ ಕೊಡುತ್ತೇವೆ. ಆದರೆ, ಸರ್ಕಾರ ಮತ್ತು ಬಿಡಿಎ ರೈತರ ಕಣ್ಣುತಪ್ಪಿಸಿ, ಮಾಹಿತಿ ನೀಡದೆ ಯೋಜನೆ ಅನುಷ್ಠಾನಗೊಳಿಸುವ ರೈತರನ್ನು ಒಕ್ಕಲೆಬ್ಬಿಸಲು ಮುಂದಾಗಿರುವುದು ಸರಿಯಲ್ಲ’ ಎಂದು ತಿಳಿಸಿದರು.

‘ಈ ಭಾಗದಲ್ಲಿ ಕೃಷಿ ಮತ್ತು ಹೈನುಗಾರಿಕೆಯನ್ನು ಅವಲಂಬಿಸಿರುವ ಎಲ್ಲ ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವವರೆಗೂ ಈ ಯೋಜನೆಯನ್ನು ತಡೆಹಿಡಿಯಬೇಕು‘ ಎಂದರು.

ಬಿಡಿಎ ಭೂಸ್ವಾಧೀನ ಅಧಿಕಾರಿ ನಿಖಿತಾ ಪ್ರತಿಭಟನಕಾರರ ಮನವಿ ಸ್ವೀಕರಿಸಿ. ಈ ಬಗ್ಗೆ ಆಯುಕ್ತರು ಮತ್ತು ಸರ್ಕಾರದ ಗಮನಕ್ಕೆ ತಂದು, ವಾರದೊಳಗಾಗಿ ಮಾಹಿತಿ ನೀಡ ಲಾಗುವುದು ಎಂದು ಭರವಸೆ ನೀಡಿದರು.

ಲೋಕ ಅದಾಲತ್: ಒಂದಾದ 74 ಜೋಡಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆ.14ರಂದು ನಡೆದ ಮೆಗಾ ಲೋಕ ಅದಾಲತ್‌ನಲ್ಲಿ 3.88 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ವಿಚ್ಛೇದನ ಬಯಸಿದ್ದ 74 ಜೋಡಿ ಮತ್ತೆ ಒಂದಾದರೆ, ಮದುವೆ ಮುರಿದುಕೊಂಡಿದ್ದ ದಂಪತಿ ಮರು ಮದುವೆಗೂ ನಿರ್ಧರಿಸಿದ್ದಾರೆ’ ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ಕಾರ್ಯನಿರ್ವಾಹಕ ಅಧ್ಯಕ್ಷ ನ್ಯಾಯಮೂರ್ತಿ ಅರವಿಂದ ಕುಮಾರ್ ತಿಳಿಸಿದರು.

‘ಎಲ್ಲ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಿಂದ ಪಡೆದ ಅಂಕಿ–ಅಂಶಗಳ ಪ್ರಕಾರ, 4,213 ವ್ಯಾಜ್ಯ ಪೂರ್ವ ಪ್ರಕರಣಗಳು ಮತ್ತು 21,836 ಬಾಕಿ ಪ್ರಕರಣಗಳನ್ನು ವರ್ಚುವಲ್ ಮಾದರಿಯಲ್ಲಿ ವಿಲೇವಾರಿ ಮಾಡಲಾಗಿದೆ. ವಿವಾಹ ಸಂಬಂಧಿತ ಒಟ್ಟು 9,815 ಪ್ರಕರಣಗಳನ್ನು ಗುರುತಿಸಿ, 1,166 ಪ್ರಕರಣ ಇತ್ಯರ್ಥ ಮಾಡಲಾಗಿದೆ. ಸಮಾಲೋಚನೆ ನಡೆಸಿದ್ದರಿಂದ 74 ದಂಪತಿಗಳು ಮತ್ತೆ ಒಂದಾಗಿದ್ದಾರೆ. ಮೈಸೂರಿನಲ್ಲಿ ವೈವಾಹಿಕ ಸಂಬಂಧ ಮುರಿದುಕೊಂಡಿದ್ದ ದಂಪತಿ ಪ್ರಧಾನ ಜಿಲ್ಲಾ ನ್ಯಾಯಾಧೀಶರ ಸಮ್ಮುಖದಲ್ಲಿ ಮರುಮದುವೆ ಮಾಡಿಕೊಳ್ಳಲು ಒಪ್ಪಿಕೊಂಡಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಒಂದೇ ದಿನ ಇಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಿರುವುದು ದಾಖಲೆ. ವಾರಾಂತ್ಯದ ಕರ್ಫ್ಯೂ ಇದ್ದ ಕಾರಣ 8 ಜಿಲ್ಲೆಗಳಲ್ಲಿ ಹಲವು ವಕೀಲರು ಲೋಕ ಅದಾಲತ್‌ಗೆ ಹಾಜರಾಗಲು ಸಾಧ್ಯವಾಗಿಲ್ಲ. ಅಂತಹ ಕಡೆ ಸೋಮವಾರ ವಿಶೇಷ ಅದಾಲತ್ ಆಯೋಜಿಸಲಾಗಿತ್ತು ಎಂದು ತಿಳಿಸಿದರು.

ಒಂದು ಕೋಟಿ ಜನರನ್ನು ತಲುಪಲು ಯೋಜನೆ ರೂಪಿಸಿದ ಕೆಎಸ್‌ಪಿಸಿಬಿ

ಕೋವಿಡ್ ‘ವಿಘ್ನ’ ನಿವಾರಣೆಗೆ ಅರಿಸಿನ ಗಣೇಶನ ಆರಾಧನೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸರ್ಕಾರವು ಕೋವಿಡ್ ಕಾರಣ ಸಾರ್ವಜನಿಕ ಗಣೇಶೋತ್ಸವಗಳನ್ನು ನಿಷೇಧಿಸಿದೆ. ಹಾಗಾಗಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಈ ಬಾರಿ ಪ್ರತಿಮನೆಯಲ್ಲಿಯೂ ಅರಿಸಿನ ಗಣೇಶನ ಆರಾಧನೆ ಉತ್ತೇಜಿಸಲು ಮುಂದಾಗಿದೆ.

‘ಪ್ಲಾಸ್ಟರ್ ಆಫ್ ಪ್ಯಾರಿಸ್’ನಿಂದ (ಪಿಒಪಿ) ತಯಾರಿಸಿದ ಗಣೇಶ ವಿಗ್ರಹಗಳ ಮಾರಾಟವನ್ನು ನಿಷೇಧಿಸಿದ್ದರೂ ಇದಕ್ಕೆ ಪೂರ್ಣ ಪ್ರಮಾಣದಲ್ಲಿ ಕಡಿವಾಣ ಹಾಕಲು ಮಂಡಳಿಗೆ ಇಷ್ಟು ವರ್ಷ ಸಾಧ್ಯವಾಗಿರಲಿಲ್ಲ. ಹೀಗಾಗಿಯೇ ಪ್ರತಿವರ್ಷ ಹಬ್ಬ ಮುಗಿಯುತ್ತಿದ್ದಂತೆ ಪಿಒಪಿ ಗಣೇಶ ವಿಗ್ರಹಗಳು ನಗರದ ವಿವಿಧ ಕೆರೆಗಳನ್ನು ಸೇರಿ, ಜಲ ಮೂಲವನ್ನು ಕಲುಷಿತಗೊಳಿಸುತ್ತಿದ್ದವು. ಪರಿಸರಸ್ನೇಹಿ ಗಣೇಶನ ಆರಾಧನೆ ಬಗ್ಗೆ ಜಾಗೃತಿ ಅಭಿಯಾನಗಳನ್ನು ನಡೆಸಿದರೂ ಅದು ಆಚರಣೆಯಲ್ಲಿ ಸಾಕಾರವಾಗಿರಲಿಲ್ಲ.

ಸರ್ಕಾರವು ಕಳೆದ ವರ್ಷ ಕೂಡ ಗಣೇಶೋತ್ಸವಕ್ಕೆ ನಿರ್ಬಂಧ ವಿಧಿಸಿ, ಜನರು ಒಂದೆಡೆ ಗುಂಪಾಗಿ ಸೇರದಂತೆ ಸೂಚಿಸಿತ್ತು. ಇದರಿಂದಾಗಿ ಪಿಒಪಿ (ಪ್ಲಾಸ್ಟರ್ ಆಫ್ ಪ್ಯಾರಿಸ್) ಗಣೇಶ ವಿಗ್ರಹಗಳು ಅಷ್ಟಾಗಿ ಮಾರುಕಟ್ಟೆಯಲ್ಲಿ ಕಾಣಿಸಿಕೊಂಡಿಲ್ಲ. ಮಣ್ಣಿನ ವಿಗ್ರಹಗಳ ಪ್ರತಿಷ್ಠಾಪನೆಗೆ ಪ್ರೋತ್ಸಾಹಿಸಲಾಗಿತ್ತು. ‘ಅರಿಸಿನ ಗಣೇಶ’ ಅಭಿಯಾನ ನಡೆಸಿದ್ದ ಮಂಡಳಿಯು, ಪರಿಸರ ಸ್ನೇಹಿ ವಿಗ್ರಹಗಳ ಆರಾಧನೆ ಬಗ್ಗೆ ಜಾಗೃತಿ ಮೂಡಿಸಿತ್ತು. ಇದರಿಂದಾಗಿ ಹಬ್ಬಕ್ಕೂ ಮೊದಲು ಶೇ 6ರಷ್ಟಿದ್ದ ನಿಯಂತ್ರಿತ ತ್ಯಾಜ್ಯ ನಿರ್ವಹಣೆಗೆ ಬಳಸುವ ನೀರಿನ ಗುಣಮಟ್ಟ (ಇ), ವಿಗ್ರಹಗಳ ವಿಸರ್ಜನೆ ಬಳಿಕ ಶೇ 5ಕ್ಕೆ ಇಳಿಕೆಯಾಗಿತ್ತು.

ಕೋಟಿ ಜನ ತಲುಪುವ ಗುರಿ: ಈ ಬಾರಿ ಪರಿಸರ ಸ್ನೇಹಿ ಗಣೇಶನ ಆರಾಧನೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಲು ಮಂಡಳಿ ಮುಂದಾಗಿದೆ. ಒಂದು ಕೋಟಿ ಜನರನ್ನು ತಲುಪುವ ಗುರಿ ಹಾಕಿಕೊಂಡಿದೆ. ಅರಿಸಿನ ಗಣೇಶ ವಿಗ್ರಹದ ಪ್ರಯೋಜನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ವಿಶೇಷ ಅಭಿಯಾನ ಪ್ರಾರಂಭಿಸಲು ಯೋಜನೆ ರೂಪಿಸಿದ್ದು, ಇದಕ್ಕಾಗಿ ಡಿಜಿಟಲ್ ವೇದಿಕೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿ ಡಿಜಿಟಲ್ ಪರದೆಗಳಲ್ಲಿ ಅರಿವು ಮೂಡಿಸಲಾಗುತ್ತದೆ.

‘ಹಾಲಿನ ಪ್ಯಾಕೆಟ್‌ಗಳು, ಅಗರಬತ್ತಿ ಪೊಟ್ಟಣಗಳು, ಬಸ್ ಟಿಕೆಟ್‌ಗಳು ಸೇರಿದಂತೆ ವಿವಿಧೆಡೆ ಅರಿಸಿನ ಗಣೇಶ ಆರಾಧನೆಯ ಬಗ್ಗೆ ಸಂದೇಶ ಸಾರಲಾಗುತ್ತದೆ. ಅರಿಸಿನ ವಿಗ್ರಹ ತಯಾರಿಸಿದವರಿಗೆ ಸಾಮಾಜಿಕ ಜಾಲತಾಣಗಳ ಮೂಲಕ ಪೋಸ್ಟ್ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ. ವಿವಿಧ ಕ್ಷೇತ್ರಗಳ ಗಣ್ಯರಿಂದ ಕೂಡ ಜಾಗೃತಿ ಮೂಡಿಸಲಾಗುತ್ತದೆ. ಇದು ನೀರಿನಲ್ಲಿ ಸುಲಭವಾಗಿ ಕರಗಲಿದ್ದು, ಮನೆಯಲ್ಲಿಯೇ ವಿಸರ್ಜಿಸಬಹುದು’ ಎಂದು ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಸುರೇಶ್ ಮಧುಸೂದನ್ ತಿಳಿಸಿದರು.



ಅರಿಸಿನ ಗಣೇಶ

ಅರಿಸಿನ ಗಣೇಶ ವಿಗ್ರಹ ತಯಾರಿ ಹೇಗೆ?

- ಅರಿಸಿನ ಪುಡಿಗೆ ಮೈದಾ, ಅಕ್ಕಿ ಅಥವಾ ರಾಗಿ ಹಿಟ್ಟಿನಲ್ಲಿ ಯಾವುದಾದರೂ ಒಂದನ್ನು ಸಮಾನವಾಗಿ ಮಿಶ್ರಣ ಮಾಡಿಕೊಳ್ಳುವುದು
- 7ರಿಂದ 8 ಚಮಚದಷ್ಟು ಸಕ್ಕರೆ ಪುಡಿ ಸೇರಿಸುವುದು
- ಮಿಶ್ರಣ ಹದ ಮಾಡಿಕೊಳ್ಳಲು ಬೇಕಾದಷ್ಟು ನೀರು ಬಳಸುವುದು
- ವಿಗ್ರಹಕ್ಕೆ ಕಣ್ಣಿನ ರೂಪದಲ್ಲಿ ಮೆಣಸಿನ ಕಾಳುಗಳನ್ನು ಅಳವಡಿಸುವುದು
- ವಿಗ್ರಹ ತಯಾರಿಸಿದ ಬಳಿಕ ಹೂವಿನ ಮೂಲಕ ಅಲಂಕಾರ ಮಾಡುವುದು

ಅರಿಸಿನ ಹೇರಳವಾದ ಔಷಧ ಗುಣ ಹೊಂದಿದೆ. ಕೋವಿಡ್ ಸಂದರ್ಭದಲ್ಲಿ ಅದರ ಮಹತ್ವ ಎಲ್ಲರ ಅರಿವಿಗೆ ಬರುತ್ತಿದೆ. ಈ ಬಗ್ಗೆ ಇನ್ನಷ್ಟು ಜಾಗೃತಿ ಮೂಡಿಸಲು ಅಭಿಯಾನ ಕೈಗೊಳ್ಳಲಾಗುತ್ತಿದೆ

ಸುರೇಶ್ ಮಧುಸೂದನ್,
ಕೆಎಸ್‌ಪಿಸಿಬಿ ಹಿರಿಯ ಪರಿಸರ ಅಧಿಕಾರಿ

ಪೊಲೀಸರ ಬಗ್ಗೆ ಅಲ್ಲಲ್ಲಿ ಅಪಸ್ವರ ಕೇಳಿ ಬರುತ್ತಿದೆ, ಅವು ಕೂಡಲೇ ನಿಲ್ಲಬೇಕು: ಗೃಹ ಸಚಿವರ ಎಚ್ಚರಿಕೆ

‘ಅಪ್ರಾಮಾಣಿಕ ಪೊಲೀಸರನ್ನು ಸಹಿಸುವುದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸರ ಬಗ್ಗೆ ಅಲ್ಲಲ್ಲಿ ಅಪಸ್ವರ ಕೇಳಿ ಬರುತ್ತಿದೆ. ಅವು ಕೂಡಲೇ ನಿಲ್ಲಬೇಕು. ಅಪ್ರಾಮಾಣಿಕ ಪೊಲೀಸ್ ಸಿಬ್ಬಂದಿಯನ್ನು ಯಾವ ಕಾರಣಕ್ಕೂ ನಾನು ಸಹಿಸುವುದಿಲ್ಲ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಎಚ್ಚರಿಸಿದರು.

ಪೊಲೀಸ್ ಇಲಾಖೆ ವತಿಯಿಂದ ಮೈಸೂರು ರಸ್ತೆಯ ಸಿಎಆರ್ ಕೇಂದ್ರ ಕಚೇರಿ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ‘ಕಳವು ಮತ್ತು ಜಪ್ತಿ ಮಾಡಿದ ವಸ್ತುಗಳ ಪ್ರದರ್ಶನ ಮತ್ತು ವಾರಸುದಾರರಿಗೆ ಸ್ವತ್ತು ಹಿಂತಿರುಗಿಸುವ ಕಾರ್ಯಕ್ರಮ’ದಲ್ಲಿ ಅವರು ಮಾತನಾಡಿದರು.

‘ಅಪರಾಧ ಪ್ರಕರಣಗಳಲ್ಲಿ ಪೊಲೀಸರೂ ಭಾಗಿಯಾಗಿದ್ದಾರೆ ಎಂದಾಗ ಅಂತಹವರ ಮೇಲೆ ಅಸಹ್ಯ ಮೂಡುತ್ತದೆ. ಇದು, ಪ್ರಾಮಾಣಿಕ ಪೊಲೀಸ್ ವೃಂದಕ್ಕೂ ಕಪ್ಪು ಚುಕ್ಕೆ. ಹಾಗಾಗಿ, ಅಪ್ರಾಮಾಣಿಕ ಪೊಲೀಸರ ಪಟ್ಟಿ ಸಿದ್ಧಪಡಿಸಲು ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕಟ್ಟಿಟ್ಟಬುತ್ತಿ. ವರ್ಗಾವಣೆ ವ್ಯವಸ್ಥೆಯಲ್ಲೂ ನಡೆಯುತ್ತಿರುವ ಅಕ್ರಮಗಳನ್ನು ನಿಯಂತ್ರಣಕ್ಕೆ ತರಲಾಗುವುದು’ ಎಂದರು.

‘ಯಾರು ಕೆಟ್ಟರೂ ತೊಂದರೆಯಾಗುವುದಿಲ್ಲ. ಆದರೆ, ಒಬ್ಬ ಪೊಲೀಸ್ ತಪ್ಪು ದಾರಿ ಹಿಡಿದಾಗ, ಸಮಾಜದ ಮೇಲೆ ಬಹಳ ದೊಡ್ಡ ದುಷ್ಪರಿಣಾಮ ಬೀರುತ್ತದೆ. ಹಣದ ದಾಸರಾಗಿ ಅದರ ಹಿಂದೆ ಹೋಗಬೇಡಿ. ಅಪರಾಧಿಗಳನ್ನು ಪೋಷಿಸುವ ಕೆಲಸ ಮಾಡದೆ, ಅವರನ್ನು ಹತ್ತಿಕ್ಕಬೇಕು’ ಎಂದು ಕಿವಿಮಾತು ಹೇಳಿದರು.

ಸಿಬ್ಬಂದಿಗೆ ವಸತಿ ಭರವಸೆ: ‘ಪ್ರಸ್ತುತ ಪೊಲೀಸರಿಗೂ ಸರ್ಕಾರ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿದೆ. ಸದ್ಯ ಶೇ 49ರಷ್ಟು ಪೊಲೀಸರಿಗೆ ಉತ್ತಮ ವಸತಿ ಸೌಲಭ್ಯ ಸಿಕ್ಕಿದೆ. ಉಳಿದವರಿಗೂ ಶೀಘ್ರದಲ್ಲೇ ವಸತಿ ಸೌಕರ್ಯ ಕಲ್ಪಿಸಲಾಗುವುದು. ಈ ಬಗ್ಗೆ ವಿಶೇಷ ಗಮನ ಹರಿಸುತ್ತೇನೆ’ ಎಂದು ಭರವಸೆ ನೀಡಿದರು.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ‘ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧೀನದಲ್ಲಿ ಇರುವವರಿಗೆ ರಕ್ಷಣೆ ನೀಡಲು ಪ್ರತ್ಯೇಕ ಭದ್ರತಾ ವ್ಯವಸ್ಥೆ ಕಲ್ಪಿಸಲಾಗುವುದು. ಈ ಬಗ್ಗೆ ವರದಿ ಸಲ್ಲಿಸಲಾಗುವುದು’ ಎಂದರು.



ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ವಾರಸುದಾರರಿಗೆ ಸ್ವತ್ತನ್ನು ಹಿಂತಿರುಗಿಸಿದರು. ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್.ರವಿಕಾಂತೇಗೌಡ ಹಾಗೂ ಹಿರಿಯ ಅಧಿಕಾರಿಗಳು ಇದ್ದರು.

2,500 ಪ್ರಕರಣ: ₹88 ಕೋಟಿ ಮೌಲ್ಯದ ವಸ್ತುಗಳ ಪ್ರದರ್ಶನ

ಬೆಂಗಳೂರು ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ನಡೆದಿದ್ದ 2,500 ಪ್ರಕರಣಗಳನ್ನು ಪೊಲೀಸರು ಭೇದಿಸಿದ್ದು, ಈ ಪ್ರಕರಣಗಳಲ್ಲಿ ಕಳವಾಗಿದ್ದ ಹಾಗೂ ಪೊಲೀಸರು ಜಪ್ತಿ ಮಾಡಿದ್ದ ಒಟ್ಟು ₹88 ಕೋಟಿ ಮೌಲ್ಯದ ವಸ್ತುಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ಈ ಪೈಕಿ ₹56 ಕೋಟಿ ಬೆಲೆ ಬಾಳುವ ಚಿನ್ನಾಭರಣ, ಸುಲಿಗೆ ಮಾಡಿದ್ದ ಮೊಬೈಲ್‌ಗಳು, ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ವಾಹನಗಳಿದ್ದವು. ₹32 ಕೋಟಿ ಬೆಲೆಯ ಮಾದಕ ವಸ್ತುಗಳು, ತಿಮಿಂಗಿಲದ ವಾಂತಿ (ಅಂಬೆರ್ಗ್ರಿಸ್) ಹಾಗೂ ಇನ್ನಿತರ ವಸ್ತುಗಳು ಪ್ರದರ್ಶನದಲ್ಲಿದ್ದವು.

₹18 ಲಕ್ಷ ಬಹುಮಾನ ಘೋಷಣೆ: ಕೊಲೆ, ಸರಗಳವು, ಮನೆಗಳವು ಸೇರಿದಂತೆ ವಿವಿಧ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಉತ್ತಮ ಕಾರ್ಯಾಚರಣೆ ನಡೆಸಿದ 400 ಪೊಲೀಸರಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ₹18 ಲಕ್ಷ ನಗದು ಬಹುಮಾನ ಘೋಷಿಸಿದರು. ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ 18 ಮಂದಿ ವಾರಸುದಾರರಿಗೆ ಕಳೆದುಕೊಂಡಿದ್ದ ವಸ್ತುಗಳನ್ನು ಹಸ್ತಾಂತರಿಸಿದರು.

ಅಫ್ಗನ್ನರ ರಕ್ಷಣೆಗೆ ಸರ್ಕಾರ ಬದ್ಧ

‘ಅಫ್ಗಾನಿಸ್ತಾನದ 339 ಮಂದಿ ರಾಜ್ಯದಲ್ಲಿರುವ ಮಾಹಿತಿ ಇದೆ. ಈ ಪೈಕಿ 192 ವಿದ್ಯಾರ್ಥಿಗಳಿದ್ದಾರೆ. ಅವರ ವೀಸಾ ಅವಧಿ ಮುಗಿಯುವ ಹಂತದಲ್ಲಿದ್ದು, ಈ ಪರಿಸ್ಥಿತಿಯಲ್ಲಿ ಮಾನವೀಯತೆ ದೃಷ್ಟಿಯಿಂದ ಸರ್ಕಾರ ಅವರ ರಕ್ಷಣೆಗೆ ನಿಲ್ಲುತ್ತದೆ. ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸುತ್ತೇನೆ. ಕೇಂದ್ರ ಸರ್ಕಾರಕ್ಕೂ ಇದರ ಮಾಹಿತಿ ನೀಡಲಾಗುವುದು’ ಎಂದು ಆರಗ ಜ್ಞಾನೇಂದ್ರ ಹೇಳಿದರು.

12 ಮನೆಗಳ ಧ್ವಂಸ: ದೂರು



ಮರಿಯಪ್ಪನ ಪಾಳ್ಯದಲ್ಲಿ ಮನೆಗಳನ್ನು ಧ್ವಂಸ ಮಾಡಿರುವುದು

ಬೆಂಗಳೂರು: ಜ್ಞಾನಭಾರತಿ ಠಾಣಾ ವ್ಯಾಪ್ತಿಯ ಮರಿಯಪ್ಪನಪಾಳ್ಯದ ಸುಬ್ರಹ್ಮಣ್ಯ ಲೇಔಟ್‌ನಲ್ಲಿ ಗುಂಪೊಂದು 12 ಮನೆಗಳನ್ನು ಧ್ವಂಸಗೊಳಿಸಿದ್ದು, ನಿವಾಸಿಗಳು ಬೀದಿಪಾಲಾಗಿದ್ದಾರೆ.

ಜೆಸಿಬಿಯೊಂದಿಗೆ ಬಂದ ಗುಂಪು ಜನರನ್ನು ಹೊರಕ್ಕೆ ಕಳುಹಿಸಿ ಮನೆಗಳನ್ನು ನೆಲಸಮ ಮಾಡಿದ್ದಾರೆ. ನಾಗದೇವನಹಳ್ಳಿ ಸರ್ವೆ ನಂಬರ್ 93ರ 2 ಎಕರೆ ಜಾಗವೂ ಸೇರಿ ಸುತ್ತಮುತ್ತಲ ಜಮೀನನ್ನು 1988ರಲ್ಲಿ ಗವಿಪುರಂ ಹೌಸಿಂಗ್ ಸಹಕಾರ ಸಂಘಕ್ಕೆ ಸ್ವಾಧೀನ ಮಾಡಿಕೊಳ್ಳಲಾಗಿತ್ತು. ರೈತರು ಹೈಕೋರ್ಟ್ ಮೊರೆ ಹೋಗಿದ್ದರಿಂದ ಇಡೀ ಜಾಗದ ಭೂಸ್ವಾಧೀನ ಆದೇಶವನ್ನು ನ್ಯಾಯಾಲಯ 2000ನೇ ಇಸವಿಯಲ್ಲಿ ವಜಾಗೊಳಿಸಿತ್ತು.

ಬಳಿಕ ರೈತರು ಉದಯ ಅಸೋಸಿಯೇಟ್ಸ್ ಮೂಲಕ ಜಮೀನನ್ನು ನಿವೇಶನವಾಗಿ ಪರಿವರ್ತಿಸಿ ಮಾರಿದ್ದರು. ಈ ನಿವೇಶನ ಖರೀದಿ ಮಾಡಿದ್ದ ಜನ ಮನೆಗಳನ್ನು ನಿರ್ಮಿಸಿದ್ದಾರೆ.

‘2014ರಲ್ಲಿ ಗವಿಪುರಂ ಹೌಸಿಂಗ್ ಸೊಸೈಟಿಯವರು ಮತ್ತೊಮ್ಮೆ ಹೈಕೋರ್ಟ್ ಮೆಟ್ಟಿಲೇರಿ ಇಡೀ ಜಾಗ ತಮಗೆ ಸೇರಿದ್ದು ಎಂಬ ಆದೇಶ ಪಡೆದುಕೊಂಡಿದ್ದರು. ಸುಳ್ಳು ದಾಖಲೆ ಸಲ್ಲಿಸಿ ಈ ಆದೇಶ ಪಡೆಯಲಾಗಿದೆ ಎಂದು ಆರೋಪಿಸಿ ನಿವೇಶನದಾರರು ಮತ್ತೊಮ್ಮೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆವು. ನಿವೇಶನದಾರರ ಪರವಾಗಿ ನ್ಯಾಯಾಲಯ ಆದೇಶ ನೀಡಿತು. ಹೌಸಿಂಗ್ ಸೊಸೈಟಿ ಮತ್ತೊಮ್ಮೆ ಮೇಲ್ಮನವಿ ಸಲ್ಲಿಸಿತು. ಈಗಾಗಲೇ ಮನೆ ನಿರ್ಮಾಣ ಆಗಿದ್ದರೆ ಅವುಗಳನ್ನು ಬಿಟ್ಟು ಖಾಲಿ ಜಾಗವನ್ನು ಸೊಸೈಟಿ ಸ್ವಾಧೀನಕ್ಕೆ ಪಡೆಯಬಹುದು ಎಂದು ಆದೇಶಿಸಿದೆ’ ಎಂದು ನಿವಾಸಿ ಎಚ್.ಎಂ. ಸೋಮು ವಿವರಿಸಿದರು.

’ಈ ನಡುವೆ, ಬುಧವಾರ ಬೆಳಿಗ್ಗೆ ಬಡಾವಣೆಗೆ ನುಗ್ಗಿದ 200ಕ್ಕೂ ಹೆಚ್ಚು ಗೂಂಡಾಗಳು ಮನೆಗಳನ್ನು ಧ್ವಂಸ ಮಾಡಿದ್ದಾರೆ. ನಿವೇಶನ ಪಡೆದು ಮನೆ ಕಟ್ಟಿದವರಿಗೆ ಅನ್ಯಾಯವಾಗಿದೆ‘ ಎಂದು ದೂರಿದರು. ದೂರು ಪಡೆಯಲು ಜ್ಞಾನಭಾರತಿ ಠಾಣೆಯ ಅಧಿಕಾರಿಗಳು ನಿರಾಕರಿಸಿದ್ದು, ಎಸಿಪಿ ಯು.ಡಿ. ಕೃಷ್ಣಕುಮಾರ್ ಅವರಿಗೆ ದೂರು ನೀಡಲಾಗಿದೆ ಎಂದು ಅವರು ತಿಳಿಸಿದರು.

ಪತ್ರ ಬರೆದಿಟ್ಟು ಕುಟುಂಬ ನಾಪತ್ತೆ?

ಬೆಂಗಳೂರು: ಬಾಗಲಗುಂಟೆ ಠಾಣೆಯ ವ್ಯಾಪ್ತಿಯಲ್ಲಿ ವಾಸವಿದ್ದ ಕುಟುಂಬವೊಂದು ದಿಢೀರ್ ನಾಪತ್ತೆಯಾಗಿದ್ದು, ಮನೆಯಲ್ಲಿ ಪತ್ರವೊಂದು ಪತ್ತೆಯಾಗಿದೆ.

ಮನೆಯಲ್ಲಿ ಗಾಂಧಿ ಮತ್ತು ಶಾಲಿನಿ ದಂಪತಿ, ಪುತ್ರಿಯರಾದ ಭಾನುಶ್ರೀ ಮತ್ತು ಹೇಮಶ್ರೀ ವಾಸವಿದ್ದರು. ಇದೇ ಕುಟುಂಬದ ಚಿರಂಜೀವಿ ತುಮಕೂರಿನಲ್ಲಿದ್ದರು.

ಪ್ರತಿದಿನವೂ ಮನೆಯವರಿಗೆ ಕರೆ ಮಾಡಿ ಚಿರಂಜೀವಿ ಮಾತನಾಡುತ್ತಿದ್ದರು. ಕೆಲ ದಿನಗಳ ಹಿಂದೆ ಕರೆ ಮಾಡಿದಾಗ ಎಲ್ಲರ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಇದರಿಂದ ಗಾಬರಿಗೊಂಡ ಚಿರಂಜೀವಿ ಮನೆಯ ಸಮೀಪದಲ್ಲಿದ್ದ ತನ್ನ ಸ್ನೇಹಿತನಿಗೆ ಕರೆ ಮಾಡಿ ವಿಚಾರಿಸಿದ್ದರು. ಕುಟುಂಬ ಸದಸ್ಯರು ಮನೆಯಲ್ಲಿ ಇಲ್ಲದಿರುವ ವಿಷಯವನ್ನು ಗೆಳೆಯ ಚಿರಂಜೀವಿ ಗಮನಕ್ಕೆ ತಂದಿದ್ದರು.

ಮನೆಯಲ್ಲಿರುವ ಪತ್ರದಲ್ಲಿ ‘ನಮಗೆ ಈ ಜೀವನ ಬೇಡ. ದಯವಿಟ್ಟು ನಮ್ಮನ್ನು ಸಾಯಲು ಬಿಡಿ’ ಎಂದು ಬರೆಯಲಾಗಿದೆ. ಠಾಣೆಯಲ್ಲಿ ದೂರು ದಾಖಲಾಗಿದೆ.

ಮಗ ಆತ್ಮಹತ್ಯೆ: ಅಪಘಾತದಲ್ಲಿ ತಾಯಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆಯಲ್ಲಿ ಮಗ ಮೃತಪಟ್ಟ ವಿಚಾರ ಕೇಳಿ, ಆಘಾತಗೊಂಡು ಆಸ್ಪತ್ರೆಯಿಂದ ಹೊರ ಬಂದ ತಾಯಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ವಿಜಯನಗರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಲೀಲಾವತಿ (45) ಅಪಘಾತದಲ್ಲಿ ಮೃತಪಟ್ಟ ಮಹಿಳೆ. ಮೋಹನ್ ಗೌಡ (20) ಆತ್ಮಹತ್ಯೆಗೆ ಯತ್ನಿಸಿ, ಆಸ್ಪತ್ರೆಯಲ್ಲಿ ಮೃತಪಟ್ಟ ಮಗ.

‘ಬಿ.ಕಾಂ ವ್ಯಾಸಂಗ ಮಾಡುತ್ತಿದ್ದ ಮೋಹನ್, ಬೈಕ್ ವಿಚಾರಕ್ಕೆ ತನ್ನ ಸ್ನೇಹಿತರೊಂದಿಗೆ ಜಗಳ ಮಾಡಿಕೊಂಡಿದ್ದ. ಬಳಿಕ ಮನೆಗೆ ಬಂದು ಕೋಣೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ’ ಎಂದು ಪೊಲೀಸರು ತಿಳಿಸಿದರು.

‘ಮನೋಜ್ ಸ್ನೇಹಿತರು ಮನೆಯ ಹೊರಗೆ ಬಂದು ಗಲಾಟೆ ಮಾಡುತ್ತಿರುವುದನ್ನು ಅವರ ತಂದೆ ಪೊಲೀಸರಿಗೆ ತಿಳಿಸಿದ್ದರು. ಮನೋಜ್ ಕೋಣೆಯ ಬಾಗಿಲು ತೆರೆಯಲಿಲ್ಲ. ಅನುಮಾನಗೊಂಡ ಪೋಷಕರು ಪೊಲೀಸರ ಸಹಾಯದಿಂದ ಬಾಗಿಲು ತೆರೆದು ನೋಡಿದಾಗ, ಮನೋಜ್ ನೇಣು ಬಿಗಿದ ಸ್ಥಿತಿಯಲ್ಲಿದ್ದ. ಕೂಡಲೇ ಸ್ಥಳೀಯ ಆಸ್ಪತ್ರೆಯಲ್ಲಿ ದಾಖಲಿಸಿದಾಗ ಮನೋಜ್ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದರು’ ಎಂದು ವಿವರಿಸಿದರು.

‘ಮಗ ಮೃತಪಟ್ಟ ವಿಚಾರದಿಂದ ಆಘಾತಗೊಂಡಿದ್ದ ತಾಯಿ ಲೀಲಾವತಿ ಆಸ್ಪತ್ರೆಯಿಂದ ಹೊರಬಂದಿದ್ದರು. ರಸ್ತೆಗೆ ಬಂದ ಕೂಡಲೇ ವಾಹನಕ್ಕೆ ಡಿಕ್ಕಿ ಹೊಡೆದು ಅವರೂ ಮೃತಪಟ್ಟಿದ್ದಾರೆ. ಮಗನನ್ನು ಕಳೆದುಕೊಂಡ ನೋವಿನಲ್ಲಿ ತಾಯಿಯೂ ಆತ್ಮಹತ್ಯೆಗೆ ಯತ್ನಿಸಿರುವ ಶಂಕೆ ಇದೆ’ ಎಂದು ಮೂಲಗಳು ತಿಳಿಸಿವೆ.

ಮನೋಜ್ ಆತ್ಮಹತ್ಯೆ ಸಂಬಂಧ ವಿಜಯನಗರ ಠಾಣೆ ಹಾಗೂ ತಾಯಿ ಲೀಲಾವತಿ ಅಪಘಾತ ಸಂಬಂಧ ವಿಜಯನಗರ ಸಂಚಾರ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಅಪರಾಧ ಸುದ್ದಿ

ಮಗು ಕದ್ದು ಮಾರಾಟ: ಮೂವರು ಆರೋಪಿಗಳ ಬಂಧನ

ಬೆಂಗಳೂರು: 38 ದಿನಗಳ ಮಗುವನ್ನು ಕದ್ದು ಮಾರಿದ್ದ ಆರೋಪದಡಿ ಮೂವರು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿದ್ದಾರೆ.

ತರುಣಮ್ ಬಾನು (38), ನಿಶಾತ್ ಕೌಶರ್ (35) ಹಾಗೂ ಕೆ.ಸವ್ರೋದ್ (51) ಬಂಧಿತರು.

‘ವಿಲ್ಸನ್ ಗಾರ್ಡನ್ ಠಾಣಾ ವ್ಯಾಪ್ತಿಯ ಅಗಡಿ ಆಸ್ಪತ್ರೆಯ ಬಳಿ ಹಣಕ್ಕಾಗಿ ಇಬ್ಬರು ಜಗಳವಾಡುತ್ತಿದ್ದ ಮಾಹಿತಿ ಪೊಲೀಸರಿಗೆ ಬಂದಿತ್ತು. ಸ್ಥಳಕ್ಕೆ ಭೇಟಿ ನೀಡಿದಾಗ ಪೊಲೀಸರನ್ನು ಕಂಡು ವ್ಯಕ್ತಿಯೊಬ್ಬ ಪರಾರಿಯಾದ. ಅಲ್ಲೇ ಇದ್ದ ತರುಣಮ್ ಬಾನುಳನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ, ಮಗು ಕದ್ದು ಮಾರಾಟ ಮಾಡಿರುವ ವಿಚಾರ ಹೇಳಿದಳು’ ಎಂದು ಪೊಲೀಸರು ತಿಳಿಸಿದರು.

‘ಪರಾರಿಯಾದ ಮುಬಾರಕ್ ಎನ್ನುವ ವ್ಯಕ್ತಿಗೆ ಮತ್ತು ಮಹಿಳೆಯೊಬ್ಬರಿಗೆ ಅಕ್ರಮ ಸಂಬಂಧವಿತ್ತು. ಅವರಿಗೆ ಈ ಮಗು ಜನಿಸಿತ್ತು. 15 ವರ್ಷಗಳಿಂದ ಮಕ್ಕಳಿಲ್ಲದ ಸಮಸ್ಯೆ ಎದುರಿಸುತ್ತಿದ್ದ ಸವ್ರೋದ್‌ಗೆ ಮಗುವನ್ನು ಮಾರಾಟ ಮಾಡಲು ಸಂಚು ರೂಪಿಸಿದ್ದರು. ಇದಕ್ಕಾಗಿ ತರುಣಮ್, ಮುಬಾರಕ್ ಹಾಗೂ ನಿಶಾತ್ ಸೇರಿ ತಾಯಿಗೆ ತಿಳಿಯದಂತೆ ಮಗುವನ್ನು ಕದ್ದಿದ್ದರು. ಸವ್ರೋದ್‌ಗೆ ₹1.30 ಲಕ್ಷಕ್ಕೆ ಮಗುವನ್ನು ಮಾರಿ, ಮುಂಗಡವಾಗಿ ₹50 ಸಾವಿರ ಹಣ ಪಡೆದಿದ್ದರು’ ಎಂದು ವಿವರಿಸಿದರು.

‘ಆರೋಪಿ ತರುಣಮ್ ನೀಡಿದ ಮಾಹಿತಿ ಮೇರೆಗೆ ಸವ್ರೋದ್‌ನನ್ನು ಬಂಧಿಸಲಾಯಿತು. ಮಗುವನ್ನು ರಕ್ಷಿಸಿ ತಾಯಿಗೆ ಹಸ್ತಾಂತರಿಸಲಾಗಿದೆ. ಮುಂಗಡವಾಗಿ ನೀಡಿದ ₹50 ಸಾವಿರ ಜಪ್ತಿ ಮಾಡಲಾಗಿದ್ದು, ತಲೆಮರೆಸಿಕೊಂಡಿರುವ ಮುಬಾರಕ್‌ನ ಪತ್ತೆ ಕಾರ್ಯ ಮುಂದುವರಿದಿದೆ’ ಎಂದೂ ಹೇಳಿದರು.

10 ಕೆ.ಜಿ ಗಾಂಜಾ ಜಪ್ತಿ

ಬೆಂಗಳೂರು: ಮಾದಕ ವಸ್ತುಗಳಾದ ಗಾಂಜಾ ಹಾಗೂ ಎಂಡಿಎಂಎ ಸಾಗಿಸುತ್ತಿದ್ದ ಇಬ್ಬರನ್ನು ಬೆಂಗಳೂರು ಉತ್ತರ ವಿಭಾಗದ ಅಬಕಾರಿ ಅಧಿಕಾರಿಗಳು ಬಂಧಿಸಿದ್ದಾರೆ.

‘ಆರೋಪಿಗಳು ಕೇರಳ ನೋಂದಣಿ ಸಂಖ್ಯೆಯ ಬೈಕ್‌ನಲ್ಲಿ ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದ ಮಾಹಿತಿ ಮೇರೆಗೆ ದಾಳಿ ನಡೆಸಿದಾಗ ಇಬ್ಬರೂ ಸಿಕ್ಕಿಬಿದ್ದರು’.

‘ಆರೋಪಿಗಳ ಬಳಿ ಪತ್ತೆಯಾದ ₹4.40 ಲಕ್ಷ ಮೌಲ್ಯದ 10 ಕೆ.ಜಿಯಷ್ಟು ಗಾಂಜಾ ಹಾಗೂ 5 ಗ್ರಾಂ. ಎಂಡಿಎಂಎ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಯಿತು. ಆರೋಪಿಗಳನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಹಣ ದುರುಪಯೋಗ: ನಿವೃತ್ತ ಎಂಜಿನಿಯರ್‌ಗೆ 3 ವರ್ಷ ಜೈಲು

ತರೀಕೆರೆ: ನಿವೃತ್ತಿ ಅವಧಿ ಮೀರಿದರೂ, ಅಕ್ರಮವಾಗಿ ಕೆಲಸ ಮಾಡಿ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯವು ಜೈಲು ಶಿಕ್ಷೆ ಸಹಿತ ದಂಡ ವಿಧಿಸಿದೆ.

ಮೈಸೂರು ಮೂಲದ ಜೆ.ಪುಟ್ಟಸ್ವಾಮಿ ಶಿಕ್ಷೆಗೆ ಗುರಿಯಾದ ಎಂಜಿನಿಯರ್. ಇವರು 2011ರಲ್ಲಿ ಪಟ್ಟಣದ ಸಣ್ಣ ನೀರಾವರಿ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. 2011ರ ಜೂನ್ 30ರಂದು ಸೇವೆಯಿಂದ ನಿವೃತ್ತಿ ಹೊಂದಿದ್ದರು. ಆದರೆ, 2011ರ ಜುಲೈ 1ರಿಂದ ನವೆಂಬರ್ 29ರವರೆಗೆ (5 ತಿಂಗಳು) ಅಕ್ರಮವಾಗಿ ಸೇವೆಯಲ್ಲಿ ಮುಂದುವರೆದು, ವೇತನ ಹಾಗೂ ಸೇವಾ ಭತ್ಯೆಯನ್ನು ಪಡೆದು ಸರ್ಕಾರಕ್ಕೆ ವಂಚಿಸಿದ್ದರು.

ಈ ಬಗ್ಗೆ ಅಂದಿನ ಸಬ್‌ಇನ್‌ಸ್ಪೆಕ್ಟರ್ ಪೌಲ್ ಪ್ರಿಯಕುಮಾರ್ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಧೀಶ ಎಂ.ಸಿ.ನಂಜೆಗೌಡ ಅವರು, ಆರೋಪ ಸಾಬೀತಾದ ಹಿನ್ನಲೆಯಲ್ಲಿ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿದ್ದಕ್ಕೆ 3 ವರ್ಷ ಜೈಲು ಹಾಗೂ ₹3ಲಕ್ಷ ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರದ ಪರ ಸಹಾಯಕ ಸರ್ಕಾರಿ ವಕೀಲ ಎನ್. ಗೋವಿಂದರಾಜ್ ವಾದಿಸಿದ್ದರು.

ಮೇಕೆದಾಟು; ಶೀಘ್ರ ಚಾಲನೆ ನೀಡಲು ಒತ್ತಾಯ

ರಾಮನಗರ: ಮೇಕೆದಾಟು ಯೋಜನೆಗೆ ಚಾಲನೆ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಬುಧವಾರ ರಾಮನಗರದಿಂದ ಕನಕಪುರ ತಾಲ್ಲೂಕಿನ ಸಂಗಮದವರೆಗೆ ಬೈಕ್ ಜಾಥಾ ನಡೆಯಿತು.

ನಗರದ ಮಿನಿ ವಿಧಾನಸೌಧದ ಬಳಿ ಸಮಾವೇಶಗೊಂಡ ವಿವಿಧ ರೈತ ಸಂಘ ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕುಂಟು ನೆಪ ಹೇಳದೇ ಯೋಜನೆ ಕಾಮಗಾರಿಗೆ ಕೂಡಲೇ ಚಾಲನೆ ನೀಡಬೇಕು ಎಂದರು.


ರೈತ ಸಂಘದ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಮೇಕೆದಾಟು ಯೋಜನೆಯಿಂದಾಗಿ ತಮಿಳುನಾಡಿನ ಜನತೆಗೂ ಅನುಕೂಲವಾಗುತ್ತದೆ. ಆದರೆ ನೆರೆ ರಾಜ್ಯದವರು ವಿನಾಕಾರಣ ತಕರಾರು ತೆಗೆಯುತ್ತಿರುವುದು ಸರಿಯಲ್ಲ. ಯೋಜನೆ ವಿಳಂಬ ಖಂಡಿಸಿ ಇಂದು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗುತ್ತಿದ್ದು, ಸರ್ಕಾರ ಸ್ಪಂದಿಸದೇ ಹೋದರೆ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು.

ಅಣೆಕಟ್ಟೆ ನಿರ್ಮಾಣವಾದರೆ ನಮ್ಮ ರಾಜ್ಯದ ಅರಣ್ಯ ಅರಣ್ಯ ಸಂಪತ್ತು ಹೋಗುತ್ತದೆ. ಆದಾಗ್ಯೂ ಬಯಲು ಸೀಮೆಯ ಜನತೆಗೆ ಕುಡಿಯುವ ನೀರಿಗೆ ಅನುಕೂಲವಾಗುವ ಜೊತೆಗೆ ವಿದ್ಯುತ್ ಉತ್ಪಾದನೆಯೂ ಸಾಧ್ಯವಿದೆ. ಹೀಗಾಗಿ ಮೇಕೆದಾಟು ಯೋಜನೆ ಎಲ್ಲರೂ ಒಪ್ಪುವಂತಹದ್ದು. ಈ ಯೋಜನೆಯು ರೈತ ಹೋರಾಟಗಾರ ಪುಟ್ಟಣ್ಣಯ್ಯ ಅವರ ಕನಸಾಗಿತ್ತು. ಶಾಸಕರಾಗಿದ್ದಾಗ ವಿಧಾನಸಭೆಯಲ್ಲಿ ಈ ಕುರಿತು ಅವರು ಧ್ವನಿ ಎತ್ತಿದ್ದರು ಎಂದು ಹೇಳಿದರು.

ಬೈಕ್ ಜಾಥಾದಲ್ಲಿ ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಮಂಡ್ಯ ಮೊದಲಾದ ಜಿಲ್ಲೆಗಳ ರೈತ ಸಂಘದ ಪದಾಧಿಕಾರಿಗಳು, ಬಹುಜನ ಸಮಾಜ ಪಾರ್ಟಿ, ಕನ್ನಡ ಪರ ಸಂಘಟನೆ, ದಲಿತ ಪರ ಸಂಘಟನೆಯ ಮುಖಂಡರು ಪಾಲ್ಗೊಂಡಿದ್ದರು.

ಮಧುರೈ ಆಧೀನಂನ ಮಠಾಧೀಶನೆಂದು ಘೋಷಿಸಿಕೊಂಡ ನಿತ್ಯಾನಂದ ಸ್ವಾಮಿ!

ಪ್ರಜಾವಾಣಿ ವಾರ್ತೆ



ನಿತ್ಯಾನಂದ ಸ್ವಾಮಿ

ಚೆನ್ನೈ: ಅತ್ಯಾಚಾರ ಸೇರಿದಂತೆ ಹಲವು ಆರೋಪಗಳನ್ನು ಎದುರಿಸುತ್ತಿರುವ ನಿತ್ಯಾನಂದ ಸ್ವಾಮಿ ತಾವು ಮಧುರೈ ಆಧೀನಂನ 293ನೇ ಮಠಾಧೀಶರಾಗಿ ಅಧಿಕಾರ ಸ್ವೀಕರಿಸಿರುವುದಾಗಿ ಸಾಮಾಜಿಕ ಮಾಧ್ಯಮದಲ್ಲಿ ಘೋಷಿಸುವ ಮೂಲಕ ಹೊಸ ವಿವಾದವನ್ನು ಸೃಷ್ಟಿಸಿದ್ದಾರೆ.

ಮಧುರೈ ಪೀಠದ ಮಠಾಧೀಶರಾಗಿದ್ದ ಅರುಣಗಿರಿನಾಥರ್ ಅವರು ಆಗಸ್ಟ್ 13 ರಂದು ಉಸಿರಾಟದ ಸಮಸ್ಯೆಯಿಂದ ಮಧುರೈನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದರು.

ಅರುಣಗಿರಿನಾಥರ್ ಅವರು ನಾಲ್ಕು ದಶಕಗಳ ಕಾಲ ಮಧುರೈ ಆಧೀನಂನ ಪೀಠಾಧಿಪತಿಯಾಗಿದ್ದರು. 2019 ರಲ್ಲಿ ಅರುಣಗಿರಿನಾಥರ್ ಸ್ವಾಮಿಗಳು ಹರಿಹರ ದೇಶಿಕ ಜ್ಞಾನಸಂಬಂತ ಪರಮಾಚಾರ್ಯ ಅವರನ್ನು ಉತ್ತರಾಧಿಕಾರಿಯನ್ನಾಗಿ ಕಿರಿಯ ಧರ್ಮಗುರುಗಳಾಗಿ ಘೋಷಿಸಿದ್ದರು. ಶೀಘ್ರದಲ್ಲೇ ಅವರಿಗೆ ಪೀಠಾಧಿಪತಿಯಾಗಿ ಪಟ್ಟಕಟ್ಟಲಾಗುವುದು ಎಂದು ಮಠದ ಅಧಿಕಾರಿಗಳು ತಿಳಿಸಿದ್ದಾರೆ. ನಿತ್ಯಾನಂದಸ್ವಾಮಿ ಅವರ ಹೇಳಿಕೆಯನ್ನು ಅಲ್ಲಗಳೆದಿದ್ದಾರೆ.

‘ಎಲ್ಲಾ ಆಧ್ಯಾತ್ಮಿಕ, ಧಾರ್ಮಿಕ, ಸಾಂಪ್ರದಾಯಿಕ ಆಚರಣೆಗಳ ಪ್ರಕಾರ ಕೈಲಾಸದ ವಿಶ್ವ ನಿಯಮಗಳು ಮತ್ತು ಮಧುರೈ ಆಧೀನಂನ ಅಧಿಕೃತ ಉತ್ತರಾಧಿಕಾರದ ವಿಧಿ ವಿಧಾನಗಳ ಮೂಲಕ 293 ನೇ ಮಠಾಧೀಶನಾಗಿ ಅಧಿಕಾರ ಸ್ವೀಕಾರ ಪ್ರಕ್ರಿಯೆ ಪೂರ್ಣಗೊಂಡಿವೆ’ಎಂದು ನಿತ್ಯಾನಂದ ಸ್ವಾಮಿ ಅವರು ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಏಪ್ರಿಲ್ 27, 2012ರಂದು ಅರುಣಗಿರಿನಾಥರ್ ಸ್ವಾಮಿಗಳವರು ನಿತ್ಯಾನಂದ ಅವರನ್ನು ಕಿರಿಯ ಧರ್ಮಗುರುಗಳೆಂದು ಔಪಚಾರಿಕವಾಗಿ ಘೋಷಿಸಿದ್ದರು. ಆದರೆ ನಂತರ ಡಿಸೆಂಬರ್ 19, 2012 ರಂದು ಅವರನ್ನು ಹುದ್ದೆಯಿಂದ ತೆಗೆದುಹಾಕಲಾಗಿತ್ತು.

ಆದರೆ, ಈಗಲೂ ಮಠದ ಕಿರಿಯ ಸ್ವಾಮೀಜಿಯಾಗಿ ಮಠದ ಭಕ್ತರಿಗೆ ಆನ್‌ಲೈನ್‌ನಲ್ಲಿ ನಿತ್ಯವೂ ಆಶೀರ್ವಚನ ನೀಡುತ್ತಿರುವುದಾಗಿ ನಿತ್ಯಾನಂದ ಸ್ವಾಮಿ ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.



ಆರೋಗ್ಯ ತಪಾಸಣೆ

ಕೆ.ಆರ್.ಪುರದ ಕೋಟೆ ವೆಂಕಟೇಶ್ವರ ದೇವಸ್ಥಾನದಲ್ಲಿ ಸ್ವಾತಿ ಮಹಿಳಾ ಸಂಘ, ಶಂಕರ್ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಆರೋಗ್ಯ ಶಿಬಿರವನ್ನು ಪಾಲಿಕೆಯ ಮಾಜಿ ಸದಸ್ಯ ಪಿ.ಜೆ. ಅಂತೋಣಿ ಸ್ವಾಮಿ ಚಾಲನೆ ನೀಡಿದರು. 300 ಕ್ಕೂ ಹೆಚ್ಚು ಬಡವರಿಗೆ ಆರೋಗ್ಯ ತಪಾಸಣೆ ಮಾಡಲಾಯಿತು. ಡಾ.ಕುಮಾರ್, ಡಾ.ತನ್ವಿ, ಕಿರಣ್ ಕುಮಾರ್, ಮುಖಂಡರಾದ ಶಿವಪ್ಪ ಇದ್ದರು.

19 ತಿಂಗಳ ಅಜ್ಞಾತವಾಸಕ್ಕೆ ಮುಕ್ತಿ

ಸೌದಿಯಿಂದ ಬೆಂಗಳೂರಿಗೆ ಬಂದಿಳಿದ ಹರೀಶ್ ಬಂಗೇರ

ಪ್ರಜಾವಾಣಿ ವಾರ್ತೆ

ಕುಂದಾಪುರ: ಫೇಸ್‌ಬುಕ್‌ನಲ್ಲಿ ಮೆಕ್ಕಾ ಹಾಗೂ ಸೌದಿ ದೊರೆಗಳ ಬಗ್ಗೆ ಅವಹೇಳನಕಾರಿ ಬರಹ ಪ್ರಕಟಿಸಿದ ಆರೋಪದಲ್ಲಿ ಸೌದಿ ಅರೇಬಿಯಾದಲ್ಲಿ ಬಂಧನಕ್ಕೊಳಗಾಗಿ, ಎಂಟು ತಿಂಗಳ ಬಳಿಕ ಬಿಡುಗಡೆಯಾಗಿದ್ದ ತಾಲ್ಲೂಕಿನ ಬೀಜಾಡಿ ಗೋಯಾಡಿ ಬೆಟ್ಟು ಹರೀಶ್ ಬಂಗೇರ ಬುಧವಾರ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಭಾರತಕ್ಕೆ ಬಂದಿಳಿದರು.

ಬೆಂಗಳೂರಿಗೆ ತೆರಳಿದ ಅವರ ಪತ್ನಿ ಸುಮನಾ, ಪುತ್ರಿ ಹನಿಷ್ಕಾ ಹಾಗೂ ಸ್ನೇಹಿತ ಲೋಕೇಶ್ ಅಂಕದಕಟ್ಟೆ, ಆನಂದಭಾಷ್ಪದೊಂದಿಗೆ ಬರಮಾಡಿಕೊಂಡರು.

ಘಟನೆ ವಿವರ: ಹರೀಶ್ ಬಂಗೇರ ಅವರು ಸೌದಿ ಅರೇಬಿಯಾದ ಕಾರ್ಟನ್ ಬಾಕ್ಸ್ ತಯಾರಿಕಾ ಕಾರ್ಖಾನೆಯೊಂದರಲ್ಲಿ ಎ.ಸಿ. ಮೆಕ್ಯಾನಿಕ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಫೇಸ್‌ಬುಕ್‌ನಲ್ಲಿ ಇವರ ಹೆಸರಿನಲ್ಲಿ ನಕಲಿ ಖಾತೆ ತೆರೆದಿದ್ದ ಕಿಡಿಗೇಡಿಗಳು, ಆ ಖಾತೆಯ ಮೂಲಕ ಸೌದಿ ಅರೇಬಿಯಾ ದೊರೆಯ ವಿರುದ್ಧ ಪೋಸ್ಟ್ ಮಾಡಿದ್ದರು. ಇದಾದ ನಂತರ ಸೌದಿ ಪೊಲೀಸರು ಬಂಗೇರ ಅವರನ್ನು 2019ರ ಡಿಸೆಂಬರ್ 22ರಂದು ಬಂಧಿಸಿದ್ದರು.

‘ನನ್ನ ಪತಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ’ ಎಂದು ಪತ್ನಿ ಸುಮನಾ ಮಾಧ್ಯಮಗಳಿಗೆ ಮಾಹಿತಿ ನೀಡಿ, ಪತಿಯ ಬಿಡುಗಡೆಗೆ ನೆರವಾಗುವಂತೆ ಮನವಿ ಮಾಡಿದ್ದರು. ಕುಟುಂಬ ಸ್ನೇಹಿತ ಲೋಕೇಶ್ ಅಂಕದಕಟ್ಟೆ, ಇತರ ಸ್ನೇಹಿತರೊಂದಿಗೆ ಸೇರಿ ಬಂಗೇರ ಅವರ ಬಿಡುಗಡೆಗಾಗಿ ನಿರಂತರ ಪ್ರಯತ್ನ ನಡೆಸಿದ್ದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ, ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಮತ್ತಿತರರು ಪ್ರಕರಣದ ಸಮಗ್ರ ತನಿಖೆಗೆ ಒತ್ತಡ ಹೇರಿದ್ದರು.

ಎಸ್ಪಿ ನಿಶಾ ಜೇಮ್ಸ್ ಹಾಗೂ ವಿಷ್ಣುವರ್ಧನ್ ಅವರ ಮಾರ್ಗದರ್ಶನದಲ್ಲಿ ತನಿಖೆ ನಡೆಸಿದ್ದ ಉಡುಪಿ ಪೊಲೀಸರು, ನಕಲಿ ಖಾತೆ ಸೃಷ್ಟಿಸಿ, ಅವಹೇಳನಕಾರಿ ಪೋಸ್ಟ್ ಮಾಡಿದ್ದ ಮೂಡಬಿದಿರೆಯ ಅಬ್ದುಲ್ ಹುಯೇಜ್ ಹಾಗೂ ಅಬ್ದುಲ್ ತುಯೇಜ್ ಎಂಬುವರನ್ನು ಬಂಧಿಸಿದ್ದರು.

ಆ ಬಳಿಕ, ಉಡುಪಿ ಪೊಲೀಸರು ಭಾರತೀಯ ರಾಯಭಾರ ಕಚೇರಿ ಮೂಲಕ, ಸೌದಿ ಸರ್ಕಾರಕ್ಕೆ ಮಾಹಿತಿ ತಲುಪಿಸಿ, ಬಂಗೇರ ಬಿಡುಗಡೆಗೆ ಮನವಿ ಮಾಡಿದ್ದರು. ಈ ಹಂತದಲ್ಲಿ ಹಿರಿಯ ಪೊಲೀಸ್ ಅಧಿಕಾರಿ ಕಮಲಪಂತ್, ಉಡುಪಿಯ ಸಾಮಾಜಿಕ ಹೋರಾಟಗಾರ ಡಾ.ಬಿ. ರವೀಂದ್ರನಾಥ ಶ್ಯಾನುಭಾಗ್, ಸೌದಿ ಅರೇಬಿಯಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯ ರಾಜತಾಂತ್ರಿಕ ಅಧಿಕಾರಿಗಳಾದ ದೇಶ್‌ಬಂಧು ಬಟ್ಟಿ ಹಾಗೂ ಸುನೀಲ್ ನೆರವಾಗಿದ್ದರು.



ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ ಬೆಳಿಗ್ಗೆ ಬಂದಿಳಿದ ಹರೀಶ ಬಂಗೇರ ಅವರನ್ನು ಪತ್ನಿ ಸುಮನಾ, ಪುತ್ರಿ ಹನಿಷ್ಕಾ ಹಾಗೂ ಸ್ನೇಹಿತ ಲೋಕೇಶ್ ಅಂಕದಕಟ್ಟೆ ಬರಮಾಡಿಕೊಂಡರು

ಕಾಬೂಲ್‌ನಲ್ಲಿ ತಂತ್ರಜ್ಞರಾಗಿದ್ದ ಮೆಲ್ವಿನ್

ಅಫ್ಗಾನಿಸ್ತಾನದಿಂದ ತಾಯ್ನಾಡಿಗೆ

ಪ್ರಜಾವಾಣಿ ವಾರ್ತೆ

ಉಳ್ಳಾಲ: ಅಫ್ಗಾನಿಸ್ತಾನ ತಾಲಿಬಾನ್ ವಶವಾಗುತ್ತಿದಂತೆ ಅಲ್ಲಿರುವ ಭಾರತೀಯರ ರಕ್ಷಣೆಗೆ ಭಾರತೀಯ ವಾಯುಸೇನೆ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಕಾಬೂಲ್‌ನಿಂದ ಭಾರತೀಯ ವಾಯುಸೇನೆ ಏರ್‌ಲಿಫ್ಟ್ ಮಾಡಿದವರಲ್ಲಿ ಉಳ್ಳಾಲದ ಮೆಲ್ವಿನ್ ಒಬ್ಬರಾಗಿದ್ದು, ಬುಧವಾರ ಸುರಕ್ಷಿತವಾಗಿ ತಾಯ್ನಾಡಿಗೆ ಮರಳಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಸಿಲುಕಿಕೊಂಡ ಭಾರತೀಯರಲ್ಲಿ ಮಂಗಳೂರು ಮೂಲದವರು ಅನೇಕ ಮಂದಿ ಇದ್ದಾರೆ. ವಿವಿಧ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಮಂಗಳೂರು ಮೂಲದವರನ್ನು ಆಯಾ ಕಂಪನಿಗಳು ಸ್ಥಳಾಂತರ ಮಾಡುವ ಕಾರ್ಯ ನಡೆಸುತ್ತಿದ್ದು, ಕತಾರ್, ಲಂಡನ್, ನಾರ್ವೆ ಸೇರಿದಂತೆ ಬೇರೆ ಬೇರೆ ದೇಶಗಳಿಗೆ ಸ್ಥಳಾಂತರಗೊಂಡಿದ್ದಾರೆ.

ಸೀ–17 ಏರೊಸ್ಪೇಸ್ ವಿಮಾನದ ಮೂಲಕ ಆಗಸ್ಟ್ 16ರ ಬೆಳಗಿನ ಜಾವ ಏರ್‌ಲಿಫ್ಟ್ ಮಾಡಿದ್ದು, ಗುಜರಾತ್ ಜಾಮ್‌ನಗರ ಬೇಸ್‌ನಲ್ಲಿ ಲ್ಯಾಂಡಿಂಗ್ ಆದ ಈ ವಿಮಾನದಲ್ಲಿ ಮೆಲ್ವಿನ್ ಪ್ರಯಾಣಿಸಿ, ತಾಯ್ನಾಡಿಗೆ ಬಂದಿದ್ದಾರೆ. ಆ ಬಳಿಕ ನವದೆಹಲಿ ತಲುಪಿ ಉಳ್ಳಾಲದ ಮನೆಗೆ ತಲುಪಿದ್ದಾರೆ. 10 ವರ್ಷಗಳಿಂದ ಕಾಬೂಲ್ ಆಸ್ಪತ್ರೆಯಲ್ಲಿ ತಂತ್ರಜ್ಞರಾಗಿ ಅವರು ಕೆಲಸ ನಿರ್ವಹಿಸುತ್ತಿದ್ದರು.



ಮೆಲ್ವಿನ್

‘ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿಯೇ ನಮ್ಮ ಆಸ್ಪತ್ರೆ ಇದ್ದುದರಿಂದ ಬರಲು ಸಾಧ್ಯವಾಗಿದೆ. ವಿಮಾನ ನಿಲ್ದಾಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಜಮಾವಣೆ ಆಗುತ್ತಿರುವುದರಿಂದ ಹೆಚ್ಚಿನ ವಿಮಾನಗಳು ರಾತ್ರಿ ಹೊತ್ತಿನಲ್ಲೇ ಲ್ಯಾಂಡಿಂಗ್ ಆಗುತಿದ್ದವು. ಎರಡು ದಿನಗಳ ಕಾಲ ವಿಮಾನ ನಿಲ್ದಾಣದಲ್ಲೇ ಅನ್ನ, ಆಹಾರವಿಲ್ಲದೆ ಕಾದು, ಬಳಿಕ ವಿಮಾನವನ್ನು ಹತ್ತಿದ್ದೇವೆ. ಸಿಕ್ಕ ಸಿಕ್ಕ ವಿಮಾನಗಳಲ್ಲಿ ಭಾರತೀಯರನ್ನು ಹತ್ತಿಸಲಾಗಿದೆ. ಇದರಿಂದ ಹಲವರು ಲಂಡನ್, ನಾರ್ವೆ, ದುಬೈ ದೇಶಗಳ ವಿಮಾನಗಳ ಮೂಲಕ ತೆರಳಿ ಅಲ್ಲೇ ಉಳಿದಿದ್ದಾರೆ. ಇವರಲ್ಲಿ ಹಲವರನ್ನು ಕ್ವಾರಂಟೈನ್‌ನಲ್ಲಿ ಇಡಲಾಗಿದೆ ಅನ್ನುವ ವಿಚಾರ ಸಹೋದ್ಯೋಗಿಗಳಿಂದ ತಿಳಿದುಬಂದಿದೆ’ ಎಂದು ಮೆಲ್ವಿನ್ ತಿಳಿಸಿದ್ದಾರೆ.

ಇಕೊಲಾಗ್ ಇಂಟರ್‌ನ್ಯಾಷನಲ್ ಸಂಸ್ಥೆಯಲ್ಲಿ ಮೆಲ್ವಿನ್ ಸಹೋದರ ಕೆಲಸ ಮಾಡುತ್ತಿದ್ದು, ಊರಿಗೆ ಬರಲು ವಿಮಾನ ಇಲ್ಲದೆ ಅಲ್ಲೇ ಸಿಲುಕಿದ್ದಾರೆ. ‘ಎರಡು ಬಾರಿ ವಾಟ್ಸ್‌ಆ್ಯಪ್ ಕರೆ ಮೂಲಕ ಮಾತಾಡಿದ್ದೇವೆ’ ಎಂದು ಮೆಲ್ವಿನ್ ಹೇಳಿದ್ದಾರೆ.

‘ಸಿಎಎ ಏಕೆ ತಂದಿದ್ದು ಗೊತ್ತಾಯಿತೇ?’

ಪ್ರಜಾವಾಣಿ ವಾರ್ತೆ

ಮೈಸೂರು: ‘ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿ ಮಾಡಿದಾಗ ಹೆಚ್ಚಿನವರು ಬೊಬ್ಬೆ ಹೊಡೆದರು. ಕಾಯ್ದೆಯನ್ನು ಪ್ರಧಾನಿ ಮೋದಿ ಏಕೆ ಜಾರಿಗೊಳಿಸಿದರು ಎಂಬುದನ್ನು ಅಫ್ಗಾನಿಸ್ತಾನದ ಪರಿಸ್ಥಿತಿ ಹಿನ್ನೆಲೆಯಲ್ಲಿ ನೋಡಿದರೆ ಅರ್ಥವಾಗುತ್ತದೆ. ಸಂಕಷ್ಟಕ್ಕೆ ಸಿಲುಕಿದವರನ್ನು ಭಾರತಕ್ಕೆ ಕರೆತರಲು ಆ ಕಾನೂನಿಂದ ಸಾಧ್ಯವಾಗಿದೆ’ ಎಂದು ಸಂಸದ ಪ್ರತಾಪಸಿಂಹ ಪ್ರತಿಪಾದಿಸಿದರು.



ಪ್ರತಾಪಸಿಂಹ

‘ಮುಸ್ಲಿಮರಿಗೆ ಏಕೆ ಅವಕಾಶ ನೀಡಿಲ್ಲ, ಅವರಿಗೂ ಕೊಡಿ ಎಂದು ಆಗ ಕೆಲವರು ಕೇಳಿದ್ದರು. ಅಫ್ಗಾನಿಸ್ತಾನದಲ್ಲಿರುವ ಮುಸ್ಲಿಮರು ಈಗ ಸಂಕಷ್ಟಕ್ಕೆ ಸಿಲುಕಿದ್ದು, ವಿಮಾನದ ಚಕ್ರ ಹಿಡಿದು ಕುಳಿತಿದ್ದಾರೆ. ಅವರಿಗೆ ಮುಸ್ಲಿಂ ರಾಷ್ಟ್ರಗಳಾದ ಪಾಕಿಸ್ತಾನ, ಇರಾನ್, ಉಜ್ಬೇಕಿಸ್ತಾನ ಆಶ್ರಯ ನೀಡಲಿ’ ಎಂದು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಟೀಕಿಸಿದರು.

‘ಷರಿಯಾ, ತಾಲಿಬಾನ್ ಮನಸ್ಥಿತಿ ಎಷ್ಟು ಮಾನವ ವಿರೋಧಿ ಎಂಬುದಕ್ಕೆ ಈಗಿನ ಘಟನೆಯೇ ಸಾಕ್ಷಿ. ಈ ಮನಸ್ಥಿತಿ ನಮ್ಮ ದೇಶದೊಳಗೂ ಇದ್ದು, ಬೆಳೆಯಲು ಬಿಟ್ಟರೆ ಪರಿಸ್ಥಿತಿ ಅಧೋಗತಿಗೆ ತಲುಪಲಿದೆ’ ಎಂದರು.

‘ಆರ್‌ಎಸ್‌ಎಸ್ ನಿಜವಾದ ತಾಲಿಬಾನಿ’

ಚಾಮರಾಜನಗರ: ‘ಭಾರತದಲ್ಲಿ ಆರ್‌ಎಸ್‌ಎಸ್‌ನವರು ನಿಜವಾದ ತಾಲಿಬಾನಿಗಳು. ಅವರು (ಅಫ್ಗಾನಿಸ್ತಾನದ ತಾಲಿಬಾನಿಗಳು) ಯಾವ ರೀತಿ ಧರ್ಮದ ಆಧಾರದಲ್ಲಿ ಮಾಡುತ್ತಿದ್ದಾರೋ, ಇಲ್ಲಿ ಇವರು ಈ ಸಂಘಟನೆಯನ್ನು ಆ ರೀತಿ ಮಾಡುತ್ತಿದ್ದಾರೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಅವರು ಬುಧವಾರ ಹೇಳಿದರು.

‘ಪ್ರಧಾನಿ ಮೋದಿ ಅವರು ಸಿಎಎಯನ್ನು ಯಾಕೆ ಜಾರಿ ಮಾಡಿರಬಹುದು ಎಂಬುದು ಈಗ ಅರ್ಥವಾಗಿರಬಹುದು’ ಎಂಬ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರ ಹೇಳಿಕೆಗೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ‘ತಾಲಿಬಾನಿಗಳಿಂದಾಗಿ ದೇಶಕ್ಕೆ ಆಗುವ ಅನಾಹುತಗಳ ಬಗ್ಗೆ ಕೇಂದ್ರ ಸರ್ಕಾರ ಕಟ್ಟೆಚ್ಚರ ವಹಿಸಿ ಕ್ರಮ ಕೈಗೊಳ್ಳಬೇಕು. ಅಲ್ಲಿನ ತಾಲಿಬಾನಿಗಳಿಗೂ ಇಲ್ಲಿನ ಸಿಎಎಗೆ ಏನು ಸಂಬಂಧ? ಸಿಎಎ, ಎನ್‌ಆರ್‌ಸಿ ಬಗ್ಗೆ ಯಾವ ಸಂಬಂಧ ಕಲ್ಪಿಸುತ್ತೀರಿ’ ಎಂದು ಖಾರವಾಗಿ ಪ್ರಶ್ನಿಸಿದರು.


‘ಮೀಸಲಾತಿ ತೆಗೆಯುವ ಚಿಂತನೆಯೇ ಆರ್‌ಎಸ್‌ಎಸ್‌ನಲ್ಲಿ ಇಲ್ಲ’

ದಾವಣಗೆರೆ: ಮೀಸಲಾತಿಯನ್ನು ತೆಗೆಯುವ ಚಿಂತನೆಯೇ ಆರ್‌ಎಸ್‌ಎಸ್‌ನಲ್ಲಿ ಇಲ್ಲ. ಕೊನೇ ಉಸಿರು ಇರುವವರೆಗೆ ಮೀಸಲಾತಿಗೆ ಧಕ್ಕೆ ಬರಲು ಬಿಡುವುದಿಲ್ಲ ಎಂದು ಪ್ರಧಾನಿ ಮೋದಿ ಅವರೇ ಹೇಳಿದ್ದಾರೆ ಎಂದು ಕೇಂದ್ರ ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ಸಚಿವ ಎ. ನಾರಾಯಣ ಸ್ವಾಮಿ ಸ್ಪಷ್ಟಪಡಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಮೀಸಲಾತಿ ರದ್ದಾಗುತ್ತದೆ ಎಂದು ಕಾಂಗ್ರೆಸ್ ಹಬ್ಬಿಸಿದೆ. ಅದೇ ಕಾಂಗ್ರೆಸ್ ಭಾರತಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಅಂಬೇಡ್ಕರ್ ಅವರನ್ನು ಸೋಲಿಸಿತ್ತು ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಜಾತಿ ಗಣತಿಯನ್ನು ಮಾಡಿಸಿದವರೇ ಅಧಿಕಾರದಲ್ಲಿ ಇರುವಾಗ ಅದರ ವರದಿ ಬಿಡುಗಡೆ ಯಾಕೆ ಮಾಡಿಲ್ಲ? ಈಗ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಹತ್ತಿರ ಬಂದಾಗ ನೆನಪಾಗಿದೆ. ಜಾತಿ ಗಣತಿ ಬಗ್ಗೆ ತಜ್ಞರ ವರದಿ ಆಧರಿಸಿ ಬಿಜೆಪಿ ತನ್ನದೇ ನಿಲುವು ತೆಗೆದುಕೊಳ್ಳಲಿದೆ ಎಂದರು. ಸದಾಶಿವ ಆಯೋಗದ ವರದಿ ಜಾರಿ ಮಾಡಲು ಬದ್ಧ ಎಂದು ತಿಳಿಸಿದರು. ಬೆಲೆ ಏರಿಕೆ ಬಗ್ಗೆ ಕೇಳಿದ ಪ್ರಶ್ನೆಗೆ, ‘ಎಲೆಕ್ಟ್ರಿಕಲ್ ವೆಹಿಕಲ್ ತೆಗೆದುಕೊಳ್ಳಿ’ ಎಂದು ಹೇಳಿ ಪತ್ರಿಕಾಗೋಷ್ಠಿಯಿಂದ ಎದ್ದು ಹೋದರು.

‘ಬೋಟ್ ಡಾಕ್ಟರ್’ ಎಂ.ಬಿ. ಮರಕಿಣಿ ಇನ್ನಿಲ್ಲ



ಬೆಂಗಳೂರು: ಸಾಹಿತಿ, ವೈದ್ಯ ಡಾ. ಎಂ.ಬಿ. ಮರಕಿಣಿ (90) ಅವರು ಬುಧವಾರ ನಿಧನರಾಗಿದ್ದಾರೆ.

ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು, ಅಮೆರಿಕದಲ್ಲಿರುವ ಮಗಳ ಮನೆಯಲ್ಲಿ ವಾಸವಿದ್ದರು. ಮಗ ನಾರಾಯಣ ಭಟ್, ಮಗಳು ಗೌರಿಯನ್ನು ಅವರು ಅಗಲಿದ್ದಾರೆ. ಪತ್ನಿ ಡಾ. ಸವಿತಾ ಮರಕಿಣಿ ಅವರು ಈ ಹಿಂದೆಯೇ ಮೃತರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕೇಪು ಗ್ರಾಮದ ಮರಕಿಣಿಯಲ್ಲಿ ಜನಿಸಿದ್ದ ಅವರು, ಮೈಸೂರಿನ ವೈದ್ಯಕೀಯ ಕಾಲೇಜಿನಲ್ಲಿ 1955ರಲ್ಲಿ ಪದವಿ ಪಡೆದಿದ್ದರು. ಕೆಲ ಕಾಲ ಸ್ವಗ್ರಾಮದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದರು. ಜರ್ಮನಿಯಲ್ಲಿ ಉನ್ನತ ವ್ಯಾಸಂಗ ಮಾಡಿ, ಪತ್ನಿ ಡಾ. ಸವಿತಾ ಭಟ್ ಅವರೊಂದಿಗೆ 1972ರಲ್ಲಿ ಭೀಕರ ಬರಗಾಲದ ಸಂದರ್ಭದಲ್ಲಿ ಕಲಬುರ್ಗಿಯ ಚಿತ್ತಾಪುರದಲ್ಲಿ ಬಡವರಿಗಾಗಿ ಆಸ್ಪತ್ರೆ ಮತ್ತು ಶಾಲೆಗಳನ್ನು ಸ್ಥಾಪಿಸಿದ್ದರು.

1977ರಲ್ಲಿ ಆಂಧ್ರಪ್ರದೇಶವು ಭೀಕರ ಚಂಡಮಾರುತಕ್ಕೆ ತುತ್ತಾಗಿದ್ದಾಗ ಅಲ್ಲಿಗೆ ಧಾವಿಸಿ, ಅವೇರ್ ಸಂಸ್ಥೆಯೊಂದಿಗೆ ವೈದ್ಯಕೀಯ ಪರಿಹಾರ ಕಾರ್ಯಾಚರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಗೋದಾವರಿ ನದಿಯ ಎರಡೂ ದಡದ ಜನರಿಗಾಗಿ ಬೋಟ್‌ನಲ್ಲಿ ಚಿಕಿತ್ಸಾ ಕೇಂದ್ರ ತೆರೆಯುವ ಮೂಲಕ ‘ಬೋಟ್ ಡಾಕ್ಟರ್’ ಎಂದೇ ಪ್ರಸಿದ್ಧರಾಗಿದ್ದರು. ವಿವಿಧೆಡೆ ಪ್ರವಾಹ ಕಾಣಿಸಿಕೊಂಡಾಗ ಹಾಗೂ ಜನರು ಸಂಕಷ್ಟಕ್ಕೆ ಸಿಲುಕಿದಾಗ ವೈದ್ಯಕೀಯ ಸೇವೆ ನೀಡಿದ್ದಾರೆ.

ಇವರ ಸಾಮಾಜಿಕ ಮತ್ತು ವೈದ್ಯಕೀಯ ಸೇವೆಗೆ ಸರ್ಕಾರವು 2004ರಲ್ಲಿ ‘ರಾಜ್ಯಪ್ರಶಸ್ತಿ’ ನೀಡಿ ಗೌರವಿಸಿತ್ತು. ಸಾಹಿತ್ಯ ಲೋಕಕ್ಕೆ ಕೂಡ ಅನನ್ಯವಾದ ಕೊಡುಗೆ ನೀಡಿದ್ದಾರೆ. 1960ರಲ್ಲೇ ಪುತ್ತೂರಿನಿಂದ ‘ವಿಚಾರವಾಣಿ’ ಸಾಹಿತ್ಯ ಪತ್ರಿಕೆಯನ್ನು ಹೊರತಂದು, ವಿವಿಧ ಲೇಖಕರಿಗೆ, ಯುವ ಕವಿಗಳಿಗೆ ಪ್ರೋತ್ಸಾಹಿಸಿದ್ದರು. ‘ಸುಧಾ’ ವಾರಪತ್ರಿಕೆಯಲ್ಲಿ ಪತ್ನಿ ಸವಿತಾ ಅವರೊಂದಿಗೆ ‘ಅಜ್ಜಿ ಮದ್ದು’ ಅಂಕಣ ಬರೆಯುತ್ತಿದ್ದರು. ಅವರು ‘ವಿಷಚಿಕಿತ್ಸೆ’, ‘ಅಲೆಮಾರಿಯ ಆತ್ಮಕಥೆ’, ‘ಬರಗಾಲದಲ್ಲಿ ಧನ್ವಂತರಿ’, ‘ಮೊಗಲಾಯರ ಮಧ್ಯೆ ಧನ್ವಂತರಿ’ ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ.

ರಾಜ್ಯಸಭೆ ಕಲಾಪದ ಮಟ್ಟ: ಉಪರಾಷ್ಟ್ರಪತಿ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆಯಲ್ಲಿ ಇತ್ತೀಚಿನ ದಿನಗಳಲ್ಲಿ ಜನರಿಗೆ ಸ್ಪಂದಿಸುವ ವಿಷಯಗಳು ಚರ್ಚೆ ನಡೆಯದೇ ಇರುವ ಬಗ್ಗೆ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಅವರು ಬೇಸರ ವ್ಯಕ್ತಪಡಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಎಫ್‌ಕೆಸಿಸಿಐ ಬುಧವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಎಂ.ಎಸ್.ರಾಮಯ್ಯ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಎಂ.ಆರ್. ಜಯರಾಂ ಅವರಿಗೆ ‘ಸರ್ ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ರಾಜ್ಯಸಭೆ ಜನರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ವೇದಿಕೆ ಆಗಬೇಕು. ಆದರೆ ಚರ್ಚೆಗಳು ಆ ದಿಕ್ಕಿನಲ್ಲಿ ಸಾಗುತ್ತಿಲ್ಲ. ಹಲವು ರಾಜ್ಯಗಳ ವಿಧಾನಮಂಡಲಗಳಲ್ಲೂ ಇದೇ ಸ್ಥಿತಿ ಇದೆ. ಪ್ರತಿ ದಿನ ಗದ್ದಲ, ಅಡ್ಡಿ ಉಂಟು ಮಾಡುವ ಘಟನೆಗಳಿಂದ ಕಲಾಪದ ದಾರಿ ತಪ್ಪಿ ಹೋಗುತ್ತಿದೆ. ಇದರಿಂದ ಮನಸ್ಸಿಗೆ ಬೇಸರವಾಗುತ್ತದೆ’ ಎಂದು ವೆಂಕಯ್ಯನಾಯ್ಡು ಹೇಳಿದರು.



ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಅವರು ಡಾ.ಎಂ.ಆರ್‌.ಜಯರಾಂ ಅವರಿಗೆ ಸರ್‌.ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ ಪ್ರದಾನ ಮಾಡಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ ಸುಂದರ್, ಡಾ.ಐ.ಎಸ್‌.ಪ್ರಸಾದ್ ಇದ್ದರು

ಕರ್ನಾಟಕ ಹಲವು ಮುತ್ಸದ್ದಿ ರಾಜಕಾರಣಿಗಳನ್ನು ಕಂಡಿದೆ. ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ದೇವರಾಜ ಅರಸು, ರಾಮಕೃಷ್ಣ ಹೆಗಡೆ ಅವರು ಮೌಲ್ಯಯುತ ರಾಜಕಾರಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದೂ ಅವರು ಸ್ಮರಿಸಿದರು.

ಕನ್ನಡದಲ್ಲಿಯೇ ತಮ್ಮ ಭಾಷಣ ಆರಂಭಿಸಿದ ವೆಂಕಯ್ಯನಾಯ್ಡು, ದೇಶ ಕಂಡ ಬಹುಮುಖ ಪ್ರತಿಭೆ, ಅಪರೂಪದ ಮೇಧಾವಿ ಸರ್.ಎಂ.ವಿಶ್ವೇಶ್ವರಯ್ಯ. ದೇಶದಲ್ಲಿ ಹಲವು ಅಣೆಕಟ್ಟುಗಳನ್ನು ನಿರ್ಮಿಸಿ, ಜಲಸಂಪನ್ಮೂಲದ ಸದ್ಬಳಕೆಯ ಹಾದಿ ತೋರಿದರು. ತಿರುಮಲ ಬೆಟ್ಟದ ಘಾಟ್ ರಸ್ತೆ ನಿರ್ಮಾಣಕ್ಕೂ ಮಾರ್ಗದರ್ಶನ ನೀಡಿದ್ದರು ಎಂದು ವೆಂಕಯ್ಯನಾಯ್ಡು ಹೇಳಿದರು.

> ನಮ್ಮ ರಾಜ್ಯಕ್ಕೆ ಇನ್ನೊಬ್ಬ ವಿಶ್ವೇಶ್ವರಯ್ಯನವರ ಅಗತ್ಯ ಇದೆ. ಕೈಗಾರಿಕಾ ಕ್ಷೇತ್ರದಲ್ಲಿ ಕರ್ನಾಟಕವನ್ನು ನಂ 1 ಸ್ಥಾನಕ್ಕೆ ತರುವುದು ನಮ್ಮ ಗುರಿ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ವಿಶ್ವೇಶ್ವರಯ್ಯ ಅವರ ದೂರದೃಷ್ಟಿಯ ಫಲವಾಗಿ ರಾಜ್ಯದಲ್ಲಿ ಕಬ್ಬಿಣ ಮತ್ತು ಉಕ್ಕು, ಸಿಮೆಂಟ್, ಸಾಬೂನು, ಕಾಗದ ಕಾರ್ಖಾನೆ ಹೀಗೆ ಹಲವು ವಲಯಗಳ ಕೈಗಾರಿಕೆಗಳು ಪ್ರಾರಂಭವಾದವು. ಅವರೊಬ್ಬ ಯುಗಪುರುಷ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಸುಂದರ್, ಸಂಸದ ಪಿ.ಸಿ.ಮೋಹನ್ ಇದ್ದರು.

ಜನಾಶೀರ್ವಾದ ಯಾತ್ರೆಯಲ್ಲಿ ಬಂದೂಕಿನಿಂದ ಸಿಡಿಮದ್ದು!

ಯಾದಗಿರಿ: ಜನಾಶೀರ್ವಾದ ಯಾತ್ರೆಯಲ್ಲಿ ಬಂದ ಕೇಂದ್ರ ಸಚಿವ ಭಗವಂತ ಖೂಬಾ ಅವರನ್ನು ಜಿಲ್ಲೆಯ ಗಡಿ ಗ್ರಾಮ ಯರಗೋಳದಲ್ಲಿ ಬುಧವಾರ ಸ್ವಾಗತಿಸುವ ಮೆರವಣಿಗೆಯಲ್ಲಿ ಕೆಲವರು ಪರವಾನಗಿ ಹೊಂದಿರುವ ಬಂದೂಕಿನಿಂದ ಗಾಳಿಯಲ್ಲಿ ‘ಸಿಡಿಮದ್ದು’ ಹಾರಿಸಿದರು.

ಇದೇ ವೇಳೆ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ ಚಿಂಚನಸೂರ ಅವರು ಬಂದೂಕು ಹಿಡಿದು ಫೋಟೋಗೆ ಪೋಸ್ ಕೊಟ್ಟಿರುವುದು ವಿಡಿಯೊದಲ್ಲಿ ದಾಖಲಾಗಿದೆ.

‘ಜನಾಶೀರ್ವಾದ ಯಾತ್ರೆ ಸ್ವಾಗತಿಸುವ ಸಮಯದಲ್ಲಿ ಸಿಂಗಲ್ ಬ್ಯಾರಲ್ ಬಂದೂಕಿನಲ್ಲಿ ಮದ್ದು ತುಂಬಿ ಕೆಲವರು ಹಾರಿಸಿದ್ದಾರೆ. ಆದರೆ, ಅವುಗಳಲ್ಲಿ ಗುಂಡು ಬಳಸಿಲ್ಲ. ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಯರಗೋಳ ಗ್ರಾಮದ ಶರಣಪ್ಪ ಗುಂಡಪ್ಪ ಭೀಮಳ್ಳಿ, ಮೋನಪ್ಪ ದುರ್ಗಪ್ಪ ಮಾನೆಗಾರ, ನಿಂಗಪ್ಪ ಚಂದಪ್ಪ ಹತ್ತಿಕುಣಿ, ದೇವಿಂದ್ರ ಹಣಮಂತ ಎಂಬವರನ್ನು ಬಂಧಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ವೇದಮೂರ್ತಿ ತಿಳಿಸಿದ್ದಾರೆ.



ಯಾದಗಿರಿ ತಾಲ್ಲೂಕಿನ ಯರಗೋಳ ಗ್ರಾಮದ ಬಳಿ ಬಂದೂಕಿನಿಂದ ಸಿಡಿಮದ್ದು ಹಾರಿಸಿ ಕೇಂದ್ರ ಸಚಿವರನ್ನು ಸ್ವಾಗತಿಸಲಾಯಿತು

ಸಮರ್ಥನೆ: ‘ನಾಡ ಬಂದೂಕಿನಿಂದ ಸಿಡಿಮದ್ದು ಹಾರಿಸಿದ್ದು, ಇದು ಯಾರಿಗೂ ಯಾವುದೇ ಹಾನಿ ಮಾಡಿಲ್ಲ. ಹಿಂದಿನ ಕಾಲದಲ್ಲಿ ಇದನ್ನು ಪಟಾಕಿಯಂತೆ ಸಿಡಿಸುತ್ತಿದ್ದರು’ ಎಂದು ಸಚಿವ ಭಗವಂತ ಖೂಬಾ ಹಾಗೂ ಶಾಸಕ ವೆಂಕಟರೆಡ್ಡಿ ಮುದ್ನಾಳ ತಮ್ಮ ಭಾಷಣದಲ್ಲಿ ಸಮರ್ಥಿಸಿಕೊಂಡರು.

‘ಕೋವಿಡ್ ಕಾರಣ ಆಗಸ್ಟ್ 30ರ ವರೆಗೆ ಜಿಲ್ಲೆಯಲ್ಲಿ ಸಭೆ, ಸಮಾರಂಭಗಳಿಗೆ ನಿಷೇಧ ಹೇರಿದ್ದೇವೆ. ಜನಾಶೀರ್ವಾದ ಯಾತ್ರೆಗೆ ಪರವಾನಗಿ ಪಡೆದಿಲ್ಲ. ಕೋವಿಡ್ ನಿಯಮ ಉಲ್ಲಂಘನೆಯಾಗಿದ್ದರೆ ತನಿಖೆ ನಡೆಸಿ ಕಾರ್ಯಕ್ರಮ ಆಯೋಜಕರಿಗೆ ನೋಟಿಸ್ ನೀಡಲಾಗುವುದು’ ಎಂದು ಜಿಲ್ಲಾಧಿಕಾರಿ ಡಾ.ರಾಗಪ್ರಿಯಾ ಪ್ರತಿಕ್ರಿಯಿಸಿದರು.

ಮತ್ತೆ ಕರ್ಫ್ಯೂ ಉಲ್ಲಂಘನೆ: ರಾಯಚೂರಿನಲ್ಲಿ ಬುಧವಾರ ರಾತ್ರಿ ಜನಾಶೀರ್ವಾದ ಯಾತ್ರೆ ನಡೆಸಿದ ಕೇಂದ್ರ ಸಚಿವ ಖೂಬಾ, ಕರ್ಫ್ಯೂ ಉಲ್ಲಂಘಿಸಿ ರಾತ್ರಿ 9 ಗಂಟೆಯ ನಂತರವೂ ಮೆರವಣಿಗೆಯಲ್ಲಿ ಪಾಲ್ಗೊಂಡರು.

ಬಾಲಕಿ ಮೇಲೆ ಅತ್ಯಾಚಾರ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ ಹಿಟ್ಟಿನ ಗಿರಣಿಗೆ ಬೀಸಲು ಹೋಗಿದ್ದ 10 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆದಿದೆ.

‘ಅತ್ಯಾಚಾರವೆಸಗಿದ 30 ವಯಸ್ಸಿನ ವ್ಯಕ್ತಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸೋಮವಾರ ಬಾಲಕಿ ಧಾನ್ಯ ಬೀಸಿಕೊಂಡು ಬರಲು ಹಿಟ್ಟಿನ ಗಿರಣಿಗೆ ಹೋಗಿದ್ದಳು. ಈ ವ್ಯಕ್ತಿ ಬಾಲಕಿಯನ್ನು ಗಿರಣಿಯ ಕೋಣೆಗೆ ಎಳೆದೊಯ್ದು ಅತ್ಯಾಚಾರ ಎಸಗಿದ್ದಾನೆ. ಯಾರಿಗಾದರೂ ಹೇಳಿದರೆ ಹತ್ಯೆ ಮಾಡುವುದಾಗಿ ಜೀವ ಬೆದರಿಕೆ ಹಾಕಿದ್ದಾನೆ ಎಂದು ಸಂತ್ರಸ್ತ ಬಾಲಕಿಯ ತಂದೆ ದೂರು ನೀಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	120.12	3,960	5,545
ಹಾರಂಗಿ	2,859	2,858.06	2,183	2,433
ಕಬಿನಿ	2,284	2,283.28	4,550	3,500
ಹೇಮಾವತಿ	2,922	2,919.72	3,924	4,725
ಲಿಂಗನಮಕ್ಕಿ	1,819	1,812.45	9,225	-
ಸೂಪಾ (ಮೀ)	564	554.63	4,699	2.931
ಮಾಣಿ	594.36	585.36	315	-
ತುಂಗಭದ್ರಾ	1,633	1,632.98	14,181	15,300
ಮಲಪ್ರಭಾ	2,079.50	2,077.60	2,456	894
ಘಟಪ್ರಭಾ	2,175	2,175	4,689	4,689
ಭದ್ರಾ	186	184.11	4,996	4,996
ಆಲಮಟ್ಟಿ (ಮೀ)	519.60	519.60	32,485	29,916
ನಾರಾಯಣಪುರ (ಮೀ)	492.25	491.98	35,000	42,500

*ನೆಲಮಟ್ಟದಿಂದ



ಪ್ರಶಸ್ತಿ ಪ್ರದಾನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 2019-20ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವಿರೇಂದ್ರ ಹೆಗ್ಗಡೆ ಅವರಿಗೆ 'ಭಗವಾನ್ ಮಹಾವೀರ ರಾಷ್ಟ್ರೀಯ ಶಾಂತಿ ಪ್ರಶಸ್ತಿ'ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿತರಿಸಿದರು. (ಎಡದಿಂದ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಸಚಿವ ಸುನಿಲ್ ಕುಮಾರ್, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಜೆ. ರವಿಶಂಕರ್ ಹಾಗೂ ಚಿಕ್ಕಪೇಟೆ ಶಾಸಕ ಉದಯ್ ಗರುಡಾಚಾರ್ ಇದ್ದರು. ಪ್ರಜಾವಾಣಿ ಚಿತ್ರ

ಎನ್ಇಪಿ: ಇದೇ 23ರಿಂದ ಪ್ರವೇಶ ಪ್ರಕ್ರಿಯೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಡಿ (ಎನ್ಇಪಿ) ಕಲಿಕೆಗೆ ಇದೇ 23ರಿಂದಲೇ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಪ್ರವೇಶ ಪ್ರಕ್ರಿಯೆಗೆ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡುವರು' ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಹಾಗೂ ಕ್ರಿಸ್ತು ಜಯಂತಿ ಕಾಲೇಜು ಸಹಯೋಗದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020 ಅನುಷ್ಠಾನ ಕುರಿತು ಬುಧವಾರ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ನೂತನ ನೀತಿಯ ಜಾರಿಯ ಹಿಂದೆ ವಿದ್ಯಾರ್ಥಿಯ ಹಿತ ಮಾತ್ರ ಅಡಗಿದೆ. ಯಾವುದೇ ರಹಸ್ಯ ಕಾರ್ಯಸೂಚಿ ಇಲ್ಲ' ಎಂದು ಅವರು ಹೇಳಿದರು.

'ಶಿಕ್ಷಣ ಸಂಸ್ಥೆಗಳನ್ನು ಅತ್ಯುತ್ತಮವಾಗಿ ರೂಪಿಸಬೇಕು. ವಿದ್ಯಾರ್ಥಿ ಕೇಂದ್ರಿತ ವ್ಯವಸ್ಥೆ ಅಲ್ಲಿರಬೇಕು. ಮುಂದಿನ ಅನೇಕ ವರ್ಷಗಳ ಮುನ್ನೋಟ ಇಟ್ಟುಕೊಂಡು ಸಂಸ್ಥೆಗಳನ್ನು ಕಟ್ಟಿ ಬೆಳೆಸಬೇಕು. ಇಂಥ ಸಂಸ್ಥೆಗಳನ್ನು ಆಮೂಲಾಗ್ರವಾಗಿ ಬೆಳೆಸಲು ನೆರವಾಗಬೇಕು. ಯಾವುದೇ ಶಿಕ್ಷಣ ಸಂಸ್ಥೆಯೂ ಲಾಭ ಗಳಿಕೆಗಾಗಿ ಕೆಲಸ ಮಾಡಿಲ್ಲ, ಮಾಡುವುದೂ ಇಲ್ಲ' ಎಂದೂ ಡಾ.ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್, 'ವಿದ್ಯಾರ್ಥಿಗಳ ಕೌಶಲ ಮತ್ತು ಸಾಮರ್ಥ್ಯವನ್ನು ವೃದ್ಧಿಸುವುದಕ್ಕೆ ಮಾತ್ರವಲ್ಲದೆ, ಆರೋಗ್ಯ ವಿಷಯದ ಕಡೆಗೂ ಆದ್ಯತೆ ನೀಡಲಾಗಿದೆ. ಕೌಶಲ ಆಧಾರಿತ ಪಠ್ಯಕ್ರಮ, ವೈಜ್ಞಾನಿಕ ಶಿಕ್ಷಣ ಶಾಸ್ತ್ರ, ಗುಣಮಟ್ಟದ ಮೌಲ್ಯಮಾಪನದಂತಹ ಅಂಶಗಳು ವಿದ್ಯಾರ್ಥಿಗಳನ್ನು ಜಾಗತಿಕ ಸ್ಪರ್ಧಾತ್ಮಕತೆಗೆ ಸಜ್ಜುಗೊಳಿಸಲಿವೆ' ಎಂದರು.

ಕ್ರಿಸ್ತು ಜಯಂತಿ ಕಾಲೇಜಿನ ಪ್ರಾಚಾರ್ಯ ಡಾ.ಅಗಸ್ಟಿನ್ ಜಾರ್ಜ್, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪಿ.ಪ್ರದೀಪ್, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಿ.ಕುಮುದಾ, ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ತಿಮ್ಮೇಗೌಡ ಮಾತನಾಡಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್ಎಸ್ಎಲ್ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್ಎಸ್ಎಲ್ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಸೆ. 27, 29ಕ್ಕೆ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆಯನ್ನು ಸೆ. 27 ಮತ್ತು 29ರಂದು ಸರಳ ರೀತಿಯಲ್ಲಿ ನಡೆಸಲು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿರ್ಧರಿಸಿದ್ದು, ಈ ಸಂಬಂಧ ವೇಳಾಪಟ್ಟಿ ಮತ್ತು ಪರೀಕ್ಷಾ ನೋಂದಣಿ ಶುಲ್ಕದ ಅಧಿಸೂಚನೆ ಹೊರಡಿಸಿದೆ.

ಕೋವಿಡ್ ಸೇರಿದಂತೆ ಇತರ ಕಾರಣಗಳಿಗೆ ಕಳೆದ ಜುಲೈನಲ್ಲಿ ನಡೆದ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಸಾಧ್ಯವಾಗದ, ಗೈರು ಹಾಜರಾದ ವಿದ್ಯಾರ್ಥಿಗಳು, ಪುನರಾವರ್ತಿತ ಅಭ್ಯರ್ಥಿಗಳು, ಖಾಸಗಿ ಅಭ್ಯರ್ಥಿಗಳಿಗೆ ಪೂರಕ ಪರೀಕ್ಷೆ ನಡೆಯಲಿದೆ.

ಸೆ. 27ರಂದು ಕೋರ್ ವಿಷಯಗಳಿಗೆ (ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ) ಹಾಗೂ 29ರಂದು ಭಾಷಾ ವಿಷಯಗಳಿಗೆ (ಕನ್ನಡ, ಇಂಗ್ಲಿಷ್, ಹಿಂದಿ) ಪರೀಕ್ಷೆ ನಡೆಯಲಿದೆ. ಎರಡೂ ದಿನ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಪರೀಕ್ಷೆ ನಡೆಯಲಿದೆ.

ಹಿಂದೂಸ್ಥಾನಿ ಸಂಗೀತ, ಕರ್ನಾಟಕ ಸಂಗೀತ ಪ್ರಾಯೋಗಿಕ ಪರೀಕ್ಷೆ ಸೆ. 27ರಂದು ಮಧ್ಯಾಹ್ನ 2.30ರಿಂದ ಸಂಜೆ 4 ಗಂಟೆವರೆಗೆ ಆಯಾ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. 2011ರಿಂದ 2018ರವರೆಗೆ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಾನೂನಾತ್ಮಕವಾಗಿ ಇದ್ದ 6 ಪ್ರಯತ್ನಗಳು ಮುಕ್ತಾಯ ಆಗಿರುವುದರಿಂದ ಪೂರಕ ಪರೀಕ್ಷೆ ಬರೆಯಲು ಅವಕಾಶ ಇಲ್ಲ ಎಂದು ಮಂಡಳಿ ತಿಳಿಸಿದೆ.

ನೋಂದಣಿ ಶುಲ್ಕ: 2020-21ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್ ಮತ್ತು ಇತರೆ ಕಾರಣದಿಂದ ಪರೀಕ್ಷೆಗೆ ಗೈರು ಹಾಜರಾದವರಿಗೆ ನೋಂದಣಿ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಪರೀಕ್ಷೆಗೆ ನೋಂದಾಯಿಸದ ವಿದ್ಯಾರ್ಥಿಗಳಿಗೆ ₹ 507, ಪುನರಾವರ್ತಿತ ವಿದ್ಯಾರ್ಥಿಗಳಿಗೆ ಒಂದು ವಿಷಯಕ್ಕೆ ₹ 320, ಎರಡು ವಿಷಯಕ್ಕೆ ₹ 386 ಮತ್ತು ಮೂರು ಮತ್ತು ಅದಕ್ಕಿಂತ ಹೆಚ್ಚು ವಿಷಯಗಳಿಗೆ ₹ 520 ನೋಂದಣಿ ಶುಲ್ಕ ನಿಗದಿಪಡಿಸಲಾಗಿದೆ.

ಇಂದಿನಿಂದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ

ಇದೇ 19ರಿಂದ ಸೆ. 3ರವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ನಡೆಯಲಿದೆ. 17,469 ಖಾಸಗಿ ವಿದ್ಯಾರ್ಥಿಗಳು, 352 ಪುನರಾವರ್ತಿತ, 593 ಫಲಿತಾಂಶ ತಿರಸ್ಕರಿಸಿರುವ ವಿದ್ಯಾರ್ಥಿಗಳು ಸೇರಿ ಒಟ್ಟು 18,414 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ತಾಲ್ಲೂಕಿಗೆ ಒಂದರಂತೆ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಒಂದಕ್ಕಿಂತ ಹೆಚ್ಚು ಪರೀಕ್ಷಾ ಕೇಂದ್ರ ಸೇರಿ ಒಟ್ಟು 187 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ವಿದ್ಯಾರ್ಥಿಗಳ ಸುರಕ್ಷತೆಗೆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಕೊರೊನಾ ಸೋಂಕಿತ ವಿದ್ಯಾರ್ಥಿಗಳಿಗೆ ಕೋವಿಡ್ ಆರೈಕೆ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು ಎಂದು ಪದವಿ ಪೂರ್ವ ಶಿಕ್ಷಣ ಮಂಡಳಿ ತಿಳಿಸಿದೆ.

ಪಿಯು ಪರೀಕ್ಷೆ: ಉಚಿತ ಪ್ರಯಾಣಕ್ಕೆ ಅವಕಾಶ

ಬೆಂಗಳೂರು: ಆ.19ರಿಂದ ಆರಂಭವಾಗಲಿರುವ 2020–21ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಉಚಿತವಾಗಿ ಪ್ರಯಾಣಿಸಲು ಕೆಎಸ್ಆರ್‌ಟಿಸಿ ಅವಕಾಶ ಕಲ್ಪಿಸಿದೆ. ವ್ಯಾಸಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆ ಗಳಲ್ಲಿ ಪರೀಕ್ಷಾ ಕೇಂದ್ರ ಇಲ್ಲದಿದ್ದರೆ ನಿರ್ವಾಹಕರಿಗೆ ಪರೀಕ್ಷಾ ಪ್ರವೇಶ ಪತ್ರ ತೋರಿಸಿ ಪರೀಕ್ಷಾ ಕೇಂದ್ರಗಳಿಗೆ ಬಸ್‌ಗಳಲ್ಲಿ ಉಚಿತವಾಗಿ ಹೋಗಿ ಬರಬಹುದು.

ಪರೀಕ್ಷೆ ಇರುವ ದಿನದಂದು ಪರೀಕ್ಷಾ ಕೇಂದ್ರದ ಬಳಿ ವಿದ್ಯಾರ್ಥಿಗಳು ಬಸ್ ಹತ್ತಲು ಮತ್ತು ಇಳಿಯಲು ಅನುಕೂಲ ಆಗುವಂತೆ ಕೋರಿಕೆ ನಿಲುಗಡೆಯನ್ನೂ ನೀಡಲು ನಿಗಮದ ಮುಖ್ಯ ಸಂಚಾರ ವ್ಯವಸ್ಥಾಪಕರು ಆದೇಶಿಸಿದ್ದಾರೆ.

ಶಿಕ್ಷಕ ನಾಗರಾಜಗೆ ರಾಷ್ಟ್ರೀಯ ಪ್ರಶಸ್ತಿ



ಬೆಂಗಳೂರು: ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯ ದೊಡ್ಡಬನಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ ಸಿ.ಎಂ. ನಾಗರಾಜ ಅವರು ಶಿಕ್ಷಕರಿಗೆ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಬಾರಿ ಈ ಗೌರವಕ್ಕೆ ಪಾತ್ರರಾದ ರಾಜ್ಯದ ಏಕೈಕ ಶಿಕ್ಷಕ ಇವರು.

15 ವರ್ಷಗಳಿಂದ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಅವರು, ದೊಡ್ಡಬನಹಳ್ಳಿ ಶಾಲೆಯಲ್ಲಿ 2018ರಿಂದ ಕೆಲಸ ಮಾಡುತ್ತಿದ್ದಾರೆ. ಪ್ರಶಸ್ತಿಯು ನಗದು, ಪದಕ ಹಾಗೂ ಪ್ರಮಾಣಪತ್ರವನ್ನು ಒಳಗೊಂಡಿದೆ. ಈ ಬಾರಿ ಒಟ್ಟು 44 ಶಿಕ್ಷಕರು ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರರಾಗಿದ್ದು, ಶಿಕ್ಷಕರ ದಿನವಾದ ಸೆ.5ರಂದು ನವದೆಹಲಿಯಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ವಿದ್ಯಾರ್ಥಿಗಳ ಅನಿಸಿಕೆ


ಪುಸ್ತಕ ಖರೀದಿಗೆ 'ನೆರವು'



'ಪ್ರಜಾವಾಣಿ' ಶೈಕ್ಷಣಿಕ ನೆರವಿನಿಂದ ಅನೇಕ ಬಡ ವಿದ್ಯಾರ್ಥಿಗಳಿಗೆ ಸಹಾಯ ಆಗುತ್ತಿದೆ. ವಿಜ್ಞಾನ ವಿಭಾಗಕ್ಕೆ ಸೇರಿದ್ದರಿಂದ ಪುಸ್ತಕಗಳ ಖರೀದಿಗೆ ಹಣದ ಅಗತ್ಯವಿತ್ತು. ನೆರವಿನ ಹಣದಿಂದ ಪುಸ್ತಕಗಳನ್ನು ಖರೀದಿಸಿದೆ. ನೆರವು ನೀಡಲು ನನ್ನನ್ನು ಪರಿಗಣಿಸಿದ್ದಕ್ಕಾಗಿ ಸಂಸ್ಥೆಗೆ ಧನ್ಯವಾದ..

ಎಂ.ರೋಹಿಣಿ, ನಂದಿನಿ ಬಡಾವಣೆ, ಬೆಂಗಳೂರು

ಕಾಲೇಜು ಶುಲ್ಕ ಪಾವತಿಸಿದೆ



ಮೈಸೂರಿನಲ್ಲಿ ಪಿಯುಸಿ ಓದುತ್ತಿದ್ದು, 'ಪ್ರಜಾವಾಣಿ' ನೀಡಿದ ವಿದ್ಯಾರ್ಥಿವೇತನದಿಂದ ಕಾಲೇಜಿನ ಶುಲ್ಕ ಪಾವತಿಸಲು ಅನುಕೂಲವಾಯಿತು. ಪತ್ರಿಕೆಯ ಸಮಾಜಮುಖಿ ಕಾರ್ಯದಿಂದ ನನ್ನಂತಹ ಹಲವು ವಿದ್ಯಾರ್ಥಿಗಳಿಗೆ ಸಹಕಾರಿಯಾಗಿದೆ. 'ಪ್ರಜಾವಾಣಿ' ಬಳಗಕ್ಕೆ ಧನ್ಯವಾದ.

ಪ್ರಶಾಂತ್ ಆರ್., ಸಿಂಗಾನಲ್ಲೂರು, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ

ನಗದು ರಹಿತ ಚಿಕಿತ್ಸೆ: ನೌಕರರಿಂದ ಶೇ 1 ವಂತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಸದಸ್ಯರಿಗಾಗಿ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಒದಗಿಸುವ 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ'ಗೆ ನೌಕರರು ಕನಿಷ್ಠ ಮೂಲ ವೇತನದ ಶೇ 1 ರಷ್ಟು ತಿಂಗಳ ವಂತಿಗೆ ನೀಡಬೇಕಾಗುತ್ತದೆ.

ಆರೋಗ್ಯ ಸಂಜೀವಿನಿ ಕುರಿತು ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಈ ಪ್ರಸ್ತಾವ ಇದೆ. ಈ ಯೋಜನೆಗೆ ಗ್ರೂಪ್ ಎ,ಬಿ,ಸಿ ಮತ್ತು ಡಿ ವರ್ಗದ ನೌಕರರು ಅವರು ಹೊಂದಿರುವ ಹುದ್ದೆಯ ಮೂಲ ವೇತನದಲ್ಲಿ ಈ ಮೊತ್ತವನ್ನು ಹಿಡಿಯಲಾಗುತ್ತದೆ. ಕೆಲವು ನಿರ್ದಿಷ್ಟ ವರ್ಗದ ಸರ್ಕಾರಿ ನೌಕರರನ್ನು ಬಿಟ್ಟು, ಉಳಿದ ಎಲ್ಲಾ ನೌಕರರಿಗೂ ಈ ಯೋಜನೆಯು ಕಡ್ಡಾಯವಾಗಿರುತ್ತದೆ ಎಂದು ಸರ್ಕಾರ ಆದೇಶದಲ್ಲಿ ತಿಳಿಸಿದೆ.

ಈ ಯೋಜನೆಗೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿಯೊಂದನ್ನು ಸಿದ್ಧಪಡಿಸಿಕೊಡುವಂತೆ ಸರ್ಕಾರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಸೂಚನೆಯನ್ನು ನೀಡಿದೆ. ಯೋಜನೆಯ ಕಾರ್ಯ ಸ್ವರೂಪ, ಯೋಜನಾ ವೆಚ್ಚ, ಆಯವ್ಯಯ, ವೈದ್ಯಕೀಯ ಚಿಕಿತ್ಸಾ ವಿಧಾನಗಳು, ಚಿಕಿತ್ಸಾ ದರಗಳು, ಫಲಾನುಭವಿಗಳು, ಖಾಸಗಿ ವೈದ್ಯಕೀಯ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳ ಜತೆ ಮಾಡಿಕೊಳ್ಳಬೇಕಾದ ಒಡಂಬಡಿಕೆ, ಇವೆಲ್ಲದಕ್ಕೂ ಸೂಕ್ತ ತಂತ್ರಜ್ಞಾನ ಅಭಿವೃದ್ಧಿ ಕುರಿತು ಯೋಜನಾ ವರದಿ ತಯಾರಿಸಿಕೊಡಲು ಸೂಚಿಸಲಾಗಿದೆ.

ಜ್ಯೋತಿ ಸಂಜೀವಿನಿ ಸ್ಥಗಿತ: ರಾಜ್ಯ ಸರ್ಕಾರ ಜ್ಯೋತಿ ಸಂಜೀವಿನಿ ಯೋಜನೆಯಡಿ ಭರಿಸುತ್ತಿರುವ ತ್ರೈಮಾಸಿಕ ಕಂತಿನ ಆಧಾರದಲ್ಲಿ ಆಯವ್ಯಯವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಸುವರ್ಣ ಆರೋಗ್ಯ ಟ್ರಸ್ಟ್‌ಗೆ ಬಿಡುಗಡೆ ಮಾಡಲಾಗುವುದು. ಹೊಸ ಯೋಜನೆ ಜಾರಿಯ ಬಳಿಕ ಜ್ಯೋತಿ ಸಂಜೀವಿನಿ ಯೋಜನೆ ಸ್ಥಗಿತಗೊಳಿಸಲಾಗುವುದು. ಆದರೆ, ನೂತನ ಯೋಜನೆಗೆ ಅಗತ್ಯವಿರುವ ಅನುದಾನವನ್ನು ಜ್ಯೋತಿ ಸಂಜೀವಿನಿ ಲೆಕ್ಕ ಶೀರ್ಷಿಕೆಯಡಿ ಮುಂದುವರಿಸಲು ನಿರ್ಧರಿಸಿದೆ.

ವೈದ್ಯಕೀಯ ಸಂಸ್ಥೆಗಳು ಚಿಕಿತ್ಸೆ ಒದಗಿಸಲು ಹೊಂದಿರಬೇಕಾದ ಮಾನದಂಡಗಳು ಮತ್ತು ಒಪ್ಪಂದಗಳನ್ನು ಕೇಂದ್ರ ಸರ್ಕಾರದ ಸಿಜಿಎಚ್ಎಸ್ ಮಾದರಿಯಲ್ಲಿ ಸಿದ್ಧಪಡಿಸಲಾಗುವುದು ಎಂದೂ ಆದೇಶ ತಿಳಿಸಿದೆ.

ಯೋಜನೆಗೆ ಒಳಪಡುವ ವೈದ್ಯಕೀಯ ಸಂಸ್ಥೆಗಳು

- ಪ್ರವರ್ಗ 1– ಎಲ್ಲ ಸರ್ಕಾರಿ ಆರೋಗ್ಯ ಸಂಸ್ಥೆಗಳು, ಸಾರ್ವಜನಿಕ ಆಸ್ಪತ್ರೆಗಳು, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳು, ಸಂಶೋಧನಾ ಸಂಸ್ಥೆಗಳು, ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ವೈದ್ಯಕೀಯ ತಪಾಸಣಾ ಕೇಂದ್ರಗಳು
- ವೈದ್ಯಕೀಯ ಶಿಕ್ಷಣ ಇಲಾಖೆಯ ನಿಯಂತ್ರಣಕ್ಕೆ ಒಳಪಡುವ ಹಾಗೂ ಸರ್ಕಾರದಿಂದ ಅನುದಾನ ಪಡೆಯುವ ಎಲ್ಲಾ ಆರೋಗ್ಯ ಸಂಸ್ಥೆಗಳು, ರಾಜ್ಯದ ಎಲ್ಲ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು.
- ಪ್ರವರ್ಗ 2– ಆಯುಷ್ ಇಲಾಖೆಗೆ ಒಳಪಡುವ ಎಲ್ಲ ಸರ್ಕಾರಿ ಆರೋಗ್ಯ ಸಂಸ್ಥೆಗಳು, ಆಯುರ್ವೇದ, ಹೋಮಿಯೋಪತಿ, ಯುನಾನಿ ಇತ್ಯಾದಿ
- ಪ್ರವರ್ಗ 2– ಖಾಸಗಿ ವಲಯದ ಆರೋಗ್ಯ ಸಂಸ್ಥೆಗಳು. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳು, ಸ್ಪೆಷಾಲಿಟಿ ಆಸ್ಪತ್ರೆಗಳು, ದಂತ ಮತ್ತು ಕಣ್ಣಿನ ಆಸ್ಪತ್ರೆಗಳು
- ಪ್ರವರ್ಗ 4– ವೈದ್ಯಕೀಯ ತಪಾಸಣಾ ಕೇಂದ್ರಗಳು.

ವರ್ಗಾವಣೆಗೆ ಕೌನ್ಸೆಲಿಂಗ್

ಒಂದನೇ ಪುಟದಿಂದ...

ಯಾರಿಗೆಲ್ಲ ವಿನಾಯಿತಿ: 'ಗಂಭೀರ ಹಾಗೂ ಮಾರಣಾಂತಿಕ ರೋಗದಿಂದ ಬಳಲುತ್ತಿರುವವರು, ವಯೋ ನಿವೃತ್ತಿ ಅಂಚಿನಲ್ಲಿದ್ದು, ಇನ್ನು ಎರಡು ವರ್ಷ ಮಾತ್ರ ಸೇವೆ ಬಾಕಿ ಇರುವವರು, ಶೇ 40ಕ್ಕೂ ಹೆಚ್ಚು ಅಂಗವಿಕಲತೆ ಹೊಂದಿರುವವರು, ವಿಧವೆಯರು, ಪತಿ-ಪತ್ನಿ ಪ್ರಕರಣಕ್ಕೆ ಮಾತ್ರ ಕೌನ್ಸೆಲಿಂಗ್‌ನಿಂದ ವಿನಾಯಿತಿ ನೀಡಬೇಕು. ಇಂಥ ಪ್ರಸ್ತಾವಗಳನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸ್ಪಷ್ಟ ಶಿಫಾರಸಿನೊಂದಿಗೆ ಎರಡು ತಿಂಗಳಿಗೊಮ್ಮೆ ಮಾತ್ರ ಕಡತ ಮಂಡಿಸಿ ಅನುಮೋದನೆ ಪಡೆಯಬೇಕು. ಇದಕ್ಕೆ ಸಂಬಂಧಿಸಿ ಕಾಯ್ದೆಗೆ ಅಗತ್ಯ ತಿದ್ದುಪಡಿ ತರಲು ಕ್ರಮ ಕೈಗೊಳ್ಳಬೇಕು' ಎಂದೂ ಸಚಿವರು ಸೂಚನೆ ನೀಡಿದ್ದಾರೆ.

ವರ್ಗಾವಣೆ ನಿಯಮದಲ್ಲಿ ಏನಿದೆ?

ಹಿರಿಯ ತಜ್ಞರು, ತಜ್ಞರು, ಉಪ ಮುಖ್ಯ ವೈದ್ಯಾಧಿಕಾರಿ, ಹಿರಿಯ ವೈದ್ಯಾಧಿಕಾರಿ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಮುಖ್ಯ ದಂತ ವೈದ್ಯಾಧಿಕಾರಿ, ಹಿರಿಯ ದಂತ ವೈದ್ಯಾಧಿಕಾರಿ, ದಂತ ವೈದ್ಯಾಧಿಕಾರಿಗಳನ್ನು ಆಯುಕ್ತರು ವರ್ಗಾವಣೆ ಮಾಡಬಹುದು. ಗ್ರೂಪ್ ಬಿ, ಸಿ, ಡಿ ನೌಕರರನ್ನು ನಿರ್ದೇಶಕರು ವರ್ಗಾವಣೆ ಮಾಡಬಹುದು.

ಆಯುಷ್ ಇಲಾಖೆಯಡಿಯ ಫಿಸಿಷಿಯನ್ ಗ್ರೇಡ್–1, ಗ್ರೇಡ್– 2ಗೆ ಆಯುಷ್ ಇಲಾಖೆಯ ನಿರ್ದೇಶಕರು, ಆಯುಷ್ ಇಲಾಖೆಯ ಗ್ರೂಪ್ ಬಿ, ಸಿ, ಡಿ, ನೌಕರರನ್ನು ಇಲಾಖೆಯ ಆಯುಕ್ತರು ವರ್ಗಾವಣೆ ಮಾಡಬಹುದು. ಈ ನಿಯಮದಲ್ಲಿ ಗ್ರೂಪ್ 'ಎ' ಗೆ ಮೂರು ವರ್ಷ, ಗ್ರೂಪ್ 'ಬಿ' ಗೆ ನಾಲ್ಕು ವರ್ಷ, ಗ್ರೂಪ್ 'ಸಿ'ಗೆ ಐದು ವರ್ಷ, ಗ್ರೂಪ್ 'ಡಿ'ಗೆ ಏಳು ವರ್ಷ ಒಂದು ಕಡೆ ಕಡ್ಡಾಯವಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಬಡ್ತಿ ಮೀಸಲಾತಿ: ಸಿ.ಎಸ್‌ಗೆ ಮನವಿ

ಬೆಂಗಳೂರು: 'ಬಡ್ತಿ ಮೀಸಲಾತಿ ನೀಡುವ ವೇಳೆ ಸೇವಾ ಜ್ಯೇಷ್ಠತೆ ಸಂರಕ್ಷಣಾ ಕಾಯ್ದೆಯನ್ನು ಪಾಲಿಸಬೇಕು. ಮೀಸಲಾತಿ ನೀಡದಿರುವ ಮುಂಬಡ್ತಿಗಳನ್ನು ರದ್ದುಪಡಿಸಿ, ಮೀಸಲಾತಿ ಅಳವಡಿಸಿ ಮುಂಬಡ್ತಿ ನೀಡಬೇಕು' ಎಂದು ಆಗ್ರಹಿಸಿ ಮುಖ್ಯ ಕಾರ್ಯದರ್ಶಿ (ಸಿ.ಎಸ್) ಪಿ. ರವಿಕುಮಾರ್ ಅವರಿಗೆ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ ಮನವಿ ಸಲ್ಲಿಸಿದೆ.

ಬಳಿಕ ಮಾತನಾಡಿದ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ, 'ಸ್ಪಷ್ಟೀಕರಣವನ್ನು ತಕ್ಷಣ ಹಿಂತೆಗೆದುಕೊಳ್ಳದಿದ್ದರೆ, ಮೀಸಲಾತಿ ಉಳಿಯಬೇಕು, ನಾವು ಉಳಿಯಬೇಕು ಎಂಬ ಘೋಷಣೆಯಡಿ ಹೋರಾಟ ಹಮ್ಮಿಕೊಳ್ಳುತ್ತೇವೆ' ಎಂದರು.

'ಇದೇ 21ರಂದು ಮತ್ತೆ ಸಭೆ ಸೇರಿ ಮುಂದಿನ ಹೋರಾಟದ ಬಗ್ಗೆ ತೀರ್ಮಾನಿಸುತ್ತೇವೆ' ಎಂದೂ ಹೇಳಿದರು.

ಮುಜರಾಯಿ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಅಧಿಕಾರಿಗಳಿಗೆ ಸೂಚನೆ

ಮುಜರಾಯಿ ದೇವಸ್ಥಾನಗಳ ಆಸ್ತಿ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮುಜರಾಯಿ ಇಲಾಖೆಯ ಅಧೀನದ ದೇವಸ್ಥಾನಗಳ ಆಸ್ತಿ ಸಮೀಕ್ಷೆ ನಡೆಸುವಂತೆ ಮುಜರಾಯಿ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಚಿವರಾಗಿ ಅಧಿಕಾರವಹಿಸಿಕೊಂಡ ಬಳಿಕ ವಿಧಾನಸೌಧದಲ್ಲಿ ನೂತನ ಕಚೇರಿಯ ಪೂಜೆ ನಡೆಸಿದ ಅವರು ಅಧಿಕಾರಿಗಳ ಜತೆ ಸಭೆ ನಡೆಸಿದರು.

ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿರುವ ಎ, ಬಿ ಮತ್ತು ಸಿ ದರ್ಜೆಯ ದೇವಸ್ಥಾನಗಳ ಜಿಲ್ಲಾವಾರು ಮಾಹಿತಿ ಪಡೆದುಕೊಂಡು, ಆಸ್ತಿ ಎಷ್ಟಿದೆ ಎಂಬುದನ್ನು ಸಮೀಕ್ಷೆ ನಡೆಸಿ, ದೇವಸ್ಥಾನಗಳ ಆಸ್ತಿ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಅವರು ಸೂಚಿಸಿದರು.



ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಮ್ಮ ಪತಿ ಹಾಗೂ ಸಂಸದರಾದ ಅಣ್ಣಾ ಸಾಹೇಬ್ ಜೊಲ್ಲೆ ಜತೆ ವಿಧಾನಸೌಧದಲ್ಲಿ ನೂತನ ಕಚೇರಿ ಪೂಜೆ ನೆರವೇರಿಸಿದರು.

ದೇವಸ್ಥಾನಗಳಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು. ಅಲ್ಲದೆ, ಭಕ್ತರಿಗೆ, ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಸೇರಿ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಮಹಾರಾಷ್ಟ್ರದ ಫಂಡರಾಪುರ ಮತ್ತು ತುಳಜಾ ಭವಾನಿ, ತಮಿಳುನಾಡು, ಕೇರಳದ ಪ್ರಸಿದ್ಧ ದೇವಸ್ಥಾನಗಳಲ್ಲಿ ಕರ್ನಾಟಕದ ಯಾತ್ರಿ ನಿವಾಸ್ ನಿರ್ಮಾಣ ಮಾಡುವ ಬಗ್ಗೆಯೂ ಅವರು ಅಧಿಕಾರಿಗಳ ಜತೆ ಚರ್ಚಿಸಿದರು.

ಕೋವಿಡ್ ಕಾರಣ ದೇವಸ್ಥಾನಗಳಿಗೆ ಸಂಪೂರ್ಣ ನಿಷೇಧ ಹೇರುವ ಬದಲು ಭಕ್ತರನ್ನು ತಂಡಗಳನ್ನಾಗಿ ವಿಂಗಡಿಸಿ ದರ್ಶನಕ್ಕೆ ಅವಕಾಶ ಕಲ್ಪಿಸುವ ಬಗ್ಗೆ ಕ್ರಮ ಕೈಗೊಳ್ಳಬಹುದು ಎಂದು ಜೊಲ್ಲೆ ತಿಳಿಸಿದರು.



ಗಡಿಯಲ್ಲಿ ಟರ್ಕಿ ನಿರ್ಮಿಸಿರುವ ಗೋಡೆ ಎಎಫ್‌ಪಿ ಚಿತ್ರ

ಗಡಿ ಮುಚ್ಚಿದ ಟರ್ಕಿ

ಟಟ್ವಾನ್ (ಟರ್ಕಿ) (ಎಪಿ/ ರಾಯಿಟರ್ಸ್): ತಾಲಿಬಾನ್ ಉಗ್ರರಿಂದ ತಪ್ಪಿಸಿಕೊಂಡು ಬರುತ್ತಿರುವ ಅಫ್ಘಾನಿಸ್ತಾನ ನಿರಾಶ್ರಿತರು, ತಮ್ಮ ನೆಲಕ್ಕೆ ಕಾಲಿರಿಸದಂತೆ ಟರ್ಕಿಯು ತನ್ನ ಗಡಿಯಲ್ಲಿ ಭದ್ರತೆ ಹೆಚ್ಚಿಸಿದೆ.

ಅಫ್ಘಾನ್ ನಿರಾಶ್ರಿತರು ಇರಾನ್‌ನ ಮೂಲಕ ಟರ್ಕಿಯತ್ತ ಹೊರಟಿದ್ದಾರೆ. ಹೀಗಾಗಿ ಟರ್ಕಿಯು ಇರಾನ್ ಗಡಿಯಲ್ಲಿ ಭದ್ರತೆ ಹೆಚ್ಚಿಸಿದೆ. ಹೆಚ್ಚಿನ ಸೇನಾ ತುಕಡಿಗಳನ್ನು ಗಡಿಯತ್ತ ಕಳುಹಿಸುತ್ತಿದೆ.

ಅಫ್ಘಾನಿಸ್ತಾನದಿಂದ ಅಮೆರಿಕದ ಸೇನೆಯ ವಾಪಸಾತಿ ಆರಂಭವಾದ ಬೆನ್ನಲ್ಲೇ ಲಕ್ಷಾಂತರ ಜನರು ಟರ್ಕಿಯತ್ತ ಪ್ರಯಾಣ ಆರಂಭಿಸಿದ್ದರು. ಎರಡು-ಮೂರು ತಿಂಗಳಲ್ಲಿ 1 ಲಕ್ಷಕ್ಕೂ ಹೆಚ್ಚು ಜನರು ಇರಾನ್ ಮತ್ತು ಟರ್ಕಿಯತ್ತ ಗುಳೆ ಹೋಗಿದ್ದಾರೆ. ಅವರಲ್ಲಿ ಹಲವರು ಟಟ್ವಾನ್ ನಗರದ ರೈಲು ನಿಲ್ದಾಣ, ಹಳಿಗಳ ಬಳಿ ಆಶ್ರಯ ಪಡೆದಿದ್ದಾರೆ. ಆದರೆ ಈಗ ಅಫ್ಘಾನಿಸ್ತಾನವು ತಾಲಿಬಾನಿಗಳ ವಶಕ್ಕೆ ಬಂದ ನಂತರ ಅಲ್ಲಿಂದ ಹೊರಟಿರುವ ಜನರನ್ನು, ಕರೆದುಕೊಳ್ಳಲು ಟರ್ಕಿ ಹಿಂದೇಟು ಹಾಕುತ್ತಿದೆ.

ಟರ್ಕಿಯಲ್ಲಿ ಈಗಾಗಲೇ 4 ಲಕ್ಷ ಅಫ್ಘಾನ್ ಮತ್ತು 36 ಲಕ್ಷ ಸಿರಿಯಾ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲಾಗಿದೆ. ಹೀಗಾಗಿ ನಿರಾಶ್ರಿತರ ವಿರುದ್ಧ ದೇಶದಲ್ಲಿ ಆಕ್ರೋಶ ಹೆಚ್ಚಾಗುತ್ತಿದೆ.

ನಿರಾಶ್ರಿತರಿಗೆ ಆಶ್ರಯ ನೀಡುವ ಸರ್ಕಾರದ ನಿರ್ಧಾರದ ವಿರುದ್ಧ ವಿರೋಧ ಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿವೆ. ಹೀಗಾಗಿ ನಿರಾಶ್ರಿತರು ದೇಶವನ್ನು ಪ್ರವೇಶಿಸುವುದನ್ನು ತಡೆಯುತ್ತೇವೆ ಎಂದು ಸರ್ಕಾರವು ಘೋಷಿಸಿದೆ.

ಭಾನುವಾರ ಸಂಜೆ ವೇಳೆಗೆ ಇರಾನ್ ಗಡಿಯಲ್ಲಿ ಒಟ್ಟು 60 ಸಾವಿರ ಅಫ್ಘಾನ್ ನಿರಾಶ್ರಿತರನ್ನು ತಡೆದು ನಿಲ್ಲಿಸಲಾಗಿದೆ. ಇರಾನ್ ಸಹ ಆ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲು ಅಸಹಾಯಕತೆ ವ್ಯಕ್ತಪಡಿಸಿದೆ.

ಗಡುವು ವಿಸ್ತರಣೆಗೆ ಮುಂದುವರಿದ ಮಾತುಕತೆ • ಅಮೆರಿಕದ 11 ಸಾವಿರ ಮಂದಿ ಅಫ್ಘಾನಿಸ್ತಾನದಲ್ಲಿ

ಬಿರುಸು ಪಡೆದ ತೆರವು ಕಾರ್ಯ

ವಾಷಿಂಗ್ಟನ್ (ಎಪಿ): ಅಫ್ಘಾನಿಸ್ತಾನದಲ್ಲಿರುವ ಅಮೆರಿಕದ ನಾಗರಿಕರನ್ನು ಸುರಕ್ಷಿತವಾಗಿ ತೆರವುಗೊಳಿಸಲು ತಾಲಿಬಾನ್ ಸಮ್ಮತಿಸಿದೆ. ಆದರೆ, ತೆರವು ಕಾರ್ಯಾಚರಣೆಗೆ ಎಷ್ಟು ಸಮಯ ನೀಡಲಿದೆ ಎನ್ನುವುದರ ಬಗ್ಗೆ ಇನ್ನೂ ಮಾತುಕತೆ ನಡೆಯುತ್ತಿದೆ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲಿವನ್ ಹೇಳಿದ್ದಾರೆ.

ತೆರವು ಕಾರ್ಯಾಚರಣೆ, ಆ. 31ರ ಒಳಗಾಗಿ ಮುಗಿಯಬೇಕೆಂದು ಅಧ್ಯಕ್ಷ ಜೋ ಬೈಡನ್ ಹೇಳಿದ್ದರು.

ಆದರೆ, ಅಮೆರಿಕವು ಇದುವರೆಗೆ 13 ವಿಮಾನಗಳಲ್ಲಿ 3,200 ಜನ ರನ್ನು ಮಾತ್ರ ತೆರವು ಮಾಡುವಲ್ಲಿ ಯಶಸ್ವಿಯಾಗಿದೆ. ಇನ್ನೂ 11 ಸಾವಿರಕ್ಕೂ ಹೆಚ್ಚು ಜನರನ್ನು ಕರೆತರುವ ಸವಾಲಿದೆ. ಅಮೆರಿಕದ ಸಾವಿರಾರು ಸೈನಿಕರು ಕಾಬೂಲ್ ವಿಮಾನ ನಿಲ್ದಾಣದಲ್ಲಿ ಸ್ವದೇಶಕ್ಕೆ ಮರಳಲು ಜಮಾಯಿಸಿದ್ದಾರೆ.

ಮಂಗಳವಾರದಂದು 13 ವಿಮಾನಗಳಲ್ಲಿ ಅಮೆರಿಕದ 1,100 ನಾಗರಿಕರು, ಕಾಯಂ ನಿವಾಸಿಗಳು ಹಾಗೂ ಅವರ ಕುಟುಂಬದವರನ್ನು ಕಾಬೂಲ್‌ನಿಂದ ಕರೆತರಲಾಗಿದೆ. ಕಾಬೂಲ್‌ನಿಂದ ತೆರವು ಕಾರ್ಯಾಚರಣೆಯ ಉಸ್ತುವಾರಿಗಾಗಿ, ಅಫ್ಘಾನಿಸ್ತಾನದಲ್ಲಿ ಅಮೆರಿಕದ ಮಾಜಿ ರಾಯಭಾರಿ ಜಾನ್ ಬಾಸ್ ಅವರನ್ನು ಹಾಗೂ ವಿಮಾನ ನಿಲ್ದಾಣದ ಭದ್ರತಾ ಕಾರ್ಯದ ಹೊಣೆ ನೋಡಿಕೊಳ್ಳಲು ವಿಶೇಷ ಕಾರ್ಯಾಚರಣೆ ಅಧಿಕಾರಿ, ಸೇನೆಯ ಮೇಜರ್ ಜನರಲ್ ಕ್ರಿಸ್ಟೊಫರ್ ಡೊನೊ ಅವರನ್ನು ಕಳುಹಿಸುತ್ತಿರುವುದಾಗಿ ಅಮೆರಿಕ ಹೇಳಿದೆ.

ದಿನಕ್ಕೆ ಹಲವಾರು ಸಲ ತಾಲಿಬಾನ್ ಕಮಾಂಡರ್‌ಗಳನ್ನು ಸಂಪರ್ಕಿಸಿ, ವಿಮಾನ ನಿಲ್ದಾಣದಲ್ಲಿ ಘರ್ಷಣೆ ಆಗದಂತೆ ನೋಡಿಕೊಳ್ಳುವಂತೆ ಹೇಳಲಾಗಿತ್ತು. ಹೀಗಾಗಿಯೇ ತಾಲಿಬಾನ್ ಪಡೆಯು ತೆರವಿಗೆ ಅಡ್ಡಿಪಡಿಸುತ್ತಿಲ್ಲ ಎಂದೂ ಪೆಂಟಗಾನ್ ವಕ್ತಾರ ಜೋನ್ ಕಿರ್ಬೈ ಬಹಿರಂಗಪಡಿಸಿದ್ದಾರೆ.

ರಾತ್ರಿಯೊಂದರಲ್ಲೇ ವಾಯುಪಡೆಯ ಒಂಬತ್ತು ವಿಮಾನಗಳು ಶಸ್ತ್ರಾಸ್ತ್ರ ಹಾಗೂ 1,000 ಸೇನಾ ಸಿಬ್ಬಂದಿಯೊಂದಿಗೆ ಅಮೆರಿಕ ತಲುಪಿವೆ. ಅಮೆರಿಕದ 165 ನಾಗರಿಕರೂ ಸೇರಿದಂತೆ ಏಳು ವಿಮಾನಗಳಲ್ಲಿ 800 ಜನರನ್ನು ಕಾಬೂಲ್‌ನಿಂದ ತೆರವು ಮಾಡಲಾಗಿದೆ. ಸದ್ಯಕ್ಕೆ 4,000ಕ್ಕೂ ಹೆಚ್ಚು ಅಮೆರಿಕ ಪಡೆಯ ಸಿಬ್ಬಂದಿ ವಿಮಾನ ನಿಲ್ದಾಣದಲ್ಲಿ ಇದ್ದಾರೆ. ಮುಂದಿನ ದಿನಗಳಲ್ಲಿ ಗಂಟೆಗೊಂದರಂತೆ ವಿಮಾನದ ವ್ಯವಸ್ಥೆ ಮಾಡಿ, ದಿನಕ್ಕೆ ಐದರಿಂದ ಒಂಬತ್ತು ಸಾವಿರ ಜನರನ್ನು ತೆರವು ಮಾಡುವ ಗುರಿ ಇದೆ ಎಂದು ಕಿರ್ಬೈ ಹೇಳಿದ್ದಾರೆ.

ದಿನವೊಂದಕ್ಕೆ ಸಾವಿರ ಜನರನ್ನು ಅಫ್ಘಾನಿಸ್ತಾನದಿಂದ ತೆರವುಗೊಳಿಸಲು ನಿರ್ಧರಿಸಿದ್ದಾಗಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರ ವಕ್ತಾರ ಬುಧವಾರ ತಿಳಿಸಿದ್ದಾರೆ.

ಅಫ್ಗನ್ ನಿರಾಶ್ರಿತರಿಗೆ, ಆರಂಭಿಕ ಹಂತದಲ್ಲಿ 5,000 ಸ್ಥಳಗಳಲ್ಲಿ ಆಶ್ರಯ ನೀಡುವುದಾಗಿ ಬ್ರಿಟನ್ ಮಂಗಳವಾರ ಘೋಷಿಸಿದೆ.

ಕಾಬೂಲ್‌ನಲ್ಲಿದ್ದ ತನ್ನ ನಾಗರಿಕರ ತೆರವಿಗಾಗಿ, ಫ್ರಾನ್ಸ್ ದೇಶವು ಮಂಗಳವಾರ ಕಳುಹಿಸಿದ್ದ ಮೊದಲ ವಿಮಾನದಲ್ಲಿ ಭಾರತದ 21 ಜನರೂ ಸುರಕ್ಷಿತವಾಗಿ ಪ್ಯಾರಿಸ್ ತಲುಪಿದ್ದಾರೆ. ಅದರಲ್ಲಿ ಅಫ್ಘಾನಿಸ್ತಾನದ 200 ಜನರೂ ಇದ್ದರು. ಅಮೆರಿಕ ಪಡೆಯ ಸಿಬ್ಬಂದಿಯು ಡಚ್ ಪ್ರಯಾಣಿಕರನ್ನು ತಡೆದುದರಿಂದ, ತನ್ನ ನಾಗರಿಕರ ತೆರವಿಗಾಗಿ ಬಂದಿದ್ದ ಡಚ್ ವಿಮಾನವು ಹಾಗೆಯೇ ವಾಪಸ್ ಹೋಗಿದೆ.

ತನ್ನೊಂದಿಗೆ ಕೆಲಸ ಮಾಡುತ್ತಿರುವ ಅಫ್ಗನ್ನರನ್ನುತೆರವುಗೊಳಿಸುವುದಕ್ಕಾಗಿ, ಇಟಲಿಯ ಏಳು ವಿಮಾನಗಳು ಕಾರ್ಯನಿರ್ವಹಿಸುತ್ತಿವೆ. ಮೊದಲ ತಂಡದಲ್ಲಿ 85 ಜನರನ್ನು ತೆರವುಗೊಳಿಸಲಾಗಿದೆ.

ಸ್ಪೇನ್‌ನ ಮೊದಲ ವಿಮಾನವೂ ಕಾಬೂಲ್‌ನತ್ತ ಹೊರಟಿದ್ದು, ಸದ್ಯ ದಲ್ಲೇ ಮತ್ತೆರಡು ವಿಮಾನಗಳು ಕಾರ್ಯಾಚರಣೆಗೆ ಇಳಿಯುವುದಾಗಿ ಸ್ಪೇನ್ ಪ್ರಧಾನಿ ಪೆಡ್ರೊ ತಿಳಿಸಿದ್ದಾರೆ.

ಸ್ವೀಡನ್, ತನ್ನ ರಾಯಭಾರ ಕಚೇರಿಯ ಎಲ್ಲ ಸಿಬ್ಬಂದಿಯನ್ನೂ ತೆಗೆದುಹಾಕಿದ್ದು, ಆಸ್ಟ್ರಿಯಾ ಹಾಗೂ ರೊಮೇನಿಯಾ ಕೂಡ ಅದೇ ಹೆಜ್ಜೆ ಇರಿಸಿವೆ. ನಾರ್ವೆಯ 14 ಮಂದಿ ಬುಧವಾರ ತೆರವುಗೊಂಡಿದ್ದಾರೆ.



ಗಡಿ ಪಟ್ಟಣ ಚಮನ್ ಮೂಲಕ ಪಾಕಿಸ್ತಾನದತ್ತ ಸಾಗುತ್ತಿರುವ ಅಫ್ಗನ್ ಜನರು —ರಾಯಿಟರ್ಸ್ ಚಿತ್ರ

ಭಾರತೀಯರಿಗೆ ತಾಲಿಬಾನ್ ಬೆಂಗಾವಲು

ಕಾಬೂಲ್ (ಎಎಫ್‌ಪಿ): ಸೋಮವಾರ ಮಧ್ಯರಾತ್ರಿ ಕಾಬೂಲ್‌ನಿಂದ ಹೊರಟು ನಿಂತಿದ್ದ ಭಾರತೀಯ ರಾಯಭಾರ ಕಚೇರಿಯ ಸಿಬ್ಬಂದಿ ಹಾಗೂ ನಾಗರಿಕರಿಗೆ, ತಾಲಿಬಾನ್ ಪಡೆಯೇ ಬೆಂಗಾವಲಾಗಿ ನಿಂತಿತ್ತು.

ಎರಡು ದಶಕಗಳ ಹಿಂದೆ ಅಫ್ಘಾನಿಸ್ತಾನದಿಂದ ತಾಲಿಬಾನ್ ಪಡೆಯನ್ನು ಹೊರದಬ್ಬಿ, ಅಸ್ತಿತ್ವಕ್ಕೆ ಬಂದಿದ್ದ ಹೊಸ ಸರ್ಕಾರಕ್ಕೆ ಭಾರತದ ಬಲವಾದ ಬೆಂಬಲವಿತ್ತು.

ಬದಲಾದ ಪರಿಸ್ಥಿತಿಯಲ್ಲಿ ತಾಲಿಬಾನ್ ಪಡೆ ಮತ್ತೆ ಆಧಿಪತ್ಯ ಸಾಧಿಸಿದೆ. ಇಂಥ ಹೊತ್ತಿನಲ್ಲಿ ಅದು ಭಾರತೀಯರ ವಿರುದ್ಧ ಸೇಡು ತೀರಿಸಿ ಕೊಳ್ಳುವ ಸಾಧ್ಯತೆಯೇ ಹೆಚ್ಚು ಇತ್ತು. ಆದರೆ, ಅಚ್ಚರಿ ಎಂಬಂತೆ ಬೆಂಗಾ ವಲಾಗಿ ನಿಂತು ಭಾರತೀಯ ಪ್ರಯಾಣಿಕರನ್ನು ವಿಮಾನ ನಿಲ್ದಾಣ ತಲುಪಿಸಿದೆ.

ಅಂದು ರಾತ್ರಿ ರಾಯಭಾರ ಕಚೇರಿಯ ಮುಖ್ಯ ಗೇಟ್‌ನ ಹೊರಭಾಗದಲ್ಲಿ ತಾಲಿಬಾನ್ ಶಸ್ತ್ರಧಾರಿಗಳು ಕಾಯುತ್ತಿದ್ದರೆ, ಗೇಟ್ ಒಳಗೆ ಇದ್ದ 150 ರಾಜತಾಂತ್ರಿಕರು ಹಾಗೂ ನಾಗರಿಕರು ಮುಂದೇನಾಗುತ್ತದೆಯೋ ಎಂಬ ಆತಂಕದಲ್ಲಿ ತತ್ತರಿಸಿ ಹೋಗಿದ್ದರು.



ಅಫ್ಘಾನಿಸ್ತಾನದ ಮಾಜಿ ಅಧ್ಯಕ್ಷ ಹಮೀದ್ ಕರ್ಜಾಯಿ ಅವರು ಹಖ್ಖಾನಿ ಗುಂಪಿನ ನಾಯಕ ಅನಸ್ ಹಖ್ಖಾನಿಯನ್ನು ಬುಧವಾರ ಭೇಟಿ ಆಗಿದ್ದಾರೆ. ತಾಲಿಬಾನ್ ನಾಯಕ ಮುಲ್ಲಾ ಅಬ್ದುಲ್ ಘನಿ ಬರದರ್ ಜತೆಗಿನ ಸಮಾಲೋಚನೆಗೆ ಇದು ಪೀಠಿಕೆ ಎಂದು ಹೇಳಲಾಗಿದೆ. —ಪಿಟಿಐ ಚಿತ್ರ

ಆದರೆ, ತಾಲಿಬಾನಿ ಯೋಧರೇ ಖುದ್ದಾಗಿ ಬೆಂಗಾವಲಾಗಿ ಬಂದಿದ್ದು ಅವರಿಗೆ ಅಚ್ಚರಿಯ ಜೊತೆಗೆ ಆತಂಕವೂ ಆಗಿತ್ತು. ಆ ಸಂದರ್ಭದಲ್ಲಿ ಎದುರಿಸಿದ ಆತಂಕ– ಅನಿಶ್ಚಿತತೆ ಹಾಗೂ ಭಾರತಕ್ಕೆ ಕಾಲಿಟ್ಟ ಗಳಿಗೆಯ ಸಂತಸದ ಅನುಭವವನ್ನು ಹಲವರು ಹಂಚಿಕೊಂಡಿದ್ದಾರೆ.

ರಾಯಭಾರ ಕಚೇರಿಯಿಂದ ಹೊರಡುವಾಗ, ಕೆಲವರು ತಾಲಿಬಾನಿಗಳು ತಮ್ಮತ್ತ ಕೈಬೀಸಿ, ನಗೆ ಬೀರಿದ್ದಾಗಿಯೂ ಹೇಳಿದ್ದಾರೆ.

‘ತಾಲಿಬಾನ್ ಪಡೆಯು ಕಾಬೂಲ್ ಅನ್ನು ವಶಪಡಿಸಿಕೊಳ್ಳುವ ಮುನ್ನ ಭಾರತಕ್ಕೆ ಹೊರಟು ಬಂದ 50 ಮಂದಿಗೆ ಇಷ್ಟು ಆತಂಕ ಇರಲಿಲ್ಲ. ಆದರೆ, ಮಾರನೇ ದಿನ ಹೊರಟ 150 ಮಂದಿಯ ಎರಡನೇ ಗುಂಪು ಆ ಪಡೆಯನ್ನು ಎದುರಿಸಬೇಕಾಯಿತು. ಹಸಿರು ವಲಯವನ್ನು ದಾಟಲು ಅವರು ನಮಗೆ ಅವಕಾಶ ನೀಡಲಿಲ್ಲ. ಆಗ, ತಾಲಿಬಾನ್ ನಾಯಕರನ್ನು ಸಂಪರ್ಕಿಸಿ, ನೆರವು ಕೋರಿದೆವು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಸಾಲು ವಾಹನಗಳು ಅತಿ ನಿಧಾನವಾಗಿ ಚಲಿಸುತ್ತಿದ್ದವು. ಅಲ್ಲಲ್ಲಿ ನಿಲ್ಲುತ್ತ, ದಾರಿಯಲ್ಲಿ ಜಮಾಯಿಸಿದ್ದ ಗುಂಪುಗಳನ್ನು ಗುಂಡು ಹಾರಿಸುವ ಮೂಲಕ ಬೆದರಿಸಿ ಹಿಮ್ಮೆಟ್ಟಿಸುತ್ತ ನಮ್ಮನ್ನು ಕೊನೆಗೂ ವಿಮಾನ ನಿಲ್ದಾಣಕ್ಕೆ ತಲುಪಿಸಿದರು. ಐದು ಕಿ.ಮೀ ದೂರದ ನಿಲ್ದಾಣ ತಲುಪಲು ಐದು ಗಂಟೆ ಬೇಕಾಯಿತು’ ಎಂದು ಆತಂಕದ ಕ್ಷಣಗಳನ್ನು ವಿವರಿಸಿದ್ದಾರೆ.

ಮತ್ತೆ ಎರಡು ಗಂಟೆಗಳ ಕಾಯುವಿಕೆ ಬಳಿಕ, ಭಾರತದ ಸೇನಾ ವಿಮಾನದ ಮೂಲಕ ಮಂಗಳವಾರ ಬೆಳಿಗ್ಗೆ ಭಾರತಕ್ಕೆ ತಲುಪಿದ್ದಾಗಿ ಹೇಳಿದ್ದಾರೆ.

‘ಅಂದು ನನ್ನ ಕಚೇರಿಗೆ ಬಂದಿದ್ದ ತಾಲಿಬಾನಿಗಳು, ನಮ್ರರಾಗಿಯೇ ನಡೆದುಕೊಂಡಿದ್ದರು. ಆದರೆ, ಅಲ್ಲಿಂದ ಹೋಗುವಾಗ ನಮ್ಮ ಎರಡು ವಾಹನಗಳನ್ನು ತೆಗೆದುಕೊಂಡು ಹೋಗಿದ್ದರು. ಆಗಲೇ, ನಾನು ಕುಟುಂಬದೊಂದಿಗೆ ದೇಶ ತೊರೆವ ನಿರ್ಧಾರಕ್ಕೆ ಬಂದೆ’ ಎಂದು, ವ್ಯಕ್ತಿಯೊಬ್ಬರು ಆತಂಕ– ಅವಸರದಲ್ಲಿ ಕಾಬೂಲ್ ತೊರೆದ ಕ್ಷಣಗಳನ್ನು ವಿವರಿಸಿದರು. ಏರ್ ಇಂಡಿಯಾ ಸಿಬ್ಬಂದಿಯೊಬ್ಬರ ಸಂತೋಷಕ್ಕಂತೂ ಪಾರವೇ ಇರಲಿಲ್ಲ. ವಿಮಾನದಿಂದ ಇಳಿಯುತ್ತಲೇ, ‘ಭಾರತ ಸ್ವರ್ಗ’ ಎಂದು ಉದ್ಗರಿಸಿದರು.

ಯುಎಇಯಲ್ಲಿ ಘನಿ ವಾಸ್ತವ್ಯ



ಅಶ್ರಫ್ ಘನಿ

ಕಾಬೂಲ್ (ಎಪಿ): ಅಫ್ಘಾನಿಸ್ತಾನ ಅಧ್ಯಕ್ಷ ಅಶ್ರಫ್ ಘನಿ ಮತ್ತು ಅವರ ಕುಟುಂಬ ಸದಸ್ಯರಿಗೆ ತಮ್ಮ ದೇಶದಲ್ಲಿ ವಾಸ್ತವ್ಯ ನೀಡಲಾಗಿದೆ ಎಂದು ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ಒಪ್ಪಿಕೊಂಡಿದೆ. ಮಾನವೀಯ ನೆಲೆಗಟ್ಟಿನಲ್ಲಿ ಅವರಿಗೆ ವಾಸ್ತವ್ಯ ನೀಡಲಾಗಿದೆ ಎಂದು ಹೇಳಿದೆ.

ಈ ಕುರಿತು ಯುಎಇ ವಿದೇಶಾಂಗ ಸಚಿವರು ನೀಡಿ ರುವ ಚುಟುಕು ಹೇಳಿಕೆಯನ್ನು ಯುಎಇ ಆಡಳಿತ ಹೊರತರುವ ಡಬ್ಲ್ಯುಎಎಂ ಸುದ್ದಿ ಪತ್ರಿಕೆ ಪ್ರಕಟಿಸಿದೆ. ಆದರೆ ದೇಶದ ಯಾವ ಸ್ಥಳದಲ್ಲಿ ಘನಿ ಇದ್ದಾರೆ ಎಂಬ ಮಾಹಿತಿಯನ್ನು ಅದು ಬಹಿರಂಗ ಪಡಿಸಿಲ್ಲ.

ಅಫ್ಘಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ತೆಗೆದುಕೊಳ್ಳುತ್ತಿದ್ದಂತೆ ಘನಿ ದೇಶ ಬಿಟ್ಟು ಪರಾರಿ ಆಗಿದ್ದರು.

ಅಫ್ಗನ್‌ನಿಂದ ಕನ್ನಡಿಗರ ಕರೆತರಲು ನೋಡಲ್ ಅಧಿಕಾರಿ

ಬೆಂಗಳೂರು: ಅಫ್ಘಾನಿಸ್ತಾನದಲ್ಲಿ ಸಿಲುಕಿರುವ ಕನ್ನಡಿಗರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆ ತರುವ ಸಲುವಾಗಿ ಕೇಂದ್ರದ ಜತೆ ಸಮನ್ವಯ ಸಾಧಿಸಲು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಉಮೇಶ್ ಕುಮಾರ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಉಮೇಶ್ ಕುಮಾರ್ ಅವರನ್ನು ದೂರವಾಣಿ ಸಂಖ್ಯೆ 080-4984444, 9480800187 ಇ- ಮೇಲ್ afghan_kar@ksp.gov.in ಮೂಲಕ ಸಂಪರ್ಕಿಸಬಹುದು.

ಅಫ್ಘಾನಿಸ್ತಾನದಲ್ಲಿ ಸಿಲುಕಿರುವ ಕನ್ನಡಿಗರ ಹೆಸರು, ಅವರು ಇರುವ ಸ್ಥಳ, ಉದ್ಯೋಗ, ಪಾಸ್‌ಪೋರ್ಟ್ ವಿವರವನ್ನು ತಿಳಿಸಲು ಸರ್ಕಾರ ಕೋರಿದೆ.

ಭಾರತೀಯ ಶಿಕ್ಷಕರ ಮನವಿ

ನವದೆಹಲಿ (ಪಿಟಿಐ): ಕಾಬೂಲ್‌ನ ವಿಶ್ವವಿದ್ಯಾಲಯವೊಂದರಲ್ಲಿ ಸಿಲುಕಿ ರುವ ನಾಲ್ವರು ಭಾರತೀಯ ಪ್ರಾಧ್ಯಾಪಕರು ತಮ್ಮನ್ನು ತಕ್ಷಣ ಭಾರತಕ್ಕೆ ಸ್ಥಳಾಂತರಿಸುವಂತೆ ಬೇಡಿಕೊಂಡಿದ್ದಾರೆ. ಇವರು ಕಾಬೂಲ್‌ನ ಬೆಖ್ತಾರ್ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ.

ದೇಶವು ಉಗ್ರರ ವಶವಾದ ನಂತರ ಯಾವುದೇ ಗುಂಡಿನ ಸದ್ದು ಕೇಳಿಲ್ಲ. ಆದರೆ ಪ್ರತಿ ಗಂಟೆ ಕಳೆಯುವಾಗಲೂ ಅನಿಶ್ಚಿತತೆ, ಭೀತಿ ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಗುಟೆರೆಸ್ ಜತೆ ಜೈಶಂಕರ್ ಚರ್ಚೆ

ವಿಶ್ವಸಂಸ್ಥೆ (ಪಿಟಿಐ): ಅಫ್ಘಾನಿಸ್ತಾನದ ಪರಿಸ್ಥಿತಿ ಕುರಿತು ಸಮಾಲೋಚನೆ ನಡೆಸಲು ವಿಶ್ವಸಂಸ್ಥೆಯ ಭದ್ರತಾ ಸಮಿತಿ ಆಯೋಜಿಸಿದ್ದ ಸಭೆಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್. ಜೈ ಶಂಕರ್ ಅವರು ಪಾಲ್ಗೊಂಡಿದ್ದರು.

ಈ ವೇಳೆ ಅವರು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರೆಸ್ ಮತ್ತು ಎಸ್ಟೋನಿಯ ವಿದೇಶಾಂಗ ಸಚಿವೆ ಇವಾ ಮಾರಿಯಾ ಲಿಮೆಟ್ಸ್ ಅವರ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಆಗಸ್ಟ್ ತಿಂಗಳ ಮುಖ್ಯಸ್ಥಿಕೆಯನ್ನು ಭಾರತ ವಹಿಸಿಕೊಂಡ ಬಳಿಕ 10 ತಿಂಗಳ ಅಂತರದಲ್ಲಿ ಎರಡು ಸಭೆಗಳು ನಡೆದಿವೆ.

ಈ ಕುರಿತು ಟ್ವೀಟ್ ಮಾಡಿರುವ ಜೈಶಂಕರ್, ‘ಭದ್ರತಾ ಮಂಡಳಿ ಸಭೆ ಬಳಿಕ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರೆಸ್ ಅವರನ್ನು ಭೇಟಿಯಾಗಿದ್ದು ಸಂತೋಷವಾಯಿತು. ನಮ್ಮ ಚರ್ಚೆಗಳು ಅಫ್ಘಾನಿಸ್ತಾನದ ಪರಿಸ್ಥಿಯ ಮೇಲೆ ಕೇಂದ್ರೀಕೃತವಾಗಿತ್ತು’ ಎಂದಿದ್ದಾರೆ.

ಭಾರತೀಯರನ್ನು ಕರೆತರಲು ವಂದೇ ಭಾರತ್ ಮಾದರಿ ಮಿಷನ್



ಜ್ಯೋತಿರಾದಿತ್ಯ ಸಿಂದಿಯಾ

ಶಾಜಾಪುರ: ಅಫ್ಘಾನಿಸ್ತಾನದಲ್ಲಿ ಸಿಲುಕಿರುವ ಭಾರತೀಯ ನಾಗರಿಕರನ್ನು ಸುರಕ್ಷಿತವಾಗಿ ಕರೆತರಲು ಕೇಂದ್ರ ಸರ್ಕಾರ ‘ವಂದೇ ಭಾರತ್ ಮಿಷನ್’ನಂತಹ ಯೋಜನೆಯನ್ನು ಮತ್ತೆ ಮಾಡಲಿದೆ ಎಂದು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂದಿಯಾ ಹೇಳಿದರು.

ಅಫ್ಘಾನಿಸ್ತಾನದಿಂದ ಜನರನ್ನು ಭಾರತಕ್ಕೆ ಸ್ಥಳಾಂತರಿಸುವ ಕೆಲಸವನ್ನು ಕೇಂದ್ರ ಸರ್ಕಾರ ಕಳೆದ ಶುಕ್ರವಾರ ದಿಂದಲೇ ಮಾಡುತ್ತಿದೆ. ಆದರೆ ಮಾರ್ಗ ಮಧ್ಯೆ ಸಂಭವಿಸಬಹುದಾದ ಅಪಾಯದ ಕುರಿತು ಭಾನುವಾರ ಎಚ್ಚರಿಕೆ ಬಂದ ಕಾರಣ ರಕ್ಷಣಾ ಕಾರ್ಯದಲ್ಲಿ ತೊಡಕಾಯಿತು. ವಾಯುಪಡೆ ವಿಮಾನವೊಂದು ಕಾಬೂಲ್‌ಗೆ ತೆರಳಿ ಭಾರತೀಯರನ್ನು ಮಂಗಳವಾರ ಕರೆದುಕೊಂಡುಬಂದಿದೆ ಎಂದರು.

ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಎಂದಿನ ಅಂತರರಾಷ್ಟ್ರೀಯ ವಿಮಾನ ಹಾರಾಟ ಸ್ಥಗಿತಗೊಂಡಿದ್ದ ವೇಳೆ ವಿದೇಶಗಳಲ್ಲಿ ಸಿಲುಕಿದ್ದ ಭಾರತೀಯರನ್ನು ‘ವಂದೇ ಭಾರತ್ ಮಿಷನ್’ ಅಡಿ ವಾಪಸ್ ಕರೆತರಲಾಗಿತ್ತು.



ಯೋಗ್ಯ ಮಾರ್ಗದರ್ಶನ ಯಶಸ್ಸಿಗೆ ರಹದಾರಿ

ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ತೇವರಟ್ಟಿ ಗ್ರಾಮದವರಾದ ಕಲಗೌಡ ಪಾಟೀಲ, 2018ರಲ್ಲಿ ನಿವೃತ್ತ ಯೋಧರ ಕೋಟಾದಲ್ಲಿ ಕೆಎಎಸ್ ಅಧಿಕಾರಿಯಾಗಿ ಆಯ್ಕೆಯಾದವರು. ಅವರು ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ಪ್ರೊಬೇಷನರಿ ಸೇವೆಯಲ್ಲಿದ್ದು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವಲಯ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 17ನೇ ವಯಸ್ಸಿನಲ್ಲಿಯೇ ಮಿಲಿಟರಿ ಸೇರಿದ್ದ ಅವರು, ಸೇನೆಯಿಂದ ನಿವೃತ್ತರಾದ ನಂತರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶ ಸಾಧಿಸಿರುವ ಕುರಿತು ತಮ್ಮ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಸಂದರ್ಶನ: ಚನ್ನಬಸಪ್ಪ ರೊಟ್ಟಿ

• ಶೈಕ್ಷಣಿಕ ಜೀವನ ಹೇಗಿತ್ತು?

ಆರಂಭಿಕ ಪ್ರಾಥಮಿಕ ಶಿಕ್ಷಣ ಸ್ವಗ್ರಾಮ ತೇವರಟ್ಟಿಯಲ್ಲಿ, ಹೈಸ್ಕೂಲ್ ಶಿಕ್ಷಣ ಖಿಳೇಗಾಂವದಲ್ಲಿ ನಂತರ ಅಥಣಿಯಲ್ಲಿ ಪಿಯು ಓದುತ್ತಿರುವಾಗಲೇ ಸೇನೆಗೆ ಆಯ್ಕೆ. ಸೇನೆಯಲ್ಲಿದ್ದಾಗಲೇ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಾಹ್ಯವಾಗಿ ಪರೀಕ್ಷೆ ಬರೆದು ಪದವಿ ಅಧ್ಯಯನ.

• ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಒಲವು ಬೆಳೆದಿದ್ದು ಹೇಗೆ?

ತೇವರಟ್ಟಿ ಊರು ಹಾಗೂ ಸುತ್ತಮುತ್ತಲಿನ ಊರುಗಳಿಂದ ಹಲವು ಜನ ಪೊಲೀಸ್ ಅಧಿಕಾರಿಗಳು, ಕೆ.ಎ.ಎಸ್ ಅಧಿಕಾರಿಗಳು ಹೊರಹೊಮ್ಮಿದ್ದು, ಅವರಿಂದ ಪ್ರೇರಣೆ ಪಡೆದೆ. 2016ರಲ್ಲಿ ಮಿಲಿಟರಿಯಿಂದ ಬಂದ ನಂತರ ಏನಾದರೂ ಸಾಧನೆ ಮಾಡಬೇಕು ಎಂಬ ದೃಢನಿಶ್ಚಯ ಮಾಡಿದೆ.

• ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಹೇಗಿತ್ತು?

2016ರಲ್ಲಿ ಅಧ್ಯಯನಕ್ಕೆಂದೇ ಧಾರವಾಡಕ್ಕೆ ಕುಟುಂಬಸಹಿತ ಬಂದು ನೆಲೆಗೊಂಡೆ. ಮೂರು ತಿಂಗಳ ಕೋಚಿಂಗ್ ಪಡೆದು, ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿತುಕೊಂಡೆ. ನಂತರ ಸ್ವಯಂ ಅಧ್ಯಯನ ಹಾಗೂ ಸ್ನೇಹಿತರ ಜೊತೆಗೂಡಿ ಗುಂಪು ಅಧ್ಯಯನ ಆರಂಭಿಸಿದೆ. ವಿವಿಧೆಡೆ ನಡೆಯುತ್ತಿದ್ದ ವಾರಾಂತ್ಯದ ಮಾದರಿ ಪರೀಕ್ಷೆಗಳನ್ನು ಎದುರಿಸುತ್ತಿದ್ದೆ. ದಿನಕ್ಕೆ ಕನಿಷ್ಠ 8ರಿಂದ 10 ಗಂಟೆ ಗ್ರಂಥಾಲಯದಲ್ಲಿ ಕುಳಿತು ಓದುತ್ತಿದ್ದೆ. ತದನಂತರ ಮನೆಗೆ ಬಂದು ಆಯಾ ದಿನದ ಓದಿನ ಕುರಿತು ನೋಟ್ಸ್ ಮಾಡಿಕೊಳ್ಳುತ್ತಿದ್ದೆ.



ಕಲಗೌಡ ಪಾಟೀಲ

• ಆಕರ ಗ್ರಂಥಗಳು, ಪುಸ್ತಕ ಓದುವಿಕೆಯ ಕುರಿತು ನಿಮ್ಮ ಅನುಭವ?

ಮಾರುಕಟ್ಟೆಯಲ್ಲಿರುವ ಬಣ್ಣ-ಬಣ್ಣದ ಪುಸ್ತಕ, ಮ್ಯಾಗಜಿನ್‌ಗಳಿಗೆ ಮಾರುಹೋಗದೇ ಗುಣಮಟ್ಟದ ಗ್ರಂಥಗಳನ್ನು ಆಯ್ದುಕೊಳ್ಳಬೇಕು. 5ರಿಂದ 12ನೇ ತರಗತಿವರೆಗಿನ ರಾಜ್ಯ ಪಠ್ಯಕ್ರಮ ಆಧರಿಸಿದ ಪುಸ್ತಕಗಳನ್ನೇ ಓದುವುದು ಒಳಿತು. ಇದರ ಜೊತೆ ಹಳೆಯ ಪ್ರಶ್ನೆಪತ್ರಿಕೆಗಳ ಅವಲೋಕನ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾದವರು ಸಿದ್ಧಪಡಿಸಿದ್ದ ನೋಟ್ಸ್ ಮೇಲೆ ಕಣ್ಣಾಡಿಸುವುದು ಉತ್ತಮ. ಪ್ರಚಲಿತ ವಿದ್ಯಮಾನದ ಓದಿಗೆ ಪ್ರತಿನಿತ್ಯ 'ಪ್ರಜಾವಾಣಿ'ಯ ಓದು ರೂಢಿಸಿಕೊಂಡು ಪೇಪರ್ ಕಟಿಂಗ್ ಮಾಡಿಟ್ಟುಕೊಳ್ಳಿ.

• ವೃತ್ತಿ ಜೀವನ ಆರಂಭಿಸಿದ್ದು ಯಾವ ಹುದ್ದೆಯಿಂದ?

ಎರಡು ವರ್ಷಗಳ ಅಧ್ಯಯನದ ನಂತರ 2018ರಲ್ಲಿ ಪಿಡಿಒ ಹಾಗೂ ಕೆ.ಎ.ಎಸ್ ಪರೀಕ್ಷೆ ಎದುರಿಸಿದೆ. ಎರಡರಲ್ಲೂ ಉತ್ತೀರ್ಣನಾದರೂ ಕೆ.ಎ.ಎಸ್ ಪೋಸ್ಟಿಂಗ್ ತಡವಾದ ಕಾರಣ 2 ವರ್ಷಗಳವರೆಗೆ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ಮರಗೂರು ಶಿವರ ಗ್ರಾಮದಲ್ಲಿ ಪಿಡಿಒ ಆಗಿ ಸೇವೆ ಸಲ್ಲಿಸಿದೆ. 2020ರ ಜೂನ್ ತಿಂಗಳಲ್ಲಿ ಬಿಬಿಎಂಪಿಯಲ್ಲಿ ಕೆ.ಎ.ಎಸ್ ಅಧಿಕಾರಿಯಾಗಿ ಸೇವೆ ಆರಂಭಿಸಿದೆ.

• ಸಂದರ್ಶನದ ಅನುಭವವೇನು?

ಸಂದರ್ಶನದಲ್ಲಿ ಮಿಲಿಟರಿ ಸೇವೆಯ ಅನುಭವವನ್ನು ಕುರಿತು ಸುಮಾರು 25 ಪ್ರಶ್ನೆಗಳನ್ನು ಕೇಳಿದರು. ಮಿಲಿಟರಿಯಲ್ಲಿ ಕಲಿತ ಮೌಲ್ಯಗಳನ್ನು ಸಿವಿಲ್ ಸರ್ವಿಸ್‌ನಲ್ಲಿ ಅನ್ವಯಿಸುವ ಕುರಿತು ಹಾಗೂ ವ್ಯವಸ್ಥೆಯೇ ಹೀಗಿದೆ ಎಂದು ದೂಷಿಸುವುದಕ್ಕಿಂತ ನಾವೇ ಮಾದರಿಯಾಗಿ ನಡೆದುಕೊಳ್ಳಬೇಕು ಎಂದು ಸಂದರ್ಶಕರ ಮುಂದೆ ವಿಶ್ಲೇಷಿಸಿದ್ದೆ.

• ಪ್ರಸ್ತುತ ನಾಗರಿಕ ಸೇವೆಯ ಅನುಭವವೇನು?

16 ವರ್ಷ, 7 ತಿಂಗಳವರೆಗೆ ಯೋಧನಾಗಿ ಜಮ್ಮು- ಕಾಶ್ಮೀರ, ಲೇಹ್- ಲಡಾಖ್, ದೆಹಲಿ, ಸಿಕ್ಕಿಂ, ಮಥುರಾ, ಅಂಬಾಲಾ, ಅಸ್ಸಾಂ, ಮಣಿಪುರ, ಮೇಘಾಲಯ, ಡೆಹರಾಡೂನ್‌ನಲ್ಲಿ ಸೇವೆ ಸಲ್ಲಿಸಿದ್ದೇನೆ. ಅಲ್ಲಿ ಎದುರಾದ ಕಠಿಣಾತಿ ಕಠಿಣ ಸನ್ನಿವೇಶಗಳು ನಾಗರಿಕ ಸೇವೆಯಲ್ಲಿ ಎದುರಾಗಲು ಸಾಧ್ಯವಿಲ್ಲ. ಆದರೆ, ಅಧಿಕಾರಿಯಾಗಿ ನಾವೇ ಶಿಸ್ತುಬದ್ಧತೆ ಮತ್ತು ಸಮಯಪಾಲನೆ ತೋರಿದರೆ, ನಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಶೇ 99ರಷ್ಟು ಬದಲಾವಣೆ ತರಲು ಖಂಡಿತ ಸಾಧ್ಯ ಎಂಬುದು ನನ್ನ ಅನುಭವ.

• ನಿವೃತ್ತ ಯೋಧ- ಸ್ಪರ್ಧಾರ್ಥಿಗಳಿಗೆ ನಿಮ್ಮ ಸಲಹೆ ಏನು?

ನನ್ನಿಂದ ಏನೂ ಮಾಡಲಾಗದು ಎಂಬ ಭಾವನೆ ಬಿಟ್ಟು ಮುಂದಡಿ ಇರಿಸಿ. ಚಿಕ್ಕವರಿರಲಿ ಅಥವಾ ದೊಡ್ಡವರಿರಲಿ ಯೋಗ್ಯರ ಮಾರ್ಗದರ್ಶನ ಪಡೆಯಿರಿ, ನಮ್ಮ ಬ್ಯಾಚ್‌ನಲ್ಲಿ 32 ಜನ ಮಾಜಿ ಯೋಧರು ಕೆ.ಎ.ಎಸ್ ಅಧಿಕಾರಿಗಳಾಗಿ ಆಯ್ಕೆ ಆಗಿದ್ದೇವೆ. ನೇಮಕಾತಿ ಕೋಟಾದ ಸದುಪಯೋಗ ಪಡೆದು ಸಾಧನೆ ತೋರಿ.

(ಸಂದರ್ಶಕರು: ನಿರ್ದೇಶಕರು, ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶನ ಕೇಂದ್ರ, ಧಾರವಾಡ)

ಪ್ರಜಾವಾಣಿ ಉದ್ಯೋಗ ವಾರ್ತೆ

ಎಸ್‌ಬಿಐನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಹುದ್ದೆಗಳು

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಸಿಸ್ಟೆಂಟ್ ಮ್ಯಾನೇಜರ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆ: ಅಸಿಸ್ಟೆಂಟ್ ಮ್ಯಾನೇಜರ್

ಸ್ಥಳ: ಭಾರತದಾದ್ಯಂತ

ಹುದ್ದೆಗಳ ಸಂಖ್ಯೆ: 46

ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್ ಪದವಿ ಪಡೆದಿರಬೇಕು.

ವಯೋಮಿತಿ: ಅಭ್ಯರ್ಥಿಗೆ ಕನಿಷ್ಠ 21 ವರ್ಷ ಹಾಗೂ ಗರಿಷ್ಠ 30 ವರ್ಷ ವಯಸ್ಸಾಗಿರಬೇಕು. (ಏಪ್ರಿಲ್ 1, 2021ಕ್ಕೆ ಅನ್ವಯವಾಗುವಂತೆ).



ಅರ್ಜಿ ಶುಲ್ಕ: ಸಾಮಾನ್ಯ ಹಾಗೂ ಒಬಿಸಿ ವರ್ಗದ ಅಭ್ಯರ್ಥಿಗಳಿಗೆ ₹ 750. ಎಸ್‌ಸಿ/ಎಸ್‌ಟಿ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.

ಆಯ್ಕೆ ಪ್ರಕ್ರಿಯೆ: ಆನ್‌ಲೈನ್ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್ 2, 2021

ಹೆಚ್ಚಿನ ಮಾಹಿತಿಗೆ: https://sbi.co.in/

ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 44

589. ಶಾತವಾಹನರ ಮೊದಲ ಅರಸು ಯಾರು?
ಎ) ಸಿಮುಖ ಬಿ) ದಂತಿದುರ್ಗ
ಸಿ) ಮಯೂರವರ್ಮ ಡಿ) ಪುಲಿಕೇಶಿ

590. ಒಂದು ಕೆಲಸವನ್ನು 18 ಜನರು 8 ದಿವಸದಲ್ಲಿ ಮುಗಿಸಿದರೆ, ಅದೇ ಕೆಲಸವನ್ನು 6 ಜನರು ಎಷ್ಟು ದಿವಸದಲ್ಲಿ ಮುಗಿಸುತ್ತಾರೆ?
ಎ) 12 ಬಿ) 18 ಸಿ) 24 ಡಿ) 30

591. 'ಸಿ' ಯು 'ಎ' ಯ ಮಗಳಾಗಿದ್ದಾಳೆ. ಆದರೆ, 'ಎ' ಯು 'ಸಿ' ನ ತಾಯಿಯಲ್ಲ. ಹಾಗಾದರೆ, 'ಎ' ಯು 'ಸಿ'ಗೆ ಏನಾಗಬೇಕು?
ಎ) ತಾಯಿ ಬಿ) ಚಿಕ್ಕಮ್ಮ ಸಿ) ತಂದೆ ಡಿ) ದೊಡ್ಡಮ್ಮ

592. ಮಾನವ:ಸಸ್ತನಿ:: ಕೀಟ:___?
ಎ) ಪಕ್ಷಿ ಬಿ) ಉರಗ ಸಿ) ಉಭಯಜೀವಿ
ಡಿ) ಸಂಧಿಪದಿಲು

593. ಚುನಾವಣಾ ಆಯೋಗದ ಆಯುಕ್ತರ ಅಧಿಕಾರಾವಧಿ ಎಷ್ಟು?
ಎ) 4 ವರ್ಷ ಬಿ) 5 ವರ್ಷ
ಸಿ) 6 ವರ್ಷ ಡಿ) 7 ವರ್ಷ

594. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ ಯಾರು?
ಎ) ಚೆಂಗಲರಾಯ ರೆಡ್ಡಿ ಬಿ) ಕೆ.ಹನುಮಂತಯ್ಯ
ಸಿ) ಜೆ.ಎಚ್.ಪಟೇಲ್ ಡಿ) ಯಾರೂ ಅಲ್ಲ

595. 'ರೂಲ್ ಆಫ್ ಲಾ' ಯಾವ ದೇಶದ ಕೊಡುಗೆ?
ಎ) ಅಮೆರಿಕ ಬಿ) ಬ್ರಿಟನ್
ಸಿ) ಸ್ವಿಟ್ಜರ್ಲೆಂಡ್ ಡಿ) ರಷ್ಯಾ

596. ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಸಿದ ವರ್ಷ ಯಾವುದು?
ಎ) 1989 ಬಿ) 1980 ಸಿ) 1981 ಡಿ) 1982

597. RBI ಪ್ರಾರಂಭವಾದ ವರ್ಷ
ಎ) 1935 ಬಿ) 1940 ಸಿ) 1947 ಡಿ) 1952

598. ಕರ್ನಾಟಕದ ಮೊಟ್ಟ ಮೊದಲನೇ ಪೊಲೀಸ್ ಮಹಾ ನಿರ್ದೇಶಕರು ಯಾರು?
ಎ) ಪ್ರವೀಣ ಸೂದ್ ಬಿ) ಅರವಿಂದ ಜಾಧವ್
ಸಿ) ಪಿ.ಕೆ.ಮೋನಪ್ಪ ಡಿ) ಶಂಕರ ಬಿದರಿ

599. ಭಾರತದ ಮೊದಲ ವಿಶ್ವಸುಂದರಿ ಯಾರು?
ಎ) ಐಶ್ವರ್ಯಾ ರೈ ಬಿ) ಸುಶ್ಮಿತಾ ಸೇನ್
ಸಿ) ರೀಟಾ ಫಾರಿಯಾ
ಡಿ) ಡಯಾನಾ ಹೇಡನ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 43ರ ಉತ್ತರಗಳು: 574. ಸಿ, 575. ಬಿ, 576. ಡಿ, 577. ಎ, 578. ಎ, 579. ಡಿ, 580. ಬಿ, 581. ಬಿ, 582. ಎ, 583. ಎ, 584. ಎ, 585. ಡಿ, 586. ಎ, 587. ಸಿ, 588. ಬಿ

ಸಿಇಟಿ ದಿಕ್ಸೂಚಿ

Maths - Sequence & Series, Straightlines

1. If $\log_2(9^{x-1}+7)-\log_2(3^{x-1}+1)=2$, then x values are
(1) 0,2 (2) 0,1
(3) 1, 4 (4) 1,2

2. The sum of the series, $\frac{1}{2.3}.2+\frac{2}{3.4}.2^2+\frac{3}{4.5}.2^3+.....$ to 'n' terms is ___
(1) $\frac{2^{n+1}}{n+2}+1$ (2) $\frac{2^{n+1}}{n+2}-1$
(3) $\frac{2^{n+1}}{n+2}+2$ (4) $\frac{2^{n+1}}{n+2}-2$

3. If the 2^{nd} and 5^{th} terms of G.P are 24 and 3 respectively, then the sum of 1^{st} six terms is ___
(1) $\frac{189}{2}$ (2) $\frac{189}{5}$
(3) $\frac{179}{2}$ (4) $\frac{2}{189}$

4. If $1+\sin\theta+\sin^2\theta+$------upto $\infty=2\sqrt{3}+4$ the $\theta=$
(1) π/6 (2) π/4
(3) π/3 (4) 3π/4

5. 3+5+7+.... to n term is
(1) n (n+2) (2) n(n-2)
(3) n^2 (4) $(n+1)^2$

6. If a, b, c are three consecutive terms of an AP and x, y, z are three consecutive terms of a GP, then value of $x^{b-c}.y^{c-a}.z^{a-b}$
(1) 0 (2) xyz
(3) -1 (4) 1

7. A unit vector perpendicular to the plane containing the vectors $\hat{i}+2\hat{j}+\hat{k}$ and $-2\hat{i}+\hat{j}+3\hat{k}$ is
(1) $\frac{\hat{i}+\hat{j}-\hat{k}}{\sqrt{3}}$ (2) $\frac{-\hat{i}-\hat{j}-\hat{k}}{\sqrt{3}}$
(3) $\frac{\hat{i}+\hat{j}+\hat{k}}{\sqrt{3}}$ (4) $\frac{-\hat{i}+\hat{j}-\hat{k}}{\sqrt{3}}$

8. If the sum of n terms of an A.P. is given by $S_n=n^2+n$, then the common difference of the A.P. is
(1) 2 (2) 6
(3) 4 (4) 1

9. Locus of a point which moves such that its distance from the x-axis is twice its distance from the line $x-y=0$ is
(1) $x^2+4xy-y^2=0$
(2) $2x^2-4xy+y^2=0$
(3) $x^2-4xy+y^2=0$
(4) $x^2-4xy-y^2=0$

10. The points A(1, 2), B(2, 4) and C(4, 8) form a/an
(1) Isosceles triangle
(2) Equilateral triangle
(3) Straight line
(4) Right angled triangle

11. If lines represented by $x+3y-6=0, 2x+y-4=0$ & $kx-3y+1=0$ are concurrent, then the value of k is
(1) $\frac{6}{19}$ (2) $\frac{19}{6}$
(3) $-\frac{19}{6}$ (4) $-\frac{6}{19}$

12. The points (11, 9), (2, 1) and (2,-1) are the midpoints of the sides of the triangle. Then the centroid is
(1) (-5,-3) (2) (5,-3)
(3) (3,5) (4) (5,3)

13. The reflection of the point (1, 1) along the line y = -x is
(1) (0, 0) (2) (-1, 1)
(3) (-1, -1) (4) (1, -1)

14. 1f one of the slopes of the pair of lines $ax^2+2hxy+by^2=0$ is n times the other then
(1) $4(n+1)^2ab=nab$
(2) $4h^2=(n+1)^2ab$
(3) $4nh^2=(n+1)^2ab$
(4) $4ab=(n+1)^2h$

15. If the line $6x-7y+8+\lambda(3x-y+5)=0$ is parallel to y-axis, then $\lambda=$ ______
(1) −7 (2) −2
(3) 7 (4) 2

16. The angle between the lines $\sin^2\alpha.y^2-2xy.\cos^2\alpha+(\cos^2\alpha-1)x^2=0$ is ___
(1) 90^0 (2) α
(3) $\frac{\alpha}{2}$ (4) 2α

17. A straight line passes through the points (5,0) and (0,3). The length of perpendicular from the point (4,4) on the line is
(1) $\frac{\sqrt{17}}{2}$ (2) $\sqrt{\frac{17}{2}}$
(3) $\frac{15}{\sqrt{34}}$ (4) $\frac{17}{2}$

18. A line passes through (2,2) and is perpendicular to the line $3x+y=3$. Its y-intercepts is ______
(1) $\frac{1}{3}$ (2) $\frac{2}{3}$
(3) $\frac{4}{3}$ (4) 1

19. If the straight lines 2x + 3y – 3 = 0 and x + ky + 7 = 0 are perpendicular, then the value of k is
(1) 2/3 (2) 3/2
(3) –2/3 (4) –3/2

20. Equation of line passing through the point (1,2) and perpendicular to the line $y=3x-1$ is
(1) $x+3y-7=0$ (2) $x+3y+7=0$
(3) $x+3y=0$ (4) $x-3y=0$

21. The area of triangle with vertices (K,0), (4,0), (0,2) is 4 square units, then value of K is
(1) 0 or 8 (2) 0 or -8
(3) 0 (4) 8

22. The equation of the line parallel to the line 3x – 4y + 2 = 0 and passing through (-2, 3) is
(1) 3x – 4y + 18 =0 (2) 3x – 4y – 18 =0
(3) 3x + 4y + 18 = 0 (4) 3x + 4y – 18 =0

23. $[\vec{a}+2\vec{b}+\vec{c}\quad \vec{a}-\vec{b}\quad \vec{a}-\vec{b}-\vec{c}]=$
(1) $[\vec{a}\,\vec{b}\,\vec{c}]$ (2) $3[\vec{a}\,\vec{b}\,\vec{c}]$
(3) 0 (4) $2[\vec{a}\,\vec{b}\,\vec{c}]$

24. The two lines $lx+my=n$ and $l'x+m'y=n'$ are perpendicular if
(1) $lm+l'm'=0$ (2) $lm'+ml'=0$
(3) $ll'+mm'=0$ (4) $lm'=ml'$

Answers

1. Answer: (4)
Sol:-$\log_2\frac{9^{x-1}+7}{3^{x-1}+1}=2\Rightarrow\frac{9^{x-1}+7}{3^{x-1}+1}=2^2=4$
$\Rightarrow\frac{\frac{3^{2x}}{9}+7}{\frac{3^x}{3}+1}=4\Rightarrow\frac{3^{2x}+63}{9}=\frac{4.3^x+4.3}{3}$
$3^{2x}+63=12.3^x+36$
$3^{2x}-12.3^x+27=0$
$t^2-9t-3t+27=0$
Let $3^x=t$
$(t-9)(t-3)=0$
$\Rightarrow 3^x=9=3^2$ or $3^x=3'$
$\therefore x=1, 2$

2. Answer : (2)
Sol : $T_n=\frac{n}{(n+1)(n+2)}2^n=\frac{2.2^n}{n+2}-\frac{2^n}{n+1}$
$S_n=\frac{2.2^n}{n+2}-\frac{2}{2}=\frac{2^{n+1}}{n+2}-1$

3. Answer (1)
Hint : $\left.\begin{matrix}ar=24\\ar^4=3\end{matrix}\right\}\Rightarrow r^2=\frac{1}{8}\Rightarrow r=\frac{1}{2},a=48$
$a+ar+ar^2+ar^3+ar^4+ar^5=\frac{a(r^6-1)}{r-1}=\frac{48\left[1-\frac{1}{64}\right]}{1-\frac{1}{2}}$
$=\frac{189}{2}$

4. Answer (3)
Sol. Conceptual


5. Answer: (1)
Sol: $S_n=\frac{n}{2}[2a+(n-1)d]$
$=\frac{n}{2}[6+(n-1)2]$
$=n[n+2]$

6. Answer (4)
Solution:
Let common difference of A.P. be 'd'
$x^{b-c}.y^{c-a}.z^{a-b}$
a,b,c and in AP
$[b-c=-d, c-a=2d, a-b=-d]$
$=x^{-d}.y^{2d}.z^{-d}$
$=(x^{-1}.y^2.z^{-1})^d$
$=\left(\frac{y^2}{xz}\right)^d$
$=1^d=1$
: Given x,y,z are in GP $y^2=xz$

7. Key. (4)
Hint: $\hat{n}=\left(\frac{\vec{a}\times\vec{b}}{|\vec{a}\times\vec{b}|}\right)$
$\vec{a}\times\vec{b}=\begin{vmatrix}\hat{i}&\hat{j}&\hat{k}\\1&2&1\\-2&1&3\end{vmatrix}=5\hat{i}-5\hat{j}+5\hat{k}$
$|\vec{a}\times\vec{b}|=5\sqrt{3}$
$\therefore\hat{n}=\frac{\hat{i}-\hat{j}+\hat{k}}{\sqrt{3}}$ or $\hat{n}=\frac{-\hat{i}+\hat{j}-\hat{k}}{\sqrt{3}}$

8. Answer (1)
Sol: $S_n=n^2+n$
$S_1=1+1=T_1$
$S_2=T_1+T_2=2^2+2=6$
$T_1=2=a$
$T_1+T_2=a+(a+d)=6$
$\Rightarrow 2a+d=6\Rightarrow 4+d=6\Rightarrow d=2$

9. Answer (2)
Sol.: P_1 = length of perpendicular from P to x-axis
P_2 = length of perpendicular from P to $y=x$ line.
$P_1=2P_2$
$|k|=2.\frac{|h-k|}{\sqrt{2}}$
Squaring on both sides, $k^2=2(h-k)^2$



So, the locus of a point P is, $2x^2-4xy+y^2=0$

10. Answer (3)
Sol.: Given points A (1, 2), B (2, 4), C (4, 8)
$AB=\sqrt{(2-1)^2+(4-2)^2}=\sqrt{1+4}=\sqrt{5}$
$BC=\sqrt{(4-2)^2+(8-4)^2}=\sqrt{4+16}=\sqrt{20}$
$CA=\sqrt{(1-4)^2+(2-8)^2}=\sqrt{9+36}=\sqrt{45}$
So, the three points form a straight line or three points are collinear

11. Answer (2)
Sol.: Given lines are,
$x+3y-6=0$
$2x+y-4=0$
$kx-3y+1=0$
These given lines will concurrent when
$\begin{vmatrix}1&3&-6\\2&1&-4\\k&-3&1\end{vmatrix}=0$
$K=\frac{19}{6}$

12. Answer: (4)
Sol:-centroid of the mid points is same as centroid of the triangle
$\therefore$ centroid = (5, 3)

13. Answer: (3)
Sol:-Image of (a, b) with respect to line y = -x is (-b, -a)
∴ Image of (1, 1) is (-1, -1)

14. Answer: (3)
Sol:-$m_1=nm_2$, $m_1+m_2=\frac{-2h}{b}$
$\Rightarrow(n+1)m_2=\frac{-2h}{b}$
$m_1.m_2=\frac{a}{b}\therefore m_2=\frac{-2h}{b(n+1)}$
$\Rightarrow n\times\left(\frac{-2h}{b(n+1)}\right)^2=\frac{a}{b}$
$\therefore 4nh^2=(n+1)ab$

15. Answer (1)
Sol : Slope $=\frac{3(\lambda+2)}{(\lambda+7)}$ is not defined
$\Rightarrow\lambda=-7$

16. Answer (1)
Sol : $a=-\sin^2\alpha, b=\sin^2\alpha$
$a+b=0\Rightarrow\theta=90°$

17. Answer (2)
Hint: $y-0=\frac{3-0}{0-5}(x-5)$
$y=-\frac{3}{5}(x-5)$
$3x+5y-15=0$
$d=\frac{3(4)+5(4)-15}{\sqrt{3^2+5^2}}$
$=\frac{17}{\sqrt{34}}=\sqrt{\frac{17}{2}}$

18. Answer (3)
Hint :Slope of given line $=-3$
Slope of required line $=\frac{1}{3}$
Equation is $y-2=\frac{1}{3}(x-2)$
For Y intersection put x = 0 $\Rightarrow y=\frac{-2}{3}+2=\frac{4}{3}$

19. Answer (3)
Sol. $m_1=-2/3$
$m_2=-1/k$
$\Rightarrow m_1m_2=-1$
$\Rightarrow K=-2/3$

20 Answer: (1)
Sol: Slope of the line y=3x-1 is 3
$\perp^{er}$ slope $=\frac{-1}{3}$
Eq of the line is $y-2=\frac{-1}{3}(x-1)$
$\Rightarrow 3y-6=-(x-1)$
$\Rightarrow 3y-6=-x+1$
$\Rightarrow \boxed{x+3y-7=0}$

21. Answer: (1)
Sol: $A\underset{x_1y_1}{(k,0)}B\underset{x_2y_2}{(4,0)}C\underset{x_3y_3}{(0,2)}$
Area of Δ^{le}ABC
$=\frac{1}{2}|x_1(y_2-y_3)+x_2(y_3-y_1)+x_3(y_1-y_2)|$
$=\frac{1}{2}|k(-2)+4(2)+0|$
$=|4-k|$
$|4-k|=4$
$\Rightarrow 4-k=4$ (or) $4-k=-4$
$\Rightarrow\boxed{k=0}$ (or) $\Rightarrow\boxed{k=8}$

22. Answer (1)
Solution:
Parallel line $3x-4y+\lambda=0$, it passes through (−2,3)

23. Answer (2)
Hint: $[\vec{a}+2\vec{b}+\vec{c}\quad\vec{a}-\vec{b}\quad\vec{a}-\vec{b}-\vec{c}]=$
$(\vec{a}+2\vec{b}-\vec{c}).\{(\vec{a}-\vec{b})\times(\vec{a}-\vec{b}-\vec{c})\}$
$=(\vec{a}+2\vec{b}+\vec{c}).\{-\vec{a}\times\vec{b}-\vec{a}\times\vec{c}-\vec{b}\times\vec{a}+\vec{b}\times\vec{c}\}$
$=[\vec{a}\,\vec{b}\,\vec{c}]-2[\vec{b}\,\vec{a}\,\vec{c}]$
$=[\vec{a}\,\vec{b}\,\vec{c}]+2[\vec{a}\,\vec{b}\,\vec{c}]=3[\vec{a}\,\vec{b}\,\vec{c}]$

24. Answer: (3)
Sol: $lx+my=x$
$l'x+m'y=n'$
Product of their slopes is -1
$\Rightarrow\left(\frac{-l}{m}\right)\left(\frac{-l'}{m'}\right)=-1$
$\Rightarrow ll'=-mm'\Rightarrow ll'+mm'=0$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)



ಸುಭಾಷಿತ

ಜನರನ್ನು ದ್ವೇಷಿಸುವುದೆಂದರೆ, ಇಲಿಯನ್ನು ತೊಡೆದುಹಾಕಲು ನಿಮ್ಮ ಮನೆಗೆ ನೀವೇ ಬೆಂಕಿ ಇಟ್ಟುಕೊಂಡಂತೆ.

–ಹ್ಯಾರಿ ಎಮರ್ಸನ್ ಫೋಸ್‌ಡಿಕ್

ದೇಶ ವಿಭಜನೆಯ ಕ್ರೌರ್ಯದ ನೆನಪು ವರ್ತಮಾನದಲ್ಲಿ ಸಾಮರಸ್ಯಕ್ಕೆ ನೆರವಾಗದು

ದೇಶ 'ವಿಭಜನೆಯ ಕ್ರೌರ್ಯದ ನೆನಪಿನ ದಿನ'ವನ್ನು ಪ್ರತೀ ಆಗಸ್ಟ್ 14ರಂದು ಆಚರಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಹಿಂದೆ ಅನುಭವಿಸಿದ ಕ್ರೌರ್ಯವನ್ನು ಮತ್ತೆ ಮತ್ತೆ ನೆನಪಿಸುವುದು ಯಾವುದೇ ಸಮಾಜಕ್ಕೆ ಅಥವಾ ವ್ಯಕ್ತಿಗೆ ಒಳ್ಳೆಯದನ್ನು ಮಾಡುವುದಿಲ್ಲ. ಕರಾಳ ನೆನಪನ್ನು ಜನರು ಮರೆಯಲು ಯತ್ನಿಸುತ್ತಾರೆಯೇ ಹೊರತು ಪದೇ ಪದೇ ನೆನಪಿಸಿಕೊಳ್ಳುವುದಕ್ಕೆ ಅಲ್ಲ. ಈ ಹಿನ್ನೆಲೆಯಲ್ಲಿ ನೋಡಿದಾಗ ಪ್ರಧಾನಿಯವರ ಘೋಷಣೆಯು ವಿವೇಕದ ತೀರ್ಮಾನ ಅಲ್ಲ ಎಂದೇ ಹೇಳಬೇಕಾಗುತ್ತದೆ. ಇತಿಹಾಸದ ಯಾವ ನೆನಪು ತನ್ನನ್ನು ಆರೋಗ್ಯಪೂರ್ಣವಾಗಿಸುತ್ತದೆ, ಯಾವ ವಿಚಾರಗಳು ಮನಸ್ಸನ್ನು ಕೆಡಿಸುತ್ತವೆ ಎಂಬುದನ್ನೆಲ್ಲ ಪ್ರಜ್ಞಾಪೂರ್ವಕವಾಗಿ, ಅಪ್ರಜ್ಞಾಪೂರ್ವಕವಾಗಿ ಲೆಕ್ಕ ಹಾಕುತ್ತಾ ಸಮಾಜವು ನೆನಪಿಸಿಕೊಳ್ಳುವಿಕೆ ಮತ್ತು ಮರೆವಿನ ಮೂಲಕ ಮುಂದಕ್ಕೆ ಸಾಗುತ್ತದೆ. ಇದೊಂದು ಸಾಮೂಹಿಕ ಪ್ರಕ್ರಿಯೆ. ಆದ್ದರಿಂದಲೇ, ಕೆಡುಕನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬಾರದು ಮತ್ತು ಒಳಿತನ್ನು ಮರೆವಿನ ಮರೆಗೆ ತಳ್ಳಬಾರದು ಎಂಬುದು ವಿವೇಕದ ಮಾತು. ಭಾರತದ ಇತ್ತೀಚಿನ ಇತಿಹಾಸದಲ್ಲಿ ಇರುವ ಅತ್ಯಂತ ಕ್ರೂರವಾದ ಸಾಮೂಹಿಕ ಅನುಭವ ಎಂದು ದೇಶ ವಿಭಜನೆಯನ್ನು ಪರಿಗಣಿಸಬಹುದು. ವಿಭಜನೆಗೆ ಸಂಬಂಧಿಸಿದಂತೆ ಅತೀವ ವೇದನೆ ಮತ್ತು ಸಂಕಷ್ಟದ ಸಾವಿರಾರು ವೈಯಕ್ತಿಕ ಕಥನಗಳಿವೆ. ವಿಭಜನೆಯ ಕರಾಳ ದಿನಗಳು ಉಪಖಂಡದ ಮೂರೂ ರಾಷ್ಟ್ರಗಳಿಗೆ ಅತಿ ಹೆಚ್ಚು ನೋವನ್ನು ಉಂಟುಮಾಡಿವೆ.



ಹಳೆಯ ಗಾಯಗಳನ್ನು ಕೆದಕಿ ಅವನ್ನು ವ್ರಣವಾಗಿಸುವುದರಲ್ಲಿ ಅರ್ಥವಿಲ್ಲ

ಹಳೆಯ ಗಾಯಗಳನ್ನು ಕೆದಕಿ ಅವನ್ನು ವ್ರಣವಾಗಿಸುವುದರಲ್ಲಿ ಅರ್ಥವಿಲ್ಲ. ಕಳೆದ ದಶಕಗಳಲ್ಲಿ ಗಾಯವು ನಿಧಾನವಾಗಿ ಮಾಯತೊಡಗಿದೆ. ಈಗ ಅದನ್ನು ಕೆದಕಲೇಬಾರದು. 'ಸಾಮಾಜಿಕ ವಿಭಜನೆ ಮತ್ತು ಸಂಘರ್ಷದಲ್ಲಿರುವ ವಿಷವನ್ನು ಹೊರತೆಗೆದು ಒಗ್ಗಟ್ಟಿನ ಸ್ಫೂರ್ತಿ, ಸಾಮಾಜಿಕ ಸಾಮರಸ್ಯವನ್ನು ಬಲಪಡಿಸಲು ಐತಿಹಾಸಿಕ ಕ್ರೌರ್ಯದ ವಾರ್ಷಿಕ ದಿನಾಚರಣೆ ಅಗತ್ಯ' ಎಂದು ಮೋದಿ ಪ್ರತಿಪಾದಿಸಿದ್ದಾರೆ. ಆದರೆ, ವಿಭಜನೆಯ ದಿನದ ಅಚರಣೆಯು ಕಹಿ ಪ್ರಸಂಗಗಳು ಮತ್ತೆ ಮತ್ತೆ ಕಣ್ಣಮುಂದೆ ಹಾದು ಹೋಗಲು ಕಾರಣ ಆಗಬಹುದು. ಎರಡು ದೇಶಗಳ ನಡುವಣ ರಕ್ತಸಿಕ್ತ ಗಡಿಯ ಚಿತ್ರಣ ಜನರ ಮನಸ್ಸಿನೊಳಗೆ ನೆಲೆಗೊಳ್ಳಬಹುದು. ವಿಭಜನೆಯ ಕರಾಳ ದಿನದ ನೆನಪು ಜನರ ಮನಸ್ಸುಗಳು ಮತ್ತೆ ವಿಭಜನೆಗೊಳ್ಳಲು ಕಾರಣವಾದೀತೇ ವಿನಾ ಅವರನ್ನು ಒಗ್ಗೂಡಿಸುವುದಕ್ಕೆ ಅಲ್ಲ. ಕೆಟ್ಟ ನೆನಪುಗಳನ್ನು ಕೆದಕುವುದು ವಿಭಜನಕಾರಿ ರಾಜಕಾರಣಕ್ಕೆ ಅನುಕೂಲವನ್ನು ಮಾಡಿಕೊಡಬಹುದೇ ವಿನಾ ಬೇರೆ ಯಾವ ಪ್ರಯೋಜನವೂ ಆಗದು.

ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಕರಾಳ ಕೃತ್ಯಗಳು ಮತ್ತೆಂದೂ ನಡೆಯಬಾರದು ಎಂಬ ಎಚ್ಚರ ವಹಿಸುವುದಕ್ಕೆ ಮಾತ್ರ ಈ ನೆನಪು ಸೀಮಿತವಾಗಬೇಕು. ಅದನ್ನು ಬಿಟ್ಟು, ದೇಶಗಳ ನಡುವೆ, ಸಮುದಾಯಗಳ ನಡುವೆ ದ್ವೇಷ ಸೃಷ್ಟಿಯಾಗಲು ಈ ನೆನಪು ಬಳಕೆ ಆಗಲೇಬಾರದು ಎಂಬ ಎಚ್ಚರ ವಹಿಸಬೇಕಾದುದು ಸರ್ಕಾರದ ಕರ್ತವ್ಯ. ಪಾಕಿಸ್ತಾನದ ಜತೆ ಗಡಿ ಹಂಚಿಕೊಂಡಿರುವ ಪಂಜಾಬ್, ರಾಜಕೀಯವಾಗಿ ಅತ್ಯಂತ ಮಹತ್ವದ್ದಾದ ಉತ್ತರಪ್ರದೇಶ ಸೇರಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಕೆಲವೇ ತಿಂಗಳಲ್ಲಿ ನಡೆಯಲಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ ಚುನಾವಣೆಯ ಸಂದರ್ಭದಲ್ಲಿ ಧ್ರುವೀಕರಣ ಅಸ್ತ್ರವು ಅತ್ಯಂತ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಹಾಗಾಗಿ, ದೇಶವು ಎರಡಾಗಿ ತುಂಡಾದ ನಂತರದ ದಿನಗಳಲ್ಲಿ ನಡೆದ ಹಿಂಸಾಚಾರ ಮತ್ತು ಕೆಡುಕಿನ ನೆನಪುಗಳು ಮತ ಗಳಿಕೆಯ ಅಸ್ತ್ರವಾಗಿ ಬಳಕೆಯಾಗುವ ಅಪಾಯವಿದೆ ಎಂಬ ಕಳವಳವು ವ್ಯಕ್ತವಾಗಿದೆ. ವರ್ತಮಾನದ ರಾಜಕೀಯ ಲಾಭಕ್ಕಾಗಿ ಇತಿಹಾಸದ ಕ್ರೌರ್ಯದ ನೆನಪಿನ ಮೊರೆ ಹೋಗುವುದು ದೇಶದ ಭವಿಷ್ಯಕ್ಕೆ ಮಾರಕ ಆಗಬಹುದು.

ಸ್ವಾತಂತ್ರ್ಯದ ಹಿಂದಿನ ರಾತ್ರಿಯನ್ನು ಗಮನಿಸಿದರೂ, ಸ್ವಾತಂತ್ರ್ಯಕ್ಕೆ ಹಿಂದಿನ ಕತ್ತಲು ಮತ್ತು ಸ್ವಾತಂತ್ರ್ಯದ ಸಂಭ್ರಮದ ಬೆಳಗು ಎಂಬ ಎರಡು ಭಾಗಗಳನ್ನು ಗುರುತಿಸಬಹುದು. ಸಾಮರಸ್ಯ ಮತ್ತು ಒಗ್ಗಟ್ಟಿಗಾಗಿ ಪ್ರಧಾನಿಯವರು ವಿಭಜನೆಯ ಕತ್ತಲಿನತ್ತ ನೋಡುವುದರ ಬದಲಿಗೆ, ಸ್ವಾತಂತ್ರ್ಯದ ಮುಂಜಾವಿನತ್ತ ದೃಷ್ಟಿ ಹರಿಸಬಹುದಾಗಿತ್ತು. ಆಗಸ್ಟ್ 15ರಂದು ನಾವು ಆಚರಿಸುವ ಸ್ವಾತಂತ್ರ್ಯದ ಸಂಭ್ರಮದ ಮೇಲೆ ಅದರ ಹಿಂದಿನ ದಿನ ಆಚರಿಸುವ ವಿಭಜನೆಯ ಕರಾಳ ನೆನಪಿನ ದಿನದ ಪ್ರತಿಕೂಲ ಪರಿಣಾಮ ಉಂಟಾಗುವ ಅಪಾಯ ಖಂಡಿತಾ ಇದೆ. ರಾಷ್ಟ್ರಪ್ರಜ್ಞೆ ಮತ್ತು ರಾಷ್ಟ್ರೀಯತೆಯ ಮೇಲೆಯೂ ಅದರ ಪರಿಣಾಮ ಇರಲಿದೆ. ನಮ್ಮ ದೃಷ್ಟಿಯು ಹಿಮ್ಮುಖವಾಗಿರಬೇಕೇ ಅಥವಾ ಭವಿಷ್ಯವನ್ನು ನೋಡಬೇಕೇ? ಸ್ವಾತಂತ್ರ್ಯ ದಿನದ ಭಾಷಣದಲ್ಲಿಯೂ ಮೋದಿಯವರು ವಿಭಜನೆಯ ದಿನದ ಕರಾಳ ನೆನಪಿನ ಬಗ್ಗೆ ಮಾತನಾಡಿದ್ದಾರೆ. ಕಾಲ ಅಥವಾ ಸಮಯ ಎಂಬುದು ಅವರ ಭಾಷಣದ ಉದ್ದಕ್ಕೂ ಎದ್ದು ಕಂಡ ಅಂಶವಾಗಿತ್ತು. ಕಾಲದ ಹಲವು ಗಡುವುಗಳನ್ನು ಅವರು ಮುಂದೂಡಿದ್ದಾರೆ ಮತ್ತು ಹೊಸ ಗಡುವುಗಳನ್ನು ಹಾಕಿಕೊಂಡಿದ್ದಾರೆ. ಹೌದು, ದೇಶವು ಈ ಗಡುವುಗಳೊಳಗೆ ಮಾಡಬೇಕಿರುವ ಕೆಲಸಗಳನ್ನು ಮಾಡುತ್ತಾ ಮುಂದಕ್ಕೆ ಸಾಗಬೇಕಿದೆ. ಯಾವುದೇ ದೇಶವು ಮುಂದಕ್ಕೆ ಸಾಗಬೇಕೇ ವಿನಾ ಹಿಂದಕ್ಕೆ ಅಲ್ಲ. ಹೊಸ ಮನಸ್ಸಿನೊಂದಿಗೆ ನಾವು ನಮ್ಮನ್ನು ಪುನಶ್ಚೇತನಗೊಳಿಸಿಕೊಳ್ಳಬೇಕು ಎಂದು ಶ್ರೀ ಅರವಿಂದೊ ಹೇಳಿದ್ದನ್ನು ಮೋದಿ ಉಲ್ಲೇಖಿಸಿದ್ದಾರೆ. ಭವಿಷ್ಯವನ್ನು ಚಿಂತಿಸಿ, ಭವಿಷ್ಯದತ್ತ ಮುಖಮಾಡಿ ಎಂದು ಅರವಿಂದೊ ಹೇಳಿದ್ದನ್ನೂ ಮೋದಿ ಅವರು ನೆನಪಿಸಿಕೊಳ್ಳಬೇಕಿತ್ತು. ಇತಿಹಾಸಕ್ಕೆ, ಕರಾಳ ನೆನಪಿಗೆ ಜೋತು ಬೀಳುವುದರಲ್ಲಿ ದೇಶಕ್ಕೆ ಯಾವ ಪ್ರಯೋಜನವೂ ಇಲ್ಲ.

ದಿನದ ಟ್ವೀಟ್

ಕಾರಣ ಹೊರಬೀಳಬೇಕಿದೆ



ಅತ್ಯುತ್ತಮ ತರಬೇತಿ ಪಡೆದ ಆಫ್ಗನ್ ಸೇನೆಯು (ಅಮೆರಿಕವು 20 ವರ್ಷಗಳಿಂದ ಸಜ್ಜುಗೊಳಿಸಿದ್ದ ಮತ್ತು 8,300 ಕೋಟಿ ಡಾಲರ್ ವ್ಯಯಿಸಿದ್ದ) ಹೋರಾಟವನ್ನೇ ನಡೆಸದೆ ಶಸ್ತ್ರಸಜ್ಜಿತ ಗುಂಪಿಗೆ ಅಫ್ಗಾನಿಸ್ತಾನವನ್ನು ಬಿಟ್ಟುಕೊಟ್ಟಿದ್ದೇಕೆ? ಬಹುಪತ್ನಿತ್ವವಾದವನ್ನು ಬೆಂಬಲಿಸುವ ತಾಲಿಬಾನ್ ಆಡಳಿತ ಮತ್ತು ಷರಿಯಾ ಕಾನೂನಿನಲ್ಲಿ ನಂಬಿಕೆ ಹೊಂದಿರುವ ಕಾರಣದಿಂದ ಅವರು ಹೀಗೆ ಮಾಡಿದರೇ? ಅಥವಾ ಭ್ರಷ್ಟ ಸರ್ಕಾರದ ಬಗ್ಗೆ ಅವರಿಗೆ ನಂಬಿಕೆ ಇರದಿದ್ದುದು ಕಾರಣವೇ?

ತಸ್ಲಿಮಾ ನಸ್ರೀನ್, ಲೇಖಕಿ

ಕಿಡಿನುಡಿ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡದೆ ಅಥವಾ ಅದನ್ನು ಸರಿಯಾಗಿ ಗ್ರಹಿಸದೆ ಟೀಕೆ ಮಾಡುವುದು ಸರಿಯಲ್ಲ. ಶಿಕ್ಷಣ ನೀತಿಯನ್ನು ವಿರೋಧಿಸುವುದು, ದೇಶದ ಅಭಿವೃದ್ಧಿಯನ್ನು ವಿರೋಧಿಸುವುದು ಎರಡೂ ಒಂದೇ.



ಡಾ. ಸಿ.ಎನ್.ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 19-8-1996

• **ಗುಜರಾತ್: ಬಿಜೆಪಿ ಸರ್ಕಾರ ಬಿಕ್ಕಟ್ಟಿನಲ್ಲಿ**

ಗಾಂಧಿನಗರ, ಆ. 18 (ಪಿಟಿಐ)– ಪ್ರಮುಖ ಭಿನ್ನಮತೀಯ ನಾಯಕ ಶಂಕರ್ ಸಿಂಗ್ ವಘೇಲಾ ಅವರಿಗೆ ಬೆಂಬಲ ವ್ಯಕ್ತಪಡಿಸಿರುವ ಪಂಚಾಯತ್ ರಾಜ್ ಸಚಿವ ಆತ್ಮಾರಾಂ ಪಟೇಲ್, ಶಿಕ್ಷಣ ಖಾತೆ ಉಪಸಚಿವ ಮನಸಿಂಗ್ ಚೌಹಾಣ್ ಹಾಗೂ ಈಗಾಗಲೇ ಸಂಪುಟದಿಂದ ಕೈಬಿಡಲಾಗಿದ್ದ ಐವರು ಸಚಿವರು ಸೇರಿದಂತೆ 11 ಶಾಸಕರನ್ನು ಇಂದು ರಾತ್ರಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ.

ಇದರೊಂದಿಗೆ ಗುಜರಾತ್‌ನಲ್ಲಿ 10 ತಿಂಗಳಿನಿಂದ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ.

• **ಸಿಟಿಬಿಟಿ: ತಿದ್ದುಪಡಿಗೆ ಭಾರತದ ಪಟ್ಟು**

ಕ್ವಾಲಾಲಂಪುರ, ಆ. 18 (ಪಿಟಿಐ)– ಉದ್ದೇಶಿತ ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದ (ಸಿಟಿಬಿಟಿ)ವನ್ನು ಎರಡನೇ ಬಾರಿ ತಿದ್ದುಪಡಿ ಮಾಡಲು ಇರುವ ಅಡ್ಡಿ ಏನು ಎನ್ನುವುದು ಅರ್ಥವಾಗುತ್ತಿಲ್ಲ ಎಂದು ಭಾರತ ಹೇಳಿದೆ. ಚೀನಾ ಬಯಸಿದಂತೆ ಈಗಾಗಲೇ ಒಮ್ಮೆ ತಿದ್ದುಪಡಿಯಾಗಿದ್ದು, ಈಗ ಎರಡನೇ ಬಾರಿ ಏಕೆ ತಿದ್ದುಪಡಿ ಮಾಡಬಾರದು ಎಂದು ಸಚಿವ ಐ.ಕೆ. ಗುಜ್ರಾಲ್ ಅವರು ಪ್ರಶ್ನಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 19-8-1971

• **ಭಾರತದ ಜತೆ ಯುದ್ಧದ ಮಾತು ಸಲ್ಲದು– ಯಾಹ್ಯಾಗೆ ರಷ್ಯಾ ಎಚ್ಚರಿಕೆ**

ನವದೆಹಲಿ, ಆ. 18– ಪಾಕಿಸ್ತಾನದ ಆಡಳಿತ ವರ್ಗವು ಪದೇ ಪದೇ ಹಾಕುತ್ತಿರುವ ಸಮರ ಬೆದರಿಕೆಗಳ ಬಗ್ಗೆ ತೀವ್ರ ಅಸಮ್ಮತಿ ವ್ಯಕ್ತಪಡಿಸಿ, ಪಾಕಿಸ್ತಾನ ಸರ್ಕಾರದ ಈ ಧೋರಣೆಯನ್ನು ಖಂಡಿಸುವ ಸಂದೇಶವೊಂದನ್ನು ಸೋವಿಯತ್ ಸರ್ಕಾರವು ಅಧ್ಯಕ್ಷ ಯಾಹ್ಯಾಖಾನರಿಗೆ ಕಳಿಸಿದೆ.

ಭಾರತದ ಜತೆ ಯುದ್ಧ ನಡೆಸುವುದರಿಂದ ಉಂಟಾಗುವ ಅಪಾಯಕಾರಿ ಪರಿಣಾಮಗಳ ಬಗ್ಗೆ ಸೋವಿಯತ್ ಯೂನಿಯನ್, ಪಾಕಿಸ್ತಾನ ಸರ್ಕಾರಕ್ಕೆ ತೀವ್ರ ಎಚ್ಚರಿಕೆ ನೀಡಿದೆ.

• **ಒಂದು ಕೋಟಿ ವೆಚ್ಚದಲ್ಲಿ ಸಂಸ್ಕೃತ– ಇಂಗ್ಲಿಷ್ ನಿಘಂಟು**

ಪುಣೆ, ಆ. 18– ಸಂಸ್ಕೃತ– ಇಂಗ್ಲಿಷ್ ಬೃಹತ್ ನಿಘಂಟನ್ನು ಪ್ರಕಟಿಸುವ ಒಂದು ಕೋಟಿ ರೂ. ವೆಚ್ಚದ ಸ್ಮರಣೀಯ ಯೋಜನೆಯೊಂದನ್ನು ಡೆಕ್ಕನ್ ಕಾಲೇಜಿನ ಸ್ನಾತಕೋತ್ತರ ಮತ್ತು ಸಂಶೋಧನಾ ಸಂಸ್ಥೆ ಕೈಗೊಂಡಿದೆ. ಇದು, ಈವರೆಗೆ ವಿಶ್ವದಲ್ಲಿ ಪ್ರಕಟಿಸಲಾಗಿರುವಎಲ್ಲ ಸಂಸ್ಕೃತ–ಇಂಗ್ಲಿಷ್ ನಿಘಂಟುಗಳಿಗಿಂತ ಹೆಚ್ಚು ಪದ–ಅರ್ಥಗಳನ್ನೊಳಗೊಂಡಿರುತ್ತದೆ.

ವಿಪತ್ತು ಸಂಭವಿಸುವ ಪೂರ್ವದಲ್ಲೇ ಗುರುತಿಸಿ, ನಿಯಂತ್ರಿಸುವುದು ಜಾಣತನದ ನಡೆ

ಸಹನೀಯತೆ ಮುಗಿಸಿದ ಸಹ್ಯಾದ್ರಿ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಗೋವಾದ ದೂದ್‌ಸಾಗರ್ ಹತ್ತಿರ ಚಲಿಸುತ್ತಿರುವ ರೈಲಿನ ಮೇಲೆ ಕುಸಿದ ಗುಡ್ಡ, ತೀರ್ಥಹಳ್ಳಿಯ ಹುಲಿಬಂಡೆ ಬಳಿ ಜಾರಿದ ಗುಡ್ಡ, ಶರಾವತಿ ಕಣಿವೆ, ಉತ್ತರ ಕನ್ನಡ, ಯಲ್ಲಾಪುರ, ಚಿಕ್ಕಮಗಳೂರು ಹೀಗೆ ಪ್ರತೀ ದಿಕ್ಕಿನಲ್ಲೂ ಕುಸಿಯುತ್ತಿರುವ ಗುಡ್ಡಗಳು ಟಿ.ವಿಯಲ್ಲಿ, ದಿನಪತ್ರಿಕೆಗಳಲ್ಲಿ ಸುದ್ದಿಯಾಗಿ ಸತ್ತುಹೋಗುತ್ತವೆ. ಹೀಗೆ ಗುಡ್ಡ ಕುಸಿಯಲು ಕಾರಣವೇನು? ಕೋವಿಡ್ ಕಾರಣಕ್ಕೆ ಶಾಲೆಗೆ ಹೋಗದ ಮಕ್ಕಳು ಉತ್ತರಿಸಬಹುದಾದ ಪ್ರಶ್ನೆಯಿದು. ಅದೇ ಅಂಧಾದುಂದಿ ಅಭಿವೃದ್ಧಿ!

ಬಿದ್ದುಹೋದ ಆರ್ಥಿಕತೆ ಮೇಲೆತ್ತಲು ಪ್ರವಾಸೋದ್ಯಮವೊಂದೇ ಪರಿಹಾರವೆಂಬಂತೆ ಬಿಂಬಿಸಲಾಗುತ್ತಿದೆ. ರಕ್ಕಸಯಂತ್ರ ಬಳಸಿ ಗುಡ್ಡಗಳನ್ನು ಕತ್ತರಿಸಿ ಅಗಲಗೊಳಿಸುವ ರಸ್ತೆಗಳ ಸುರಕ್ಷತೆಯ ಬಗ್ಗೆ ಸದಾ ಅನುಮಾನವೇ ಇದೆ. ವಿಶ್ವವಿಖ್ಯಾತ ಜೋಗವನ್ನು ಅದ್ಭುತವಾದ ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರ ಪಣ ತೊಟ್ಟಿದೆ. ಜಲಪಾತದ ಪಕ್ಕದಲ್ಲೇ ಐಷಾರಾಮಿ ಹೋಟೆಲ್, ಜಲಪಾತವನ್ನು ಹತ್ತಿರದಿಂದ ವೀಕ್ಷಿಸಲು ಕೇಬಲ್ ಕಾರು, ಬೋಟಿಂಗ್, ಸರ್ವಋತು ಜಲಪಾತ, ಪ್ರಖರ ಲೈಟುಗಳು, ಸಾಹಸ ಮನರಂಜನೆಯ ಭಾಗವಾಗಿ ಜಿಪ್ ಲೈನು, ಅಂದರೆ ಜಲಪಾತ ಕಣಿವೆಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ತಂತಿಯಲ್ಲಿ ಜಾರುತ್ತಾ ಸಾಗುವುದು, ಹೀಗೆ ಹತ್ತಾರು ಕೆಲಸಕ್ಕೆ ನೂರಾರು ಕೋಟಿ ರೂಪಾಯಿ ಹರಿದುಬರುತ್ತಿದೆ.

ಕಳೆದ ಮಳೆಗಾಲದಲ್ಲಿ ಬ್ರಿಟಿಷ್ ಬಂಗಲೆಯ ತಳಭಾಗ ಕುಸಿದು ಬಿದ್ದದ್ದು ಆಡಳಿತಕ್ಕೆ ಮರೆತೇ ಹೋಗಿದೆ. ಅತ್ತ ಕೊಲ್ಲೂರಿನಿಂದ ಕೊಡಚಾದ್ರಿಯ ತುತ್ತತುದಿಗೆ ಕೇಬಲ್ ಕಾರು ನಿರ್ಮಿಸುವ ಮಸಲತ್ತು ನಡೆಯುತ್ತಿದೆ. ಇವೆಲ್ಲವನ್ನೂ ಪ್ರವಾಸಿಗರ ಅನುಕೂಲಕ್ಕಾಗಿ ಮಾಡುತ್ತಿದ್ದೇವೆ ಎಂಬ ಧುರೀಣರ ಮಾತು ಕೆಲವರಿಗೆ ಆಪ್ಯಾಯಮಾನವಾಗಿ ಕಾಣಿಸುತ್ತಿದೆ, ಹಲವರಿಗೆ ಕಿವಿಗೆ ಕಾದ ಸೀಸ ಎರೆದಂತಾಗಿದೆ.

ಸಹ್ಯಾದ್ರಿಯ ಧಾರಣ ಸಾಮರ್ಥ್ಯ ಮುಗಿದಿದೆ. ಕುಸಿಯುತ್ತಿರುವ ಗುಡ್ಡಗಳು ಈ ಮಾತನ್ನು ಮತ್ತೆ ಮತ್ತೆ ಸಾಬೀತು ಮಾಡುತ್ತಿವೆ. ಅಂಧಾದುಂದಿ ಅಭಿವೃದ್ಧಿಯಿಂದಾಗುವ ಅನಾಹುತಗಳ ಸರಣಿಗೆ ಯಾರನ್ನು ಹೊಣೆ ಮಾಡುವುದು? ಈ ವಿಚಾರದಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಹೊಣೆ ಹೆಚ್ಚು. 2005ರಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ ಜಾರಿಗೆ ಬಂತು. ಕಾಯ್ದೆಯ ಆಶಯದಂತೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ರಚನೆಯಾಯಿತು. ಖುದ್ದು ಪ್ರಧಾನಿ ಈ ಪ್ರಾಧಿಕಾರದ ರಾಷ್ಟ್ರೀಯ ಅಧ್ಯಕ್ಷರು, ಉಳಿದಂತೆ ಆಯಾ ರಾಜ್ಯದ ಮುಖ್ಯಮಂತ್ರಿಯು ರಾಜ್ಯ ಘಟಕದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಮಾತ್ರ ಈ ಪ್ರಾಧಿಕಾರವು ಕೆಲಸ ಮಾಡುತ್ತದೆ ಎಂಬುದು ಸಾಮಾನ್ಯ ತಿಳಿವಳಿಕೆ. ಆದರೆ ಕಾಯ್ದೆಯಲ್ಲಿ ಅದರ ಜವಾಬ್ದಾರಿಗಳನ್ನು ವಿಸ್ತೃತವಾಗಿ ವಿವರಿಸಲಾಗಿದೆ. ಅಂದರೆ, ಭಾರತದ ಯಾವ ಮೂಲೆಯಲ್ಲಾದರೂ ಯಾವ ತರಹದ ವಿಕೋಪಗಳು ಸಂಭವಿಸಿದರೂ ಅದರ ನಿರ್ವಹಣೆಯ ಜವಾಬ್ದಾರಿಯು ಇದರ ವ್ಯಾಪ್ತಿಗೆ ಬರುತ್ತದೆ. ಸಂಭವನೀಯ ವಿಪತ್ತುಗಳನ್ನು ಗುರುತಿಸುವುದೂ ಅದರ ಹೊಣೆಯಾಗಿದೆ.

2018, 2019 ಹಾಗೂ 2021ರಲ್ಲಿ ಸಹ್ಯಾದ್ರಿಯ ತಪ್ಪಲಿನ ಅನೇಕ ಭಾಗಗಳಲ್ಲಿ ಗುಡ್ಡ ಕುಸಿತ ಸಂಭವಿಸಿ, ಅಪಾರ ಪ್ರಮಾಣದ ನಷ್ಟ, ಸಾವು-ನೋವು ಆದುದಕ್ಕೆ ಕಾರಣ ಅತಿಯಾದ ಅಭಿವೃದ್ಧಿ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ವರದಿ ಹೇಳಿದೆ. ಪಶ್ಚಿಮಘಟ್ಟಗಳಲ್ಲಿ ಆದ ವ್ಯಾಪಕ ಅರಣ್ಯ ನಾಶವೇ ಗುಡ್ಡ ಕುಸಿಯಲು ಕಾರಣವೆಂಬುದು ಸಾಬೀತಾಗಿದೆ. ಅರಣ್ಯ ನಾಶ, ಗಣಿಸ್ಫೋಟ, ದಟ್ಟಾರಣ್ಯದಲ್ಲಿ ರಸ್ತೆ ವಿಸ್ತರಣೆ, ರೈಲು ಮಾರ್ಗ, ವಿದ್ಯುತ್ ಮಾರ್ಗಗಳನ್ನು ನಿರ್ಮಿಸುವುದು, ಗುಡ್ಡಗಳ ಮೇಲೆ ಅನಿಯಂತ್ರಿತ ಮಳಿಗೆ, ಹೋಟೆಲುಗಳನ್ನು ತೆರೆಯುವುದು, ಕೆರೆ ತೋಡುವುದು ಮುಂತಾದ ಚಟುವಟಿಕೆಗಳು ಅಪಾಯಕ್ಕೆ ಅನುವು ಮಾಡಿಕೊಟ್ಟಂತೆ ಎಂಬುದು ಒಟ್ಟೂ ಸಾರಾಂಶ.


ರಾಷ್ಟ್ರ, ರಾಜ್ಯ ಮಟ್ಟದಲ್ಲಿ ಇರುವಂತಹ ವಿಪತ್ತು ನಿರ್ವಹಣಾ ಪ್ರಾಧಿಕಾರವು ಜಿಲ್ಲಾ ಮಟ್ಟದಲ್ಲೂ ಇರುತ್ತದೆ. ಜಿಲ್ಲಾಧಿಕಾರಿಯು ಅಧ್ಯಕ್ಷರಾಗಿರುತ್ತಾರೆ. ಇದರ ಜವಾಬ್ದಾರಿ ಬಹಳ ಮುಖ್ಯ. ಉದಾಹರಣೆಗೆ, ಅತಿಸೂಕ್ಷ್ಮ ಪ್ರದೇಶವಾದ ಜೋಗದಲ್ಲಿ ಕೇಬಲ್ ಕಾರು ಯೋಜನೆ ಜಾರಿಯಾದಲ್ಲಿ, ಅಲ್ಲಿ ಗುಡ್ಡ ಕುಸಿಯುವ ಸಂಭವ ಇದೆ ಎಂಬುದನ್ನು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಗಮನಿಸಬೇಕಾಗುತ್ತದೆ. ಶರಾವತಿ ಕಣಿವೆಯಲ್ಲಿ ಜಿಪ್ ಲೈನ್ ಅಳವಡಿಸುವುದರಿಂದ, ಕಣಿವೆಗೆ ಮಾತ್ರ ಸೀಮಿತವಾಗಿರುವ ದೊಡ್ಡ ಮಂಗಟ್ಟೆ ಹಕ್ಕಿ ಮತ್ತು ಬೇಟೆಗಾರ ಪಕ್ಷಿ ಗಿಡುಗಗಳ ನೆಲೆಗೆ ತೊಂದರೆಯಾಗುತ್ತದೆ ಹಾಗೂ ಆ ಪ್ರದೇಶದಲ್ಲಿ ಮಾತ್ರ ಕಂಡುಬರುವ ಬೇಟೆ ಮತ್ತು ಬಲಿಪ್ರಾಣಿಗಳ ಸುಲಲಿತ ಜೀವನಕ್ಕೆ ತೊಂದರೆಯಾಗುತ್ತದೆ. ಪಶ್ಚಿಮಘಟ್ಟಗಳ ಇನ್ನು ಯಾವುದೇ ಭಾಗದಲ್ಲಿ ಈ ತರಹದ ರಚನೆಯಿರುವ ಕಣಿವೆ ಇಲ್ಲ ಎಂಬ ಅಂಶಗಳನ್ನು ಗಮನಿಸುವುದು ಇದರ ಪ್ರಮುಖ ಜವಾಬ್ದಾರಿಯಾಗಿರುತ್ತದೆ.

ವನ್ಯಜೀವಿಗಳ ಸುರಕ್ಷತೆಯನ್ನು ಕಾಪಾಡುವುದು ಪ್ರಾಧಿಕಾರದ ಪರಮೋಚ್ಚ ಜವಾಬ್ದಾರಿಯಾಗಿದೆ. ವನ್ಯಜೀವಿಗಳ ಆವಾಸಸ್ಥಾನಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ನಾಶ ಮಾಡುವ ಪ್ರಯತ್ನ ನಡೆದಲ್ಲಿ, ಪ್ರಾಧಿಕಾರವು ಮಧ್ಯಪ್ರವೇಶಿಸಿ, ಸಂಭಾವ್ಯ ವಿಪತ್ತು, ವಿಕೋಪಗಳನ್ನು ನಿಯಂತ್ರಿಸುವ ಕೆಲಸ ಮಾಡಬೇಕಾಗುತ್ತದೆ. ಒಂದು ಪ್ರಾಧಿಕಾರ, ಸಮಿತಿ, ಸಂಸ್ಥೆ ಅಥವಾ ಇಲಾಖೆ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಇದ್ದಲ್ಲಿ, ಅದರ ಅದಕ್ಷತೆಯನ್ನು ಬೊಟ್ಟು ಮಾಡಿ ತೋರಿಸಬೇಕಾಗುತ್ತದೆ. ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಪ್ರಾಧಿಕಾರಗಳಾಗಲೀ, ಸ್ಥಳೀಯ ಸಮಿತಿಗಳಾಗಲೀ ಈ ದಿಸೆಯಲ್ಲಿ ತಮ್ಮ ಕ್ಷಮತೆಯನ್ನು ತೋರದೇ ಇರುವುದು ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ. ಅದರಲ್ಲೂ, ಸಹ್ಯಾದ್ರಿ ತಪ್ಪಲಿನಲ್ಲಿ ಆಗುತ್ತಿರುವ ಮಾನವನಿರ್ಮಿತ ಅನಾಹುತಗಳನ್ನು ನೋಡಿಯೂ ನೋಡದಂತೆ ಇರುವುದು ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಮಾಡುವ ಅಪಚಾರವೇ ಆಗಿದೆ.

ತಾಲ್ಲೂಕು ಮಟ್ಟದಲ್ಲಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲೂ ವಿಪತ್ತು ನಿರ್ವಹಣಾ ಸಮಿತಿಗಳು ಕೆಲಸ ಮಾಡುತ್ತವೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೇ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿಪತ್ತು ನಿರ್ವಹಣೆ ಮಾಡುವ ಅಧಿಕಾರಿಯಾಗಿರುತ್ತಾರೆ. ತಮ್ಮ ಪಂಚಾಯಿತಿ ಮಟ್ಟದಲ್ಲಿ ಮುಂದೆ ಸಂಭವಿಸಬಹುದಾದ ವಿಪತ್ತುಗಳ ಪಟ್ಟಿ ಆ ಅಧಿಕಾರಿಯ ಹತ್ತಿರ ಇರಬೇಕಾಗುತ್ತದೆ. 2018ರಲ್ಲಿ ಕೊಡಗಿನಲ್ಲಿ ಸಂಭವಿಸಿದ ಗುಡ್ಡ ಕುಸಿತಕ್ಕೆ ಕಾರಣಗಳೇನು? ಮುಂದೆ ಈ ತರಹದ ಅನಾಹುತಗಳು ಸಂಭವಿಸಬಾರದು ಎಂದರೆ ಏನು ಕ್ರಮ ತೆಗೆದುಕೊಳ್ಳಬಹುದು ಎಂಬಂತಹ ಸ್ಪಷ್ಟ ಪ್ರಜ್ಞೆ ಆಯಾ ಪಂಚಾಯಿತಿಯ ಅಧಿಕಾರಿಗಿರಬೇಕು. ಅದನ್ನು ಆಧರಿಸಿ ಸಿದ್ಧಪಡಿಸಿದ ವರದಿಯನ್ನು ಅವರು ಜಿಲ್ಲಾಡಳಿತಕ್ಕೆ ಸಲ್ಲಿಸಬೇಕು. ಈ ವರದಿಯನ್ನು ಪರಿಶೀಲಿಸಿ ಜಿಲ್ಲಾಡಳಿತವು ರಾಜ್ಯದ ಪ್ರಾಧಿಕಾರಕ್ಕೆ ತನ್ನ ಸ್ಪಷ್ಟವಾದ ವರದಿಯನ್ನು ಕಳುಹಿಸಬೇಕು.

ದೇಶವನ್ನು ಸುಲಲಿತವಾಗಿ ನಡೆಸಲು ನಮ್ಮಲ್ಲಿ ಛಪ್ಪನ್ನಾರು ಇಲಾಖೆಗಳಿವೆ. ದುರದೃಷ್ಟವೆಂದರೆ, ಒಂದೊಂದು ಇಲಾಖೆಗೂ ತಾಳಮೇಳವಿಲ್ಲ. ಹೆದ್ದಾರಿ ಪ್ರಾಧಿಕಾರದ ಕೆಲಸವೆಂದರೆ, ಆದಷ್ಟು ಹೆಚ್ಚು-ಹೆಚ್ಚು ಹೆದ್ದಾರಿಗಳನ್ನು ನಿರ್ಮಿಸುವುದು. ಪ್ರವಾಸೋದ್ಯಮ ಇಲಾಖೆಯ ಕೆಲಸವೆಂದರೆ, ಗುಡ್ಡಗಾಡುಗಳಲ್ಲಿ ಅತಿ ಹೆಚ್ಚು ಹೆಚ್ಚು ಹೋಟೆಲ್ ಮತ್ತು ರೆಸಾರ್ಟ್‌ಗಳನ್ನು ನಿರ್ಮಿಸುವುದು. ರೈಲ್ವೆ ಇಲಾಖೆಯದು ಆದಷ್ಟು ಹೆಚ್ಚು ಸುರಂಗ ಮಾರ್ಗಗಳನ್ನು ನಿರ್ಮಿಸುವುದರತ್ತಲೇ ಚಿತ್ತವಿರುತ್ತದೆ. ನೈಸರ್ಗಿಕ ವಿಕೋಪಗಳನ್ನು ಊಹಿಸಿ, ತಡೆಯುವುದು ತುಸು ಕಷ್ಟಸಾಧ್ಯ. ಆದರೆ ಮಾನವನಿರ್ಮಿತ ವಿಕೋಪಗಳನ್ನು ಮುಂಚಿತವಾಗಿ ಊಹಿಸಬಹುದು. ವಿಪತ್ತು ನಿರ್ವಹಣಾ ಪ್ರಾಧಿಕಾರವು ಈ ದಿಸೆಯಲ್ಲಿ ದಿಟ್ಟ ಹೆಜ್ಜೆಗಳನ್ನು ಇಡಬೇಕಾಗಿದೆ.

ಭೂಮಿಯ ಬಿಸಿಯೇರಿಕೆಯಿಂದಾಗಿಯೇ ನೈಸರ್ಗಿಕ ವಿಕೋಪಗಳು ಹೆಚ್ಚುತ್ತಿವೆ. ಹಸಿರು ಕವಚ ವೇಗವಾಗಿ ಕಡಿಮೆಯಾಗುತ್ತಿರುವುದೇ ಭೂಬಿಸಿಗೆ ಕಾರಣವೆಂದು ವಿಜ್ಞಾನ ಸ್ಪಷ್ಟವಾಗಿ ಹೇಳುತ್ತಿದೆ. ರಾಷ್ಟ್ರೀಯ ಅರಣ್ಯ ನೀತಿಯಲ್ಲಿ, ಇಂತಿಷ್ಟು ಕಾಡು ಇರಬೇಕು ಎಂಬುದನ್ನೂ ಹೇಳಲಾಗಿದೆ. ಚೋದ್ಯವೆಂದರೆ, ಒಂದಕ್ಕೊಂದು ತಾಳೆಯಾಗದ ನೀತಿಗಳ ಅನುಷ್ಠಾನದ ಕೊರತೆಯಿಂದಾಗಿ ಜನಸಾಮಾನ್ಯರ ಜೀವನಸಂಕಷ್ಟದ ಕೂಗು ಅರಣ್ಯರೋದನವಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾಯ್ದೆಯ ಅನುಷ್ಠಾನದ ಕ್ಷಮತೆ ಹೆಚ್ಚಾಗಬೇಕು.



ಚುರುಮುರಿ



ಹೀಗೊಂದು ಪರೀಕ್ಷೆ

• ಆನಂದ

ತೀರಾ ಇತ್ತೀಚಿನ ವಿದ್ಯಮಾನಗಳ ಬಗ್ಗೆ ನಿಮ್ಮ ಸಾಮಾನ್ಯ ಜ್ಞಾನ ಅಥವಾ ಜನರಲ್ ನಾಲೆಜ್ ಎಷ್ಟಿದೆ? ಬನ್ನಿ, ಪರೀಕ್ಷಿಸಿಕೊಳ್ಳಿ.

ಅ. ನೆಹರೂ ಏನು ಸೇದುತ್ತಿದ್ದರು ಎಂದು ಸಿ.ಟಿ.ರವಿ ಹೇಳಿದ್ದರು?

1. ಸಿಗರೇಟ್ 2. ಬೀಡಿ 3. ಹುಕ್ಕಾ

ಆ. ವಾಜಪೇಯಿ ಏನು ಕುಡಿಯುತ್ತಿದ್ದರು ಎಂದು ಪ್ರಿಯಾಂಕ್ ಖರ್ಗೆ ಹೇಳುತ್ತಾರೆ?

1. ರಂ 2. ಸ್ಕಾಚ್ 3. ವಿಸ್ಕಿ

ಇ. ಮೋದಿ ಹೆಸರು ಯಾವುದಕ್ಕೆ ಇಡಬೇಕು ಎಂದು ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್ ಸೂಚಿಸಿದ್ದಾರೆ?

1. ಶೌಚಾಲಯ 2. ಸ್ನಾನಗೃಹ 3. ವಿಶ್ರಾಂತಿ ಭವನ

ಈ. ಜೊಲ್ಲೆ ಯಾವ ಹಗರಣದಲ್ಲಿ ಆರೋಪಿಯಾಗಿದ್ದಾರೆ?

1. ಕೋಳಿ 2. ಮೊಟ್ಟೆ 3. ಇವೆರಡೂ ಅಲ್ಲ

ಉ. ಸಿದ್ದರಾಮಯ್ಯನವರು ಯಾರ ಬಗ್ಗೆ ಅವಹೇಳನಕರವಾಗಿ ಮಾತನಾಡಿರುವ ಸಿ.ಡಿ ಬಿಡುಗಡೆ ಮಾಡಲು ರವಿ ತಯಾರಿದ್ದಾರೆ?

1. ಇಂದಿರಾ 2. ಪ್ರಿಯಾಂಕಾ 3. ಸೋನಿಯಾ

ಊ. ಬಿ.ಕೆ.ಹರಿಪ್ರಸಾದ್ ಅವರ ಪ್ರಕಾರ 'ಹರಕುಬಾಯಿ ದಾಸ' ಯಾರು?

1. ಈಶ್ವರಪ್ಪ 2. ರವಿ 3. ವಿಶ್ವನಾಥ್

ಎ. ನನ್ನ ತಂಟೆಗೆ ಬಂದರೆ ಯಾವ ಕಾಯಿಲೆ ಬರುತ್ತದೆ ಎಂದು ಈಶ್ವರಪ್ಪ ಹೇಳಿದ್ದಾರೆ?

1. ಬಿ.ಪಿ. 2. ಶುಗರ್ 3. ಎರಡೂ

ಏ. ಇವರಲ್ಲಿ ಯಾರ ಕಾಲ ದೂಳಿಗೂ ಬಿಜೆಪಿ ನಾಯಕರು ಸಮವಲ್ಲ ಎಂದು ಒಬ್ಬ ಕಾಂಗ್ರೆಸ್ ನಾಯಕರು ಹೇಳುತ್ತಾರೆ?

1. ರಾಹುಲ್ 2. ಸೋನಿಯಾ 3. ಇಂದಿರಾ

ಐ. ಬಡವರ ಹೊಟ್ಟೆ ತುಂಬಿಸುವಾಗ ಕಟೀಲರಿಗೆ ಯಾರು ಕಾಣುತ್ತಾರೆ?

1. ಅನ್ನಪೂರ್ಣೇಶ್ವರಿ 2. ಇಂದಿರಾ 3. ಪ್ರಿಯಾಂಕಾ

ಒ. 'ಛೀ! ಥೂ!' ಎಂದು ಏಕವಚನದಲ್ಲಿ ಬೈದಾಡಿಕೊಂಡ ಈ ಇಬ್ಬರು ಯಾರು?

1. ಶಾಸಕ– ಶಾಸಕ 2. ಶಾಸಕ– ಸಂಸದ 3. ಸಂಸದ– ಸಂಸದ

ಸರಿಯಾದ ಉತ್ತರಗಳನ್ನು ತಿಳಿದುಕೊಳ್ಳಲೇಬೇಕು ಎಂದಿದ್ದರೆ ದಿನಪತ್ರಿಕೆಯ ಇತ್ತೀಚಿನ ಸಂಚಿಕೆಗಳನ್ನು ನೋಡಿ.

ಸಂಗತ

ಜೀವಶಾಸ್ತ್ರದ ಮಹತ್ವ ಅರಿಯೋಣ

ವಿವಿಧ ಜ್ಞಾನಶಾಖೆಗಳಿಗೆ ತೆರೆದುಕೊಳ್ಳುವ ಮುಕ್ತ ಅವಕಾಶಗಳನ್ನು ಮಕ್ಕಳಿಗೆ ಇಲ್ಲವಾಗಿಸುವುದೇಕೆ?

• ಎಚ್.ಕೆ.ಶರತ್

ಪರಿಚಿತರೊಬ್ಬರು ಇತ್ತೀಚೆಗೆ ಕರೆ ಮಾಡಿ, ಎಸ್‌ಎಸ್‌ಎಲ್‌ಸಿ ಮುಗಿಸಿರುವ ತಮ್ಮ ಮಗ ಪಿಯುವಿನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್ ವಿಷಯಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಂಡರೆ ಉತ್ತಮ ಎಂಬ ಗೊಂದಲದಲ್ಲಿದ್ದಾನೆ, ಈ ಎರಡರಲ್ಲಿ ಯಾವುದನ್ನು ಓದುವುದು ಒಳ್ಳೆಯದು ಅಂತ ವಿಚಾರಿಸಿದರು.

ಪಿಯುವಿನಲ್ಲಿ ಈ ಎರಡು ವಿಷಯಗಳ ಬದಲು ಬಯಾಲಜಿ (ಜೀವಶಾಸ್ತ್ರ) ಆರಿಸಿಕೊಂಡಿದ್ದ ನಾನು, ಇವೆರಡಕ್ಕಿಂತ ಬಯಾಲಜಿ ಓದುವುದೇ ಉತ್ತಮವೆಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಆನಂತರ ಕುತೂಹಲದಿಂದ ಪಿಯು ಕಂಪ್ಯೂಟರ್ ಸೈನ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್ ಪಠ್ಯದತ್ತ ಕಣ್ಣುಹಾಯಿಸಿದೆ. ಪಿಯು ನಂತರ ಪದವಿ ವ್ಯಾಸಂಗದ ವೇಳೆ ವಿಸ್ತೃತವಾಗಿ ಅಧ್ಯಯನ ಮಾಡಲು ಅವಕಾಶವಿರುವ ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್‌ನಂತಹ ವಿಷಯಗಳನ್ನು ಪಿಯುವಿನಲ್ಲೇ ಅದೂ ಜೀವಶಾಸ್ತ್ರದಂತಹ ಅತಿ ಮಹತ್ವದ ವಿಷಯ ಬದಿಗಿರಿಸಿ ಓದಲು ವಿದ್ಯಾರ್ಥಿಗಳು ಏಕೆ ಮುಂದಾಗುತ್ತಿದ್ದಾರೆ ಎಂಬ ಪ್ರಶ್ನೆಯೂ ಕಾಡತೊಡಗಿತು.

ವಿದ್ಯಾರ್ಥಿಗಳ ಆಯ್ಕೆಯನ್ನು ಪ್ರಭಾವಿಸುತ್ತಿರುವುದು ಆಯಾ ವಿಷಯದೆಡೆಗೆ ಅವರಿಗಿರುವ ಆಸಕ್ತಿಯೋ ಅಥವಾ ಮಾರುಕಟ್ಟೆಯಲ್ಲಿ ಯಾವ ವಿಷಯಕ್ಕೆ ಹೆಚ್ಚು ಮನ್ನಣೆ ಇದೆ ಎನ್ನುವ ವ್ಯಾವಹಾರಿಕ ಕಾಳಜಿಯೋ ಎನ್ನುವುದನ್ನು ಪರಿಶೀಲಿಸುವ ಅಗತ್ಯವಿದೆ. ಒಂದು ವೇಳೆ ಪಿಯುವಿನಲ್ಲಿ ವಿಜ್ಞಾನ ಆರಿಸಿಕೊಳ್ಳುವ ವಿದ್ಯಾರ್ಥಿ ಪಿಸಿಎಂಬಿ (ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ) ಕಾಂಬಿನೇಷನ್ ಬದಲಿಗೆ ಪಿಸಿಎಂಸಿ (ಸಿ- ಗಣಕ ವಿಜ್ಞಾನ), ಪಿಸಿಎಂಇ (ಇ- ಎಲೆಕ್ಟ್ರಾನಿಕ್ಸ್) ಮತ್ತು ಪಿಸಿಎಂಎಸ್ (ಎಸ್- ಸ್ಟ್ಯಾಟಿಸ್ಟಿಕ್ಸ್) ಈ ಮೂರರಲ್ಲಿ ಒಂದನ್ನು ಆರಿಸಿಕೊಂಡರೆ, ಮುಂದೆ ಶೈಕ್ಷಣಿಕ ಪಠ್ಯದ ಭಾಗವಾಗಿ ಜೀವಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಓದುವ ಸಾಧ್ಯತೆ ತೀರಾ ಕಡಿಮೆ. ಆದರೆ ಪಿಯುವಿನಲ್ಲಿ ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್‌ನಂತಹ ವಿಷಯಗಳನ್ನು ಓದದಿದ್ದರೂ ಮುಂದೆ ಪದವಿಯಲ್ಲಿ ಈ ವಿಷಯಗಳನ್ನು ವಿಸ್ತೃತವಾಗಿ ಓದಲು ಯಾವುದೇ ಅಡೆತಡೆಗಳಿಲ್ಲ.

ನಮ್ಮ ಪರಿಸರ ಮತ್ತು ನಮ್ಮದೇ ದೇಹದ ಕುರಿತಾದ ತಿಳಿವಳಿಕೆ ಹೆಚ್ಚಿಸುವ ಜೀವಶಾಸ್ತ್ರ ವಿಷಯದ ಬದಲಿಗೆ ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್‌ನಂತಹ ವಿಷಯಗಳತ್ತ ಏಕೆ ವಿದ್ಯಾರ್ಥಿಗಳು ಮತ್ತು ಪೋಷಕರು ಆಸಕ್ತಿ ತೋರುತ್ತಿದ್ದಾರೆ ಎಂಬುದನ್ನು ಅರಿಯಲು ಹೆಚ್ಚೇನೂ ತಿಣುಕಾಡಬೇಕಿಲ್ಲ. ಕೃತಕ ಬುದ್ಧಿಮತ್ತೆ, ಮಷೀನ್ ಲರ್ನಿಂಗ್ ಮತ್ತು ಡೇಟಾ ಅನಾಲಿಸಿಸ್‌ನಂತಹ ತಂತ್ರಜ್ಞಾನ ಶಾಖೆಗಳು ಹೆಚ್ಚು ಪ್ರವರ್ಧಮಾನಕ್ಕೆ ಬರುತ್ತಿರುವುದರಿಂದ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗಾವಕಾಶಗಳು ದೊರೆಯಲಿವೆ, ಕಂಪ್ಯೂಟರ್ ಸೈನ್ಸ್ ಓದಿದರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎನ್ನುವ ಭಾವನೆ ಅವರಲ್ಲಿ ಬೇರೂರತೊಡಗಿದೆ. ಹೀಗಾಗಿ, ಆದಷ್ಟೂ ಬೇಗ ಈ ವಿಷಯಗಳನ್ನು ಮಕ್ಕಳು ಕಲಿತರೆ ಅವರ ಭವಿಷ್ಯ ಉಜ್ವಲಗೊಳ್ಳಲಿದೆ ಎನ್ನುವ ನಿರೀಕ್ಷೆ ಅವರದ್ದು. ಪೋಷಕರ ಈ ಆತುರವನ್ನೇ ಬಂಡವಾಳವನ್ನಾಗಿಸಿಕೊಂಡ ಕೆಲ ಸಂಸ್ಥೆಗಳು, ಪುಟ್ಟ ಮಕ್ಕಳಿಗೂ ಕೋಡಿಂಗ್ ಕಲಿಸುವ ಉತ್ಸಾಹ ತೋರುತ್ತಿರುವುದೂ ಇದೆ.

ತನ್ನ ಸುತ್ತಲಿನ ಜಗತ್ತನ್ನು ಅರಿಯಲು ಅನುವು ಮಾಡಿಕೊಡುವ ವಿವಿಧ ಜ್ಞಾನಶಾಖೆಗಳಿಗೆ ತೆರೆದುಕೊಳ್ಳುವ ಮುಕ್ತ ಅವಕಾಶಗಳನ್ನು ಮಕ್ಕಳಿಗೆ ಇಲ್ಲವಾಗಿಸುತ್ತ, ಅವರನ್ನು ಸಾಫ್ಟ್‌ವೇರ್ ಎಂಜಿನಿಯರುಗಳನ್ನಾಗಿಸುವ ಆತುರ ತೋರುವುದರಿಂದ ಸಾಧಿಸುವುದು ಏನೂ ಇಲ್ಲವೆಂಬುದನ್ನು ಅರಿಯುವ ಸಂಯಮವೂ ಕೆಲ ಪೋಷಕರಲ್ಲಿ ಇಲ್ಲವಾಗಿದೆ.



ನಾನಾ ಕಾರಣಗಳಿಂದಾಗಿ ಉತ್ಪಾದನಾ ವಲಯವೂ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಿರೀಕ್ಷಿತ ಪ್ರಮಾಣದ ಉದ್ಯೋಗ ಸೃಷ್ಟಿ ಸಾಧ್ಯವಾಗದಿರುವ ಕಾರಣಕ್ಕೆ, ಬಹುತೇಕರ ಚಿತ್ತ ಸಹಜವಾಗಿಯೇ ಸಾಫ್ಟ್‌ವೇರ್ ಕ್ಷೇತ್ರದತ್ತ ನೆಟ್ಟಿದೆ. ಹೀಗಾಗಿಯೇ ಪದವಿ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಇನ್‌ಫರ್ಮೇಷನ್ ಸೈನ್ಸ್ ವಿಭಾಗಗಳಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಆದರೆ ಈ ವಿದ್ಯಾರ್ಥಿಗಳು ಪದವಿ ಪೂರೈಸಿ ಕೆಲಸ ಅರಸಲು ಹೊರಡುವ ಹೊತ್ತಿಗೆ ಸಾಫ್ಟ್‌ವೇರ್ ಕ್ಷೇತ್ರ ಎಷ್ಟು ಮಂದಿಗೆ ಉದ್ಯೋಗ ಒದಗಿಸಲಿದೆ ಮತ್ತು ಉದ್ಯೋಗದಾತರ ನಿರೀಕ್ಷೆಗಳು ಏನಿರಲಿವೆ ಎಂಬುದನ್ನು ಈಗಲೇ ಊಹಿಸುವುದು ಕಷ್ಟ.

ಸಾಫ್ಟ್‌ವೇರ್ ಎಂಜಿನಿಯರ್ ಆಗಲು ಪದವಿ ಹಂತದಲ್ಲಿ ಅದಕ್ಕೆ ಸಂಬಂಧಿಸಿದ ವಿಭಾಗ ಆರಿಸಿಕೊಂಡರೆ ಸಾಕು. ಎಂಜಿನಿಯರಿಂಗ್ ಪದವಿಯಲ್ಲಿ ಬೇರೆ ವಿಷಯಗಳನ್ನು ಓದಿ ಆನಂತರ ಅಲ್ಪಾವಧಿಯ ಕೋರ್ಸ್‌ಗಳನ್ನು ಮಾಡಿಕೊಂಡು ಸಾಫ್ಟ್‌ವೇರ್ ಕ್ಷೇತ್ರಕ್ಕೆ ಧುಮುಕುವವರೂ ಇದ್ದಾರೆ. ಹೀಗಾಗಿ ಪ್ರಾಣಿ-ಪಕ್ಷಿ, ಸಸ್ಯಸಂಕುಲದ ಕುರಿತು ತಿಳಿವಳಿಕೆ ಮೂಡಿಸುತ್ತ, ತಮ್ಮದೇ ದೇಹದಲ್ಲಾಗುವ ಸ್ಥಿತ್ಯಂತರಗಳಿಗೆ ಕಾರಣವಾಗುವ ಅಂಶಗಳನ್ನು ವಿವರಿಸುತ್ತ, ತಕ್ಕಮಟ್ಟಿಗೆ ಲೈಂಗಿಕ ಶಿಕ್ಷಣವನ್ನೂ ನೀಡುವ ಜೀವಶಾಸ್ತ್ರದ ವಿಷಯವನ್ನು ಆದ್ಯತೆಯಾಗಿ ಪರಿಗಣಿಸುವಂತೆ ಮಕ್ಕಳ ಮನವೊಲಿಸುವ ಪ್ರಯತ್ನವನ್ನು ಪೋಷಕರು ಮಾಡಬೇಕಲ್ಲವೇ?

ಹೆಚ್ಚು ಸ್ಕೋಪ್ ಇದೆ ಎನ್ನುವ ನಿಲುವು ತಾಳಿ, ತನ್ನದೇ ದೇಹದ ಬದಲಿಗೆ ನಿರ್ಜೀವ ವಸ್ತುವೊಂದರ ದೇಹದ ಬಿಡಿಭಾಗಗಳ ಅಧ್ಯಯನಕ್ಕೆ ಮಕ್ಕಳನ್ನು ಪ್ರೇರೇಪಿಸುವುದು ಸೂಕ್ತವೇ ಎಂದು ಅವಲೋಕಿಸಬೇಕಿದೆ.

ವಾಚಕರ ವಾಣಿ

ಬೆತ್ತಲೆ ಸ್ಥಿತಿ ಅಪಹಾಸ್ಯ ಮಾಡುವ ಕಠೋರ ವ್ಯಂಗ್ಯ

ಆಗಸ್ಟ್ ಹದಿನೈದರಂದು ನನ್ನ ವಾಟ್ಸ್‌ಆ್ಯಪ್ ಖಾತೆಗೆ ಸ್ನೇಹಿತರು ಒಂದು ಫೋಟೊ ಕಳಿಸಿದ್ದರು. ಹರಿದ ಬಟ್ಟೆಯ ಅರೆ ಬೆತ್ತಲೆಯ ಎಂಟು– ಹತ್ತು ಬಡ ಹುಡುಗರು ಭಾರತೀಯ ಧ್ವಜದ ಸುತ್ತ ನಿಂತು ಧ್ವಜವಂದನೆ ಸಲ್ಲಿಸುವ ಚಿತ್ರ ಅದು. ಆ ಹುಡುಗರಲ್ಲಿ ಐದಾರು ವರ್ಷ ವಯಸ್ಸಿನ ಹುಡುಗನೊಬ್ಬ ಸಂಪೂರ್ಣ ಬೆತ್ತಲೆ ಇದ್ದ. ಆ ಫೋಟೊ ನೋಡಿ ನನಗೆ ಕವಿ ಸಿದ್ಧಲಿಂಗಯ್ಯ ಅವರ 'ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ' ಕವಿತೆ ನೆನಪಿಗೆ ಬಂದು, ಈ ಸಾಲುಗಳೊಡನೆ ಚಿತ್ರವನ್ನು ಕೆಲವು ಗೆಳೆಯರಿಗೆ ಕಳುಹಿಸಿದೆ.

ಆ ಚಿತ್ರ ಫೇಸ್‌ಬುಕ್‌ನಲ್ಲಿಯೂ ಹರಿದಾಡತೊಡಗಿದಾಗ ಅಲ್ಲಿಯೂ ಕೆಲವು ಗೆಳೆಯರಿಗೆ ಕಳಿಸತೊಡಗಿದೆ. ಕೂಡಲೇ ಫೇಸ್‌ಬುಕ್ ಕಡೆಯಿಂದ ನನಗೆ ನೋಟಿಸ್ ಬಂತು.

'You can't post or comment for seven days. This is because eight of your previous posts didn't follow our community standards on nudity or sexual activity'.

ಈ ತೀರ್ಮಾನವನ್ನು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ತೆಗೆದುಕೊಂಡಿರಬಹುದು. ಆದರೆ ಈ ತಂತ್ರಜ್ಞಾನಕ್ಕೆ ಎಲ್ಲ ನಿಯಮಾವಳಿಗಳನ್ನು ತುಂಬಿಸಿದವರು ಮನುಷ್ಯರು ತಾನೇ? ಇದರ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗದರ್ಶನ ಇದೆ ತಾನೇ? ಈ ಫೋಟೊ ಯಾವ ರೀತಿ ಲೈಂಗಿಕತೆಯನ್ನು ಧ್ವನಿಸುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಬಡ ಮಕ್ಕಳ ಅರೆ ಬೆತ್ತಲೆ, ಬೆತ್ತಲೆ ಸ್ಥಿತಿಯನ್ನು ಅಪಹಾಸ್ಯ ಮಾಡುವ ಕಠೋರ ವ್ಯಂಗ್ಯವೇ ಈ ಸೂಚನೆಯಲ್ಲಿ ಕಾಣುತ್ತಿರುವ ಸತ್ಯ.

ಪ್ರೊ. ಕೆ.ಮರುಳಸಿದ್ದಪ್ಪ, ಬೆಂಗಳೂರು

ಬದುಕಲು ಹೋರಾಟ: ದುಬಾರಿ ಪ್ರಾತ್ಯಕ್ಷಿಕೆ!

'ರಾಜಕೀಯ ಕ್ರಾಂತಿ' ಹಿನ್ನೆಲೆಯಲ್ಲಿ ಅಫ್ಗಾನಿಸ್ತಾನದ ಪ್ರಜೆಗಳು ಕಾಬೂಲ್ ವಿಮಾನ ನಿಲ್ದಾಣದಲ್ಲಿ ಎದ್ದರೂ ಸರಿ, ಬಿದ್ದರೂ ಸರಿಯೆಂದು ದೌಡಾಯಿಸಿ ವಿಮಾನವೇರಲು ಮುಂದಾದ ಸುದ್ದಿ, ಚಿತ್ರ ಎಂತಹವರಿಗೂ ಎದೆ ನಡುಗಿಸುವಂಥದ್ದು. ವಿಮಾನದ ರೆಕ್ಕೆ ಮೇಲೆ ಅಥವಾ ಟೈರಿಗೆ ಲಗತ್ತಾಗಿ ಪ್ರಯಾಣಿಸುವುದು ಅಸಾಧ್ಯ ಎನ್ನುವುದೂ ದೇಶ ತೊರೆಯುವ ತರಾತುರಿ, ಆತಂಕಕ್ಕೆ ತಿಳಿಯಲಿಲ್ಲ. ವಿಮಾನವು ಬಸ್ಸು, ರೈಲಿಗಿಂತ ಬಹು ಭಿನ್ನ. ಗಾಳಿಯ ಧಾವಂತವೇ ವಿಮಾನದ ರಹಸ್ಯ. ವಿಮಾನ ಸಾಧಾರಣವಾಗಿ 30,000 ಅಡಿ ಎತ್ತರದಲ್ಲಿ, ತಾಸಿಗೆ 700 ಕಿ.ಮೀ. ವೇಗದಲ್ಲಿ ಹಾರುತ್ತದೆ. ಎತ್ತರಕ್ಕೆ ಹೋದಂತೆ ಕಡಿಮೆ ಆಮ್ಲಜನಕ. 10,000 ಅಡಿ ಎತ್ತರದಲ್ಲಿ ವಿಮಾನದ ಹೊರಗೆ ಸೊನ್ನೆಗಿಂತ 7 ಡಿಗ್ರಿ ಸೆ. ಕಡಿಮೆ ತಾಪಮಾನ, 30,000 ಅಡಿ ಎತ್ತರದಲ್ಲಿ ಸೊನ್ನೆಗಿಂತ 72 ಡಿಗ್ರಿ ಸೆ. ಕಡಿಮೆ ತಾಪಮಾನ! ಊಹೆಗೂ ನಿಲುಕದ ಚಳಿ. ಪ್ರಯಾಣಿಕ (?) ಆಗಲೇ ಪ್ರಜ್ಞಾಹೀನನಾಗಿರುತ್ತಾನೆ. ಗಾಳಿಯ ರಭಸ ಉಸಿರಾಟ ನಿಲ್ಲಿಸಿರುತ್ತದೆ.

'ಪ್ರತಿಯೊಂದು ಜೀವಿಯೂ ಸಾವು ಗೆಲ್ಲಲು ಶತಾಯ ಗತಾಯ ಹೋರಾಡುತ್ತದೆ, ಬದುಕಲು ಬಯಸುತ್ತದೆ' ಎಂಬ ಡಾರ್ವಿನ್ನನ ವಿಕಾಸವಾದದ ಸಮರ್ಥನೆಗೆ ಮೂರು ಮಂದಿ ಜೀವ ತೆತ್ತರು. ಎಷ್ಟೊಂದು ದುಬಾರಿಯಾದ ಪ್ರಾತ್ಯಕ್ಷಿಕೆ?

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಅಯ್ಯೋ... ಅಫ್ಗಾನಿಸ್ತಾನ

ಬಂದೂಕಿನ ನಳಿಕೆಗೆ
ಗುಬ್ಬಿ ಗೂಡು ಕಟ್ಟುವುದಿಲ್ಲ
ಮನುಜ ಮನುಜರ ನಡುವಿನ
ಗೋಡೆ ಕೆಡಹುವುದಿಲ್ಲ
ಎದೆಯ ಮರಳುಗಾಡಲಿ
ಗುಲಾಬಿ ಅರಳುವುದಿಲ್ಲ
ಹುನ್ನಾರದ ಹಿಂದಿನ ಕರಾಳ
ಕೈಗಳು ಎಂದಿಗೂ
ಕಾಣುವುದಿಲ್ಲ!

ಸಂತೆಬೆನ್ನೂರು ಫೈಜ್ನಟ್ರಾಜ್
ಸಂತೆಬೆನ್ನೂರು

ಅದು ಕೇವಲ ಆಫ್ಗನ್ನರ ಹಣೆಬರಹವಲ್ಲ...

ವಾಸಿಸಲು ಯೋಗ್ಯ, ಆರೋಗ್ಯಕರ ವಿಶ್ವ ಸೃಷ್ಟಿಸುವಲ್ಲಿ ಶಾಂತಿ, ಸಮಾನತೆ, ಘನತೆ ಮುಖ್ಯ ಎಂದು ಹೇಳುವ ವಿಶ್ವಸಂಸ್ಥೆಯು ಅಫ್ಗಾನಿಸ್ತಾನದ ವಿಷಯದಲ್ಲಿ ಈವರೆಗೆ ಯಾವುದೇ ಸ್ಪಷ್ಟ ಹಾಗೂ ದೃಢವಾದ ನಿಲುವು ತಾಳದಿರುವುದು ಈ ದಶಕದ ದುರಂತವೇ ಸರಿ. ಮೂಲಭೂತವಾದದ ಮೇಲೆ ನಿಂತಿರುವ ತಾಲಿಬಾನ್ ಎಂಬ ಸಂಘಟನೆಗೆ ಪರೋಕ್ಷವಾಗಿ ಬೆಂಬಲಕ್ಕೆ ನಿಂತಿರುವ ಕೆಲವು ರಾಷ್ಟ್ರಗಳು ಈ ಮೂಲಭೂತವಾದದಿಂದ ಭವಿಷ್ಯದಲ್ಲಿ ಸಂಭವಿಸುವ ಆಗುಹೋಗುಗಳಿಗೆ ಪ್ರತ್ಯಕ್ಷವಾಗಿ ಕಾರಣವಾಗುತ್ತವೆ ಎಂಬುದನ್ನು ಮರೆಯುವಂತಿಲ್ಲ. ಏಕೆಂದರೆ ಮೂಲಭೂತವಾದ ಎನ್ನುವುದು ಯಾವುದೇ ಧರ್ಮದ್ದಾಗಿರಲಿ ಅದರಿಂದ ಮನುಕುಲಕ್ಕೆ ಕಂಟಕ ಒದಗುವುದಂತೂ ಕಟ್ಟಿಟ್ಟ ಬುತ್ತಿ.

ನಾವೇನೋ ದೊಡ್ಡದನ್ನು ಸಾಧಿಸಿ ತೋರಿಸುತ್ತೇವೆ ಎಂಬಂತೆ ಅಫ್ಗಾನಿಸ್ತಾನಕ್ಕೆ ಕಾಲಿಟ್ಟ ಅಮೆರಿಕಕ್ಕೆ, ಉಗ್ರ ಬಿನ್ ಲಾಡೆನ್‌ನನ್ನು ಕೊಂದದ್ದು ಬಿಟ್ಟರೆ ಬೇರೆ ಇನ್ನಾವುದೇ ಶಾಶ್ವತ ಪರಿಹಾರ ಕಂಡುಕೊಳ್ಳುವುದಕ್ಕೆ ಸಾಧ್ಯವೇ ಆಗಿಲ್ಲ. ಆದರೆ ಅಫ್ಗಾನಿಸ್ತಾನ ಎನ್ನುವುದು ರಕ್ತಬೀಜಾಸುರರ ನೆಲ. ಅಲ್ಲಿ ಒಬ್ಬ ಲಾಡೆನ್ ಸತ್ತರೆ, ಒಬ್ಬ ಮುಲ್ಲಾ ಉಮರ್ ಸಾವಿಗೀಡಾದರೆ ಅಂತಹ ಸಾವಿರಾರು ಮಂದಿ ಹುಟ್ಟಿಕೊಳ್ಳುತ್ತಾರೆ. ಈ ದುಷ್ಟರ ತಲೆಯನ್ನು ಬುಡಸಮೇತ ಕಿತ್ತೊಗೆಯುವುದಕ್ಕೆ ಕ್ರಮ ಕೈಗೊಳ್ಳಬೇಕು. ಅಫ್ಗಾನಿಸ್ತಾನದ ಜನರನ್ನು ರಕ್ಷಿಸಬೇಕಾದ ಹೊಣೆಗಾರಿಕೆ ಭಾರತ ಸಹಿತ ಜಗತ್ತಿನ ಎಲ್ಲ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳ ಮೇಲಿದೆ. ಆದರೆ ಈ ಅಟ್ಟಹಾಸ ಕೇವಲ ಆಫ್ಗನ್ನರಿಗೆ ಸಂಬಂಧಿಸಿದ್ದು, ಅದು ಅವರ ಹಣೆಬರಹ, ಏನಾದರೂ ಆಗಲಿ ನಮಗೇನು ಎನ್ನುವಂತಹ ಉಡಾಫೆ ಮನೋಭಾವವನ್ನು ನಾವು ಇವತ್ತು ಹೊಂದಿದ್ದೇ ಆದಲ್ಲಿ, ನಾಳೆ ತಾಲಿಬಾನ್ ಎಂಬ ದುಷ್ಟ ಸಂಘಟನೆ ಇತರ ಪ್ರದೇಶಗಳಲ್ಲೂ ತನ್ನ ಕಬಂಧಬಾಹು ಚಾಚಲು ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

ಸಲೀಂ ಆರ್. ತಾಳಿಕೋಟಿ, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸೂಕ್ಷ್ಮ ಪ್ರದೇಶದಲ್ಲಿ 1,400 ಕಿರು ಅಣೆಕಟ್ಟೆ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರದಿಂದ ಪ್ರಸ್ತಾವ

ಪಶ್ಚಿಮ ಘಟ್ಟಕ್ಕೆ ಅಣೆಕಟ್ಟೆ ಏಟು?

ಪಶ್ಚಿಮ ಘಟ್ಟದಲ್ಲಿ 1,400 ಕಿರು ಅಣೆಕಟ್ಟೆಗಳನ್ನು (ಚೆಕ್ ಡ್ಯಾಂ) ನಿರ್ಮಿಸಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. 1,400 ಕಿರು ಅಣೆಕಟ್ಟೆಗಳನ್ನು ನಿರ್ಮಿಸುವ ಸಂಬಂಧ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಆರ್ಥಿಕ ನೆರವನ್ನು ಕೇಳಿದೆ. ಈ ಸಲುವಾಗಿ ರಾಜ್ಯದ ಕಿರು ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಕೇಂದ್ರ ಜಲಸಂಪನ್ಮೂಲ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ಭೇಟಿ ಮಾಡಿ, ನೆರವು ಕೋರಿದ್ದಾರೆ. ಸಚಿವ ಮಾಧುಸ್ವಾಮಿ ಅವರೇ ಬಹಿರಂಗಪಡಿಸಿದ ಈ ಯೋಜನೆಗೆ ರಾಜ್ಯದ ಪರಿಸರ ಸಂರಕ್ಷಣಾ ಕಾರ್ಯಕರ್ತರಿಂದ ವಿರೋಧ ವ್ಯಕ್ತವಾಗಿದೆ. ಸಾಮಾಜಿಕ ಜಾಲತಾಣಗಳಲ್ಲೂ ಈ ಯೋಜನೆಗೆ ಭಾರಿ ಆಕ್ಷೇಪ ವ್ಯಕ್ತವಾಗಿದೆ.

ಈ ಯೋಜನೆಯೂ ಸೇರಿ, ರಾಷ್ಟ್ರೀಯ ಜಲ ಮಿಷನ್ ಯೋಜನೆ ಅಡಿ ರಾಜ್ಯಕ್ಕೆ ₹3,500 ಕೋಟಿ ನೆರವು ನೀಡಬೇಕು ಎಂದು ಮಾಧುಸ್ವಾಮಿ ಅವರು ಕೇಂದ್ರ ಜಲ ಸಂಪನ್ಮೂಲ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ. 'ಈ ಪ್ರಸ್ತಾವಕ್ಕೆ ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದೂ ಮಾಧುಸ್ವಾಮಿ ಹೇಳಿದ್ದಾರೆ.

'ಪಶ್ಚಿಮ ಘಟ್ಟಗಳಲ್ಲಿನ ನದಿಗಳ ನೀರು ವ್ಯರ್ಥವಾಗಿ ಹರಿದು, ಸಮುದ್ರ ಸೇರುತ್ತದೆ. ಆ ನೀರನ್ನು ಕುಡಿಯುವುದಕ್ಕಾಗಿ ಸಂಗ್ರಹಿಸಲು ಉದ್ದೇಶಿಸಲಾಗಿದೆ. ಈ ಕಾರಣದಿಂದ, ಪಶ್ಚಿಮ ಘಟ್ಟದಲ್ಲಿ 1,400 ಕಿರು ಅಣೆಕಟ್ಟೆಗಳನ್ನು ನಿರ್ಮಿಸಲಾಗುವುದು' ಎಂದು ಮಾಧುಸ್ವಾಮಿ ಮಾಹಿತಿ ನೀಡಿದ್ದರು.

ಯೋಜನೆಗೆ ಆಕ್ಷೇಪ ವ್ಯಕ್ತವಾದ ಕಾರಣ, ಯೋಜನೆ ಕುರಿತು ಮತ್ತಷ್ಟು ಮಾಹಿತಿಯನ್ನು ಅವರು ನೀಡಿದರು. 'ಕೊಡಗು, ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ಕಿರು ಅಣೆಕಟ್ಟೆಗಳನ್ನು ನಿರ್ಮಿಸಲಾಗುತ್ತದೆ. ಪ್ರತಿ ಅಣೆಕಟ್ಟೆಯ ಅಚ್ಚುಕಟ್ಟಿನ ಪ್ರದೇಶ 60-70 ಎಕರೆಯಷ್ಟು ಕಿರಿದಾಗಿರಲಿದೆ. ಅಣೆಕಟ್ಟೆಯ ಎತ್ತರ ಕೇವಲ ಆರು ಅಡಿ ಇರಲಿದೆ. ಇದರಿಂದ ಭಾರಿ ಪ್ರಮಾಣದ ನೀರು ಸಂಗ್ರಹವಾಗುವುದಿಲ್ಲ. ಅರಣ್ಯ ನಾಶವಾಗುವುದಿಲ್ಲ. ಈ ಕಿರುಅಣೆಕಟ್ಟೆಗಳಲ್ಲಿ ಹೆಚ್ಚು ನೀರು ಸಂಗ್ರಹ ಆಗುವುದಿಲ್ಲವಾದ ಕಾರಣ, ಯಾವುದೇ ರೀತಿಯ ಪರಿಸರ ಸಮಸ್ಯೆಗಳೂ ಉದ್ಭವಿಸುವುದಿಲ್ಲ' ಎಂದು ಅವರು ಹೆಚ್ಚುವರಿ ಮಾಹಿತಿ ನೀಡಿದ್ದಾರೆ.


ನಾಲ್ಕೇ ಜಿಲ್ಲೆಗಳಲ್ಲಿ 1,400 ಕಿರುಅಣೆಕಟ್ಟೆಗಳು

44,448 ಚದರ ಕಿ.ಮೀ. ಪಶ್ಚಿಮ ಘಟ್ಟದ ವಿಸ್ತೀರ್ಣ

20,668 ಚದರ ಕಿ.ಮೀ ಪರಿಸರ ಸೂಕ್ಷ್ಮ ವಲಯದ ವಿಸ್ತೀರ್ಣ

ಪಶ್ಚಿಮ ಘಟ್ಟ ವ್ಯಾಪಿಸಿರುವ ಜಿಲ್ಲೆಗಳು

- ಬೆಳಗಾವಿ
- ಉತ್ತರಕನ್ನಡ
- ದಕ್ಷಿಣಕನ್ನಡ
- ಚಿಕ್ಕಮಗಳೂರು
- ಶಿವಮೊಗ್ಗ
- ಉಡುಪಿ
- ಕೊಡಗು
- ಹಾಸನ
- ಚಾಮರಾಜನಗರ
- ಮೈಸೂರು



ಅಪೂರ್ಣ ಮಾಹಿತಿ

- ಯೋಜನೆ ಅನುಷ್ಠಾನದಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಲಾಗಿದೆಯೇ ಅಥವಾ ತಜ್ಞರ ಅಭಿಪ್ರಾಯ ಕೇಳಲಾಗಿದೆಯೇ ಎಂಬುದರ ಮಾಹಿತಿಯನ್ನು ಸಚಿವ ಮಾಧುಸ್ವಾಮಿ ಅವರು ನೀಡಿಲ್ಲ
- ಯೋಜನೆ ಯಾವ ಹಂತದಲ್ಲಿದೆ ಎಂಬುದರ ಮಾಹಿತಿಯನ್ನು ಮಾಧುಸ್ವಾಮಿ ಅವರು ನೀಡಿಲ್ಲ. ವಿಸ್ತೃತ ಯೋಜನಾ ವರದಿ ಸಿದ್ಧವಾಗಿದೆಯೇ ಅಥವಾ ಕಾರ್ಯಸಾಧ್ಯತಾ ಅಧ್ಯಯನ ನಡೆದಿದೆಯೇ ಎಂಬುದರ ಮಾಹಿತಿಯನ್ನು ಅವರು ನೀಡಿಲ್ಲ. ಆದರೆ, ಯೋಜನೆ ಜಾರಿಗೆ ಕೇಂದ್ರ ಸರ್ಕಾರದ ಆರ್ಥಿಕ ನೆರವನ್ನು ಕೇಳಲಾಗಿದೆ ಎಂದಷ್ಟೇ ಹೇಳಿದ್ದಾರೆ. ಯಾವ ಆಧಾರದಲ್ಲಿ ಆರ್ಥಿಕ ನೆರವನ್ನು ಕೇಳಲಾಗಿದೆ ಎಂಬುದನ್ನು ಅವರು ಸ್ಪಷ್ಟಪಡಿಸಿಲ್ಲ. ಯೋಜನೆಯ ಅಂದಾಜು ವೆಚ್ಚ ಎಷ್ಟು ಎಂಬುದನ್ನೂ ಅವರು ತಿಳಿಸಿಲ್ಲ
- ಪಶ್ಚಿಮ ಘಟ್ಟವಿರುವ ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಬೆಳಗಾವಿ, ಚಾಮರಾಜನಗರ ಜಿಲ್ಲೆಗಳನ್ನು ಯೋಜನೆಯಿಂದ ಹೊರಗೆ ಇಡಲಾಗಿದೆ. ಕೊಡಗು, ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರವೇ ಯೋಜನೆ ಜಾರಿಗೆ ಬರಲಿದೆ ಎಂದಿದ್ದಾರೆ. ಈ ಕಿರುಅಣೆಕಟ್ಟೆಗಳಲ್ಲಿ ಸಂಗ್ರಹಿಸಲಾಗುವ ನೀರನ್ನು ಎಲ್ಲಿ ಬಳಸಲಾಗುವುದು ಎಂಬುದನ್ನೂ ಹೇಳಿಲ್ಲ
- ಕಿರುಅಣೆಕಟ್ಟೆಗಳಲ್ಲಿ ಸಂಗ್ರಹವಾಗುವ ನೀರನ್ನು ಯಾವ ವಿಧಾನದ ಮೂಲಕ ಉದ್ದೇಶಿತ ಪ್ರದೇಶಗಳಿಗೆ ಪೂರೈಸಲಾಗುತ್ತದೆ ಎಂಬುದನ್ನು ಸಚಿವರು ಸ್ಪಷ್ಟಪಡಿಸಿಲ್ಲ
- 1,400 ಕಿರುಅಣೆಕಟ್ಟೆಗಳಿಗೆ, ಅವುಗಳ ಕಾಲುವೆ ಅಥವಾ ಕೊಳವೆಮಾರ್ಗಕ್ಕೆ ಅಂದಾಜು ಎಷ್ಟು ವಿಸ್ತೀರ್ಣದ ಭೂಮಿ ಬೇಕಾಗುತ್ತದೆ ಎಂಬುದರ ಮಾಹಿತಿಯನ್ನು ಸಚಿವರು ನೀಡಿಲ್ಲ


ಶರಾವತಿ ಕಣಿವೆ

'ಜನರಿಗೆ ನಿಖರವಾದ ಮಾಹಿತಿ ಕೊಡಿ'


ಡಾ.ಜಿ.ವಿ.ಹೆಗಡೆ

'**ಪಶ್ಚಿಮ ಘಟ್ಟವೆಂಬುದು** ವಿಶಾಲವಾದ ಪ್ರದೇಶ. ಕಿರು ಅಣೆಕಟ್ಟೆಗಳನ್ನು ಅದರ ಮೇಲ್ಭಾಗದಲ್ಲಿ, ಮಧ್ಯಭಾಗದಲ್ಲಿ ಅಥವಾ ತಳಭಾಗದಲ್ಲಿ, ಹೀಗೆ ಎಲ್ಲಿ ನಿರ್ಮಿಸಲಾಗುತ್ತದೆ ಎಂದು ನಿಖರವಾಗಿ ತಿಳಿಸಬೇಕು. ಅಕ್ಷಾಂಶ, ರೇಖಾಂಶಗಳನ್ನು ತಿಳಿಸಿದರೆ ಯೋಜನಾ ಪ್ರದೇಶದ ಬಗ್ಗೆ ಜನರಿಗೆ ಸ್ಪಷ್ಟವಾದ ಚಿತ್ರಣ ಸಿಕ್ಕಿ, ಪಾರದರ್ಶಕತೆ ಮೂಡುತ್ತದೆ. ಒಂದುವೇಳೆ, ಕಾಮಗಾರಿಯ ಪ್ರದೇಶವನ್ನು ಬದಲಿಸಿದರೆ ಪ್ರಶ್ನಿಸಲು ಸಾಧ್ಯವಾಗುತ್ತದೆ' ಎನ್ನುತ್ತಾರೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿವೃತ್ತ ಹಿರಿಯ ವಿಜ್ಞಾನಿ ಡಾ.ಜಿ.ವಿ.ಹೆಗಡೆ.

'ಕಿರು ಅಣೆಕಟ್ಟೆಗಳನ್ನು ನಿರ್ಮಿಸುವ ಪ್ರದೇಶದಲ್ಲಿ ನೀರು ಸಂಗ್ರಹವಾಗಲು ಕನಿಷ್ಠ 500 ಮೀಟರ್ ನೇರವಾದ ಜಾಗ ಬೇಕಾಗುತ್ತದೆ. ಬಯಲುಸೀಮೆಯಲ್ಲಿ ಇಂಥ ಭೂ ಪ್ರದೇಶಗಳಿವೆ. ಪಶ್ಚಿಮ ಘಟ್ಟದಲ್ಲಿ ಕಡಿಮೆಯಿವೆ. 50-60 ಡಿಗ್ರಿಗಳಷ್ಟು ಇಳಿಜಾರಾದ ಪ್ರದೇಶದಲ್ಲಿ ಜಲಾಶಯ ನಿರ್ಮಾಣಕ್ಕೆ ಯೋಗ್ಯವಾದ ಸ್ಥಳವನ್ನು ಮುಂಚಿತವಾಗಿಯೇ ಗುರುತಿಸಬೇಕು. ಇಲ್ಲಿ ಮೂರು- ನಾಲ್ಕು ಮೀಟರ್ ನೀರು ಸಂಗ್ರಹಿಸಲು ಹಲವು ಕಿಲೋಮೀಟರ್ ದೂರದಿಂದ ಕಟ್ಟೆ ನಿರ್ಮಿಸುವ ಅಗತ್ಯವಿದೆ. ಆಗ ಅದು ಕಿಂಡಿ ಅಣೆಕಟ್ಟೆಯ ಬದಲು ಜಲಾಶಯವೇ ಆಗುತ್ತದೆ' ಎಂದು ಅವರು ವಿವರಿಸುತ್ತಾರೆ.


'ಗಟ್ಟಿಯಾದ ಶಿಲೆಗಳಿದ್ದಲ್ಲಿ ಸಮಸ್ಯೆಯಿಲ್ಲ. ಆದರೆ, ಜೌಗು ಮಣ್ಣಿರುವಲ್ಲಿ ಗುಡ್ಡವನ್ನು ಕಡಿದರೆ ಭೂಕುಸಿತ ಹೆಚ್ಚಾಗುವ ಸಾಧ್ಯತೆಯಿರುತ್ತದೆ. ಒಂದುವೇಳೆ, ಕಿರು ಜಲಾಶಯಗಳನ್ನು ಅಂತರ್ಜಲ ಹೆಚ್ಚಿಸುವ ಸಲುವಾಗಿ ನಿರ್ಮಿಸುವುದಾದರೆ, ಮೇಲ್ಪದರದಲ್ಲೇ ಗಟ್ಟಿ ಶಿಲೆಗಳು ಸಿಕ್ಕಿದರೆ ಪ್ರಯೋಜನವಿಲ್ಲ. ಕಾಮಗಾರಿಗೆ ಪೂರಕವಾಗಿ ರಸ್ತೆ ನಿರ್ಮಾಣ, ಮರ ಕಡಿಯುವುದು, ಮಣ್ಣು ತೆರವು ಮುಂತಾದವುಗಳನ್ನು ಸೂಕ್ಷ್ಮ ಪ್ರದೇಶದಲ್ಲಿ ಮಾಡಬೇಕಾಗುತ್ತದೆ. ಇದು ಸಮಸ್ಯೆ ತರಬಲ್ಲದು' ಎಂದು ಅವರು ಅಭಿಪ್ರಾಯ ಪಡುತ್ತಾರೆ.

'ಪಶ್ಚಿಮ ಘಟ್ಟದಿಂದ ಹರಿದು ಸಮುದ್ರ ಸೇರುವ ಕೆಸರುಮಿಶ್ರಿತ ನೀರಿನಲ್ಲಿ, ಸಮುದ್ರದ ಜೀವಿಗಳಿಗೆ ಬೇಕಾದ ಆಹಾರಗಳಿರುತ್ತವೆ. ಸಮುದ್ರದ ಉಪ್ಪು ನೀರು ಹಿಮ್ಮೆಟ್ಟಲು ಸಿಹಿ ನೀರಿನ ಅಗತ್ಯವಿದೆ. ನೈಸರ್ಗಿಕವಾಗಿ ಹರಿಯುವ ನೀರನ್ನು ಅಣೆಕಟ್ಟೆಗಳ ನಿರ್ಮಾಣದ ಮೂಲಕ ತಡೆದಾಗ ಸಮುದ್ರದಲ್ಲಿ ಆಹಾರದ ಸರಪಳಿಯಲ್ಲಿ ವ್ಯತ್ಯಯವಾಗುವ ಸಾಧ್ಯತೆಯಿರುತ್ತದೆ' ಎಂಬ ಕಳವಳ ಅವರದ್ದಾಗಿದೆ.

'ಇಷ್ಟೊಂದು ದೊಡ್ಡ ಯೋಜನೆಗಳನ್ನು ಜಾರಿಗೆ ತರುವ ಮೊದಲು ಸಾರ್ವಜನಿಕರ ಸಲಹೆ ಮತ್ತು ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಭೂ ಸ್ವರೂಪ, ಭೂ ಆಕೃತಿ ಮತ್ತು ಶಿಲಾ ಪದರಗಳಿಗೆ ತೊಂದರೆ ಆಗದಿರುವಂತೆ ಯೋಜನೆಯನ್ನು ಯಾವ ರೀತಿ ರೂಪಿಸಲಾಗುತ್ತದೆ ಎಂಬ ಮಾಹಿತಿ ತಿಳಿಸುವುದು ಸೂಕ್ತ' ಎಂದು ಅನಿಸಿಕೆ ವ್ಯಕ್ತಪಡಿಸುತ್ತಾರೆ.

ಗುಡ್ಡವೇ ಕಳಚಿ ಬಿದ್ದೀತು

ಪಶ್ಚಿಮ ಘಟ್ಟಗಳು ಯಾವ ರೀತಿಯಲ್ಲಿ ಸೂಕ್ಷ್ಮ ಮತ್ತು ಅಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಮುನ್ನ ಯಾವ ಎಚ್ಚರ ಇರಬೇಕು ಎಂಬುದನ್ನು ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್, ಬಾಹ್ಯಾಕಾಶ ವಿಜ್ಞಾನಿ ಕಸ್ತೂರಿ ರಂಗನ್ ಸೇರಿದಂತೆ ಅನೇಕ ಭೂವಿಜ್ಞಾನಿಗಳು ವೈಜ್ಞಾನಿಕ ಸಮೀಕ್ಷೆ ನಡೆಸಿ ತಿಳಿಸಿದ್ದಾರೆ. ಪಶ್ಚಿಮ ಘಟ್ಟಗಳು ಅಂದರೆ ಆಟದ ಬೊಂಬೆ ಎಂದು ಸಚಿವರು ಭಾವಿಸಿದಂತಿದೆ. ಘಟ್ಟದ ಮೇಲೆ ಮಾನವರ ಅವೈಜ್ಞಾನಿಕ ನಡೆಯಿಂದ ಇಡೀ ಘಟ್ಟಗಳ ಸಾಲುಗಳು ಕಳಚಿ ಬೀಳುತ್ತಿರುವುದು, ಮಡ್ಡಿಯಾಗಿ ಹರಿದು ಹೊಳೆಯಾಗುತ್ತಿರುವ ವಿಷಯ ಅವರು ತಿಳಿದಂತಿಲ್ಲ. ಪಶ್ಚಿಮಘಟ್ಟದ ಮೇಲೆ ಮತ್ತೆ ಮತ್ತೆ ದಾಳಿ ಮಾಡುತ್ತಿದ್ದರೆ ಮುಂದೆ ಅಪಾಯ ತಪ್ಪಿದ್ದಲ್ಲ.



ಘಟ್ಟದ ಮೇಲೆ ಯಾವುದೇ ಕಾಮಗಾರಿ ಹಮ್ಮಿಕೊಂಡರೂ ಪರಿಸರದ ಲಯ ತಪ್ಪುತ್ತದೆ. ಕಳೆದ ವರ್ಷ ತಲಕಾವೇರಿಯ ಘಟನೆ ಇನ್ನೂ ಹಸಿಯಾಗಿಯೇ ಇದೆ. ಇತ್ತೀಚೆಗೆ ಗುಡ್ಡಗಳು ಕುಸಿದಿರುವುದಕ್ಕೆ ಮಾನವರ ಅವೈಜ್ಞಾನಿಕ ನಡೆ, ಹಣಗಳಿಕೆಯ ದುರಾಸೆ, ಹುಂಬತನ ಕಾರಣ. ಕೊಡಗು ಜಿಲ್ಲೆಯ ಜನರ ಬದುಕು ಇತ್ತೀಚಿನ ವರ್ಷಗಳಲ್ಲಿ ನರಕವಾಗಿದೆ. ಗುಡ್ಡಗಳು, ಕಾಫಿ ತೋಟಗಳು ಮಡ್ಡಿ ನೀರಿನಲ್ಲಿ ಕೊಚ್ಚಿಹೋಗಿ ಜಮೀನುಗಳನ್ನು ಹುಡುಕುವಂತಾಗಿದೆ.

ಘಟ್ಟಗಳನ್ನು ಕೆಣಕಿದರೆ ಕೇವಲ ಘಟ್ಟದ ಬುಡದಲ್ಲಿ ಬದುಕು ಕಟ್ಟಿಕೊಂಡವರು ಮಾತ್ರವಲ್ಲ ರಾಜ್ಯದ ಜನತೆಯ ಜೀವನದ ಮೇಲೆ ಪರಿಣಾಮ ಉಂಟಾಗುತ್ತದೆ. ಸಿಹಿ ನೀರು ಸಂಗ್ರಹಿಸಲು ಸಚಿವರಿಗೆ ಪಶ್ಚಿಮಘಟ್ಟವೇ ಬೇಕೇ? ನದಿಯ ಹರಿವಿನ ಉದ್ದಕ್ಕೂ ಅಣೆಕಟ್ಟು ಕಟ್ಟಬಹುದಲ್ಲ. ದಯವಿಟ್ಟು ಈ ಯೋಜನೆ ತಕ್ಷಣ ನಿಲ್ಲಿಸಲಿ.

ನದಿಗಳು ಹುಟ್ಟುವ ಸ್ಥಳದಲ್ಲೇ ಕಿರು ಅಣೆಕಟ್ಟು ನಿರ್ಮಿಸುವುದರಿಂದ ಯಾವ ಪ್ರಯೋಜನವಿದೆ? ಅಭಿವೃದ್ಧಿ ಹೆಸರಿನಲ್ಲಿ ಕೈಗೊಂಡ ಕಾಮಗಾರಿಗಳಿಂದ ಘಟ್ಟವು ನಲುಗಿ ಹಿಂಡಿದ ಬಟ್ಟೆಯಂತಾಗಿದೆ.

1,400 ಕಿರು ಅಣೆಕಟ್ಟೆಗಳು ಎಂದರೆ, ಕರ್ನಾಟಕದ ವ್ಯಾಪ್ತಿಯಲ್ಲಿರುವ ಪಶ್ಚಿಮ ಘಟ್ಟವನ್ನು ಪೂರ್ತಿಯಾಗಿ ವ್ಯಾಪಿಸುತ್ತದೆ. ಅಣೆಕಟ್ಟೆ ಸಣ್ಣದಿರಲಿ ದೊಡ್ಡದಿರಲಿ ಅಲ್ಲಿ ನಡೆಯುವ ಕಾಂಕ್ರೀಟ್ ಕೆಲಸಕ್ಕೆ ಘಟ್ಟದ ಬುಡವೇ ಅಲ್ಲಾಡುತ್ತದೆ. ಮಳೆಗಾಲದಲ್ಲಿ ಬೀಳುವ ಮಳೆಯಿಂದಲೇ ಘಟ್ಟ ಕುಸಿಯುತ್ತದೆ ಅಂದ ಮೇಲೆ, ಅಣೆಕಟ್ಟೆಯಲ್ಲಿ ಶಾಶ್ವತವಾಗಿ ನಿಲ್ಲುವ ನೀರು ಮತ್ತು ಅದರಿಂದಾದ ನಾಶದಿಂದಾಗಿ ಬಿರುಕು ಮೂಡಿ ಗುಡ್ಡಗಳು ಅಣೆಕಟ್ಟೆ ಸಮೇತ ಕಳಚಿ ಬೀಳದೆ ಇರಲಾರದು.

ಟಿ.ಎಂ. ಶಿವಶಂಕರ್, ನಿವೃತ್ತ ಹಿರಿಯ ಭೂಜಲವಿಜ್ಞಾನಿ, ಬೆಂಗಳೂರು

ವರದಿ: ಜಯಸಿಂಹ ಆರ್., ಸದಾಶಿವ ಎಂ.ಎಸ್., ಸಂಧ್ಯಾ ಹೆಗಡೆ, ಆದಿತ್ಯ ಕೆ.ಎ.

ಶಾಶ್ವತ ಜಲಪ್ರಳಯಕ್ಕೆ ಕಾರಣ

ಪಶ್ಚಿಮಘಟ್ಟ ವ್ಯಾಪ್ತಿಯ ಕೊಡಗು ಕಳೆದ ಮೂರು ವರ್ಷಗಳಿಂದಲೂ ಪ್ರಾಕೃತಿಕ ವಿಕೋಪದಿಂದ ನಲುಗುತ್ತಿದೆ. ಅದಕ್ಕೆ ಪರಿಸರ ನಾಶವೇ ಕಾರಣವೆಂದು ಭೂವಿಜ್ಞಾನಿಗಳು ಎಚ್ಚರಿಸಿದ್ದಾರೆ. ಆದರೆ, ಇದೀಗ ಪಶ್ಚಿಮಘಟ್ಟದಲ್ಲಿ ಮಿನಿ ಜಲಾಶಯ ನಿರ್ಮಾಣ ಮಾಡುತ್ತೇವೆ ಎಂದು ಸಚಿವರು ನೀಡಿರುವ ಹೇಳಿಕೆಯಿಂದ ಕೊಡಗಿನಲ್ಲಿ ಆತಂಕ ಮನೆ ಮಾಡಿದೆ. ಈ ಯೋಜನೆಯು ಶಾಶ್ವತ ಜಲಪ್ರಳಯಕ್ಕೆ ಕಾರಣವಾಗಬಹುದು ಎಂದು ಪರಿಸರವಾದಿಗಳು ಆತಂಕ ವ್ಯಕ್ತಪಡಿಸುತ್ತಾರೆ.


ಎನ್.ಯು.ನಾಚಪ್ಪ

'ಗುಡ್ಡಗಾಡು ಪ್ರದೇಶವು ಜಲಾಶಯ ನಿರ್ಮಾಣಕ್ಕೆ ಸೂಕ್ತವಾದ ಸ್ಥಳವಲ್ಲ. ಕೊಡಗಿನ ಹಾರಂಗಿ ಜಲಾಶಯದ ಹಿನ್ನೀರು ಪ್ರತಿವರ್ಷವೂ ಸಾಕಷ್ಟು ಸಮಸ್ಯೆ ತಂದೊಡ್ಡುತ್ತಿದೆ. ಈ ಜಲಾಶಯದ ಹಿನ್ನೀರು 2018ರಲ್ಲಿ ಆವರಿಸಿ, ಬೆಟ್ಟಗಳು ಸ್ಫೋಟಗೊಂಡಿದ್ದವು. ಹಿನ್ನೀರು ವ್ಯಾಪ್ತಿಯ 20 ಹಳ್ಳಿಗಳಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಹಾನಿ ಸಂಭವಿಸಿತ್ತು. ಜಲಾಶಯದ ನಿರ್ವಹಣೆಯೇ ಸರಿಯಾಗಿ ನಡೆಯುತ್ತಿಲ್ಲ. ನಾಲ್ಕು ವರ್ಷದಿಂದ ಹೋರಾಟ ನಡೆಸುತ್ತಿದ್ದೇನೆ. ಕೊಡಗಿನದ್ದು ಮೆದು ಮಣ್ಣು. ತೇವಾಂಶ ಹೆಚ್ಚಾದರೆ ಭೂಕುಸಿತವಾಗಲಿದೆ. ಮತ್ತೆ ಜಲಾಶಯ ನಿರ್ಮಿಸಿದರೆ, ದುರಂತಗಳ ಸರಮಾಲೆ ಆರಂಭಗೊಳ್ಳಲಿದೆ' ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಆತಂಕ ವ್ಯಕ್ತಪಡಿಸುತ್ತಾರೆ.

'ಕಾಫಿ ತೋಟಕ್ಕೆ ಬೇಸಿಗೆಯಲ್ಲಿ ಸ್ಪಿಂಕ್ಲರ್ ಮೂಲಕ ನೀರು ಹಾಯಿಸಲು ಬೆಟ್ಟದ ಮೇಲ್ಭಾಗದಲ್ಲಿ ಕಾಫಿ ಬೆಳೆಗಾರರಲ್ಲಿ ಹಲವರು ಕೆರೆ ನಿರ್ಮಿಸಿದ್ದರು. ಮೂರು ವರ್ಷಗಳ ಹಿಂದೆ ಮಳೆ ಹೆಚ್ಚಾಗಿ, ಕೆರೆಗಳು ಕುಸಿದು ಬೆಟ್ಟವೇ ಸ್ಫೋಟಗೊಂಡಿದ್ದವು. ತೋಟಕ್ಕಾಗಿ ಬೆಟ್ಟದ ಮೇಲೆ ಕೆರೆ ನಿರ್ಮಿಸಿದ್ದು ದುರಂತಕ್ಕೆ ಕಾರಣವೆಂದು ಭೂವಿಜ್ಞಾನಿಗಳೂ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದ್ದರು. ಆದರೆ, ಇಂತಹ ಸೂಕ್ಷ್ಮ ಪ್ರದೇಶದಲ್ಲಿ ಮಿನಿ ಜಲಾಶಯ ನಿರ್ಮಿಸಿದರೆ ಕಥೆ ಏನಾಗಬಹುದು ಊಹಿಸಿ? ಯಾವುದೇ ಕಾರಣಕ್ಕೂ ಸರ್ಕಾರವು ಈ ಪ್ರಯತ್ನಕ್ಕೆ ಕೈಹಾಕಬಾರದು' ಎಂದು ಪರಿಸರವಾದಿ ರವಿ ಎಚ್ಚರಿಸುತ್ತಾರೆ.

'ಪರಿಸರ ನಾಶದಿಂದ ಇಲ್ಲಿನ ಅರಣ್ಯ ಪ್ರದೇಶವು ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕಳೆದುಕೊಂಡಿವೆ. ಭೂಸವಕಳಿ ಹೆಚ್ಚಾಗಿದೆ. ಅಭಿವೃದ್ಧಿ, ಜನವಸತಿ, ವಾಣಿಜ್ಯ ಬೆಳೆಗಾಗಿ ಅರಣ್ಯಗಳು ಕರಗಿ ಹೋಗುತ್ತಿವೆ' ಎಂದು ಆತಂಕದಿಂದ ನುಡಿಯುತ್ತಾರೆ.

'ಪರಿಸರದ ಜೀವವೈವಿಧ್ಯಕ್ಕೆ ಧಕ್ಕೆ'


ಡಾ. ದೇವಿಪ್ರಸಾದ್

'ಮೀಸಲು ಅರಣ್ಯ, ರಕ್ಷಿತಾರಣ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಸಬಾರದು' ಎಂದು ಮಾಧವ ಗಾಡ್ಗೀಳ್ ಸಮಿತಿಯ ವರದಿ ಸ್ಪಷ್ಟವಾಗಿ ಹೇಳಿದೆ. ಈ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಯೋಜನೆ ಕೈಗೆತ್ತಿಕೊಂಡರೆ ಪರಿಸರ ಅಸಮತೋಲನ ಉಂಟಾಗಿ ಭವಿಷ್ಯದಲ್ಲಿ ಅಪಾರ ನಷ್ಟ ಉಂಟಾಗುವ ಸಾಮಾನ್ಯ ಪರಿಜ್ಞಾನ ಯಾವಾಗ ಜಾಗೃತವಾಗುತ್ತದೆ ಎಂಬುದನ್ನು ನಮಗೆ ನಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ' ಎನ್ನುತ್ತಾರೆ ಪರಿಸರ ತಜ್ಞ, ನಿವೃತ್ತ ಪ್ರಾಧ್ಯಾಪಕ ಡಾ. ದೇವಿಪ್ರಸಾದ್.

ಕಿಂಡಿ ಅಣೆಕಟ್ಟೆಯಿಂದ ಭೂಮಿ ಮುಳುಗಡೆ ಆಗುವುದಿಲ್ಲ ಎಂಬುದು ಮೇಲ್ನೋಟದ ಸಮರ್ಥನೆ. ಆದರೆ, ಅಣೆಕಟ್ಟೆ ನಿರ್ಮಿಸುವಾಗ ಅಲ್ಲಿ ಜೆಸಿಬಿ ಯಂತ್ರಗಳು ಕೆಲಸ ಮಾಡುತ್ತವೆ. ರಸ್ತೆ ನಿರ್ಮಾಣವಾಗುತ್ತದೆ. ಕಲ್ಲುಗಳಿದ್ದರೆ ಅವುಗಳನ್ನು ಸ್ಫೋಟಿಸಬೇಕಾಗುತ್ತದೆ. ಇದು ಭವಿಷ್ಯದಲ್ಲಿ ಭೂಕುಸಿತಕ್ಕೆ ಕಾರಣವಾಗಬಹುದು. ಒಂದು ಅಣೆಕಟ್ಟೆ ಕಟ್ಟುವಾಗ ಆ ಜಾಗದ ಸುತ್ತಲಿನ ಎಷ್ಟೋ ಹೆಕ್ಟೇರ್ ಪ್ರದೇಶದ ಕಾಡುಪ್ರಾಣಿಗಳು, ಜೀವವೈವಿಧ್ಯಕ್ಕೆ ಧಕ್ಕೆಯಾಗುತ್ತದೆ ಎಂದು ಹೇಳಿದರು.

'ಪಶ್ಚಿಮಘಟ್ಟಕ್ಕೆ ಮಾರಕ'


ದಿನೇಶ್ ಹೊಳ್ಳ

'**ಸಕಾರಾತ್ಮಕ ಅಂಶ** ನೋಡಿದರೆ ಸಾಲದು ನಕಾರಾತ್ಮಕ ಸಂಗತಿಗಳನ್ನು ನೋಡಬೇಕು. ನಾಲ್ಕೈದು ವರ್ಷಗಳಲ್ಲಿ ಕೊಡಗು, ಚಿಕ್ಕಮಗಳೂರು ಭಾಗದಲ್ಲಿ ಆಗಿರುವ ಪ್ರಾಕೃತಿಕ ವಿಕೋಪ ಗಮನಿಸಿದರೆ ಪಶ್ಚಿಮಘಟ್ಟಕ್ಕೆ ಈ ಯೋಜನೆ ಪೂರಕವಲ್ಲ, ಮಾರಕವಾಗಿದೆ. ಪಶ್ಚಿಮಘಟ್ಟದ ಮಣ್ಣಿನ ಮೇಲ್ಪೈಪದರ ವಿವಿಧ ಕಾಮಗಾರಿ, ಯೋಜನೆಗಳಿಂದ ಈಗಾಗಲೇ ಸಡಿಲಗೊಂಡಿದೆ. ಇದರಿಂದಲೇ ಭೂಕುಸಿತ ಆಗುತ್ತಿದೆ. ಇದೇ ಸ್ಥಳದಲ್ಲಿ ಮತ್ತೆ ಕಿಂಡಿ ಅಣೆಕಟ್ಟೆ ನಿರ್ಮಿಸಿದರೆ ಮಣ್ಣು ಸಡಿಲುಗೊಂಡು ಇನ್ನಷ್ಟು ಭೂ ಕುಸಿತಕ್ಕೆ ಕಾರಣವಾಗಬಹುದು' ಎಂದು ಪರಿಸರ ತಜ್ಞ ದಿನೇಶ ಹೊಳ್ಳ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'**ಅಫ್ಗಾನಿಸ್ತಾನದಿಂದ** ಮಂಗಳವಾರ 800 ಭಾರತೀಯರನ್ನು ವಾಯುಪಡೆಯ ಸಿ-17 ಗ್ಲೋಬ್ ಮಾಸ್ಟರ್ ವಿಮಾನದ ಮೂಲಕ ತೆರವು ಮಾಡಲಾಗಿದೆ. 670 ಜನರನ್ನು ಈ ಹಿಂದೆ ಒಂದೇ ಬಾರಿ ತೆರವು ಮಾಡಿದ್ದು, ದಾಖಲೆಯಾಗಿತ್ತು. ಈಗ 800 ಮಂದಿಯನ್ನು ಒಮ್ಮೆಲೇ ತೆರವು ಮಾಡುವ ಮೂಲಕ ವಾಯುಪಡೆ ಹೊಸ ದಾಖಲೆ ನಿರ್ಮಿಸಿದೆ' ಎಂಬ ವಿವರ ಇರುವ ಸಂದೇಶ, ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಸರಕುಸಾಗಣೆ ವಿಮಾನವೊಂದರಲ್ಲಿ ನೂರಾರು ಜನರು ಕುಳಿತಿರುವ ಚಿತ್ರವೂ ಈ ಪೋಸ್ಟರ್‌ಗಳ ಜತೆ ವೈರಲ್ ಆಗಿದೆ.


ವೈರಲ್ ಆಗಿರುವ ಚಿತ್ರ

ಇದು ಸುಳ್ಳು ಸುದ್ದಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ವೈರಲ್ ಆಗಿರುವ ಚಿತ್ರಕ್ಕೂ, ಅದರಲ್ಲಿ ಹಂಚಿಕೊಳ್ಳಲಾಗಿರುವ ವಿವರಕ್ಕೂ ಸಂಬಂಧವಿಲ್ಲ. 2013ರಲ್ಲಿ ಫಿಲಿಪ್ಪೀನ್ಸ್‌ನಲ್ಲಿ ಪ್ರವಾಹ ಸಂತ್ರಸ್ತರನ್ನು ಅಮೆರಿಕದ ವಾಯುಪಡೆ ತನ್ನ ವಿಮಾನದಲ್ಲಿ ತೆರವು ಮಾಡಿತ್ತು. ಆ ಕಾರ್ಯಾಚರಣೆಯಲ್ಲಿ 670 ಜನರನ್ನು ತೆರವು ಮಾಡಲಾಗಿತ್ತು. ಭಾರತವು ಕಾಬೂಲ್‌ನಿಂದ ಈವರೆಗೆ ಎರಡು ಬಾರಿ ಭಾರತೀಯರನ್ನು ತೆರವು ಮಾಡಿದೆ. ಎರಡೂ ಬಾರಿ ಸಿ-17 ಗ್ಲೋಬ್ ಮಾಸ್ಟರ್ ವಿಮಾನ ಬಳಸಲಾಗಿದೆ. ಒಮ್ಮೆ 46 ಮತ್ತು ಎರಡನೇ ಬಾರಿ 120 ಜನರನ್ನು ಕರೆತರಲಾಗಿದೆ. 2013ರ ಚಿತ್ರವನ್ನು ಈಗ ತಪ್ಪಾಗಿ ಬಳಸಿಕೊಂಡು ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ' ಎಂದು ದಿ ಲಾಜಿಕಲ್ ಇಂಡಿಯನ್ ವಿವರಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಆಗಸ್ಟ್ 19, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮಖಾ ದ್ವಾದಶಿ ಗಂ. 38-59 (ರಾ. 9-50) ಗುರುವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 41-13 (ರಾ. 10-44) ಪ್ರೀತಿ ನಾಮ ಯೋಗ ಗಂ. 32-30 ಬವ ಕರಣ ಗಂ. 11-36 ವಿಷ ಗಂ. 7-16 ಅಮೃತ ಗಂ. 30-1: ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30: ಸೂರ್ಯೋದಯ: 6-11 ಸೂರ್ಯಾಸ್ತ: 6-36 ಅದೃಷ್ಟ ಸಂಖ್ಯೆ 1, 8

ಮೇಷ: ಮಕ್ಕಳ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯ. ಜಂಟಿ ವ್ಯವಹಾರಗಳಿಗೆ ಕೈ ಹಾಕದಿರಿ. ಬಂಧುಮಿತ್ರರೊಂದಿಗೆ ಶುಭಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ. ದೈನಂದಿನ ವ್ಯವಹಾಗಳಲ್ಲಿ ಸಂತಸ.

ವೃಷಭ: ಸಂತೃಪ್ತಿ ಸಾಂಸಾರಿಕ ಜೀವನ ನಿಮ್ಮದಾಗಲಿದೆ. ಮಹಿಳೆಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಕುಟುಂಬದ ಸದಸ್ಯರೊಂದಿಗೆ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಸಾಧ್ಯತೆ.

ಮಿಥುನ: ಉದ್ಯೋಗದಲ್ಲಿರುವವರಿಗೆ ಮೇಲಧಿಕಾರಿಗಳಿಂದ ಪ್ರೋತ್ಸಾಹ. ಮಹಿಳೆಯರ ಇಷ್ಟಾರ್ಥಗಳು ಈಡೇರಿ ಸಂತಸ. ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗಿ ಹೊಸ ಬದುಕಿಗೆ ನಾಂದಿಯಾಗಲಿದೆ.

ಕರ್ಕಾಟಕ: ಮಕ್ಕಳೊಂದಿಗೆ ವಾದ ವಿವಾದ ಮಾಡದಿರಿ. ವಾಹನ ಚಾಲನೆ, ಸ್ತ್ರೀಯರೊಂದಿಗೆ ವ್ಯವಹರಿಸುವಾಗ ಎಚ್ಚರಿಕೆ ಅಗತ್ಯ. ಬಂಧುಗಳೊಂದಿಗಿನ ಭಿನ್ನಾಭಿಪ್ರಾಯಗಳು ದೂರವಾಗಿ ಬಾಂಧವ್ಯ ವೃದ್ಧಿಯಾಗಲಿದೆ.

ಸಿಂಹ: ಆರ್ಥಿಕ ಅನುಕೂಲತೆ. ಮಕ್ಕಳಿಂದ ನೆಮ್ಮದಿ. ವಿದೇಶ ಪ್ರಯಾಣ ಯೋಗ. ದಿನನಿತ್ಯದ ಕೆಲಸಗಳಲ್ಲಿ ಉತ್ಸಾಹ. ಮಿತ್ರರ ಸಹಾಯ ಸಹಕಾರಗಳಿಂದಾಗಿ ವ್ಯವಹಾರಗಳು ಸುಧಾರಿಸಲಿವೆ.

ಕನ್ಯಾ: ದೈನಂದಿನ ಕಾರ್ಯಗಳಲ್ಲಿ ಆಸಕ್ತಿ. ಆಸ್ತಿ ವಿಷಯದಲ್ಲಿ ಕಲಹ ಎದುರಾಗುವ ಸಾಧ್ಯತೆ. ನೌಕರಿಯಲ್ಲಿರುವವರಿಗೆ ವರ್ಗಾವಣೆಯಿಂದ ಸ್ಥಾನಪಲ್ಲಟ ಸಾಧ್ಯತೆ. ಅಮೂಲ್ಯ ವಸ್ತುಗಳ ಸಂಗ್ರಹಣೆ ಮಾಡಲಿದ್ದೀರಿ.

ತುಲಾ: ವಿವಾಹಾಕಾಂಕ್ಷಿಗಳಿಗೆ ಸಂಬಂಧಗಳು ಕೂಡಿಬರುವ ಸಾಧ್ಯತೆ. ಹಲವಾರು ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಿರಿ. ನೂತನ ವಾಹನ ಖರೀದಿ ಮಾಡಲಿದ್ದೀರಿ.

ವೃಶ್ಚಿಕ: ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ಗೃಹ ನಿರ್ಮಾಣ ಅಥವಾ ಖರೀದಿ. ಮಹಿಳೆಯರಿಗೆ ಸಾಮಾಜಿಕ ಗೌರವಾದರಗಳು ದೊರಕಲಿವೆ. ರಾಜಕೀಯದಲ್ಲಿ ಯಶಸ್ಸಿನ ಹೆಜ್ಜೆ ತುಳಿಯಲಿದ್ದೀರಿ.

ಧನು: ದೂರಾಲೋಚನೆಯಿಂದ ಮಾಡಿದ ಕಾರ್ಯಗಳಲ್ಲಿ ಯಶಸ್ಸು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನ ಹರಿಸಿ. ಕುಟುಂಬದಲ್ಲಿ ನೆಮ್ಮದಿ. ಅನಿವಾರ್ಯ ಕಾರಣಗಳನ್ನು ಹೊರತುಪಡಿಸಿ ದೂರಪ್ರಯಾಣ ಮಾಡದಿರಿ.

ಮಕರ: ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತುರುಸಿನಿಂದ ತೊಡಗಿಕೊಳ್ಳುವಿರಿ. ಹಣಕಾಸಿನ ವಿಚಾರದಲ್ಲಿ ಅತ್ಯಂತ ಜಾಗರೂಕತೆ ಅವಶ್ಯ. ಮಕ್ಕಳ ಆರೋಗ್ಯದ ಕಡೆ ತುಸು ಗಮನ ವಹಿಸಿ. ದೇವಾಲಯ ದರ್ಶನ ಮಾಡಲಿದ್ದೀರಿ.

ಕುಂಭ: ಬಹುಕಾಲದ ಬಯಕೆಗಳು ಈಡೇರಲಿವೆ. ಋಣಪರಿಹಾರದಿಂದಾಗಿ ಸಂತೃಪ್ತಿ. ವೈಯಕ್ತಿಕ ವಿಚಾರಗಳನ್ನು ಬಹಿರಂಗಪಡಿಸದೇ ಗುಪ್ತವಾಗಿರಿಸುವುದು ಕ್ಷೇಮ. ವಸ್ತ್ರ, ಹತ್ತಿ, ನಾರಿನ ಪದಾರ್ಥಗಳ ವ್ಯಾಪಾರ ಹೆಚ್ಚಿನ ಆದಾಯ.

ಮೀನ: ತಾಳ್ಮೆಯಿಂದ ಕಾರ್ಯಸಿದ್ಧಿ. ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಎಚ್ಚರಿಕೆ ವಹಿಸಿ. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಮಹಿಳೆಯರು ಮಾತನಾಡುವುದಕ್ಕಿಂತ ಮೌನ ವಹಿಸುವುದು ಕ್ಷೇಮ.

ನಿಮ್ಮ ಜನ್ಮದಿನ 19-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ಜಂಟಿ ವ್ಯವಹಾರದಲ್ಲಿ ತೊಡಗಿಕೊಳ್ಳುವುದರಿಂದ ಆರ್ಥಿಕ ಅನುಕೂಲಗಳನ್ನು ತಂದುಕೊಡುವುದು. ಮಿತ್ರರಿಂದ ಉತ್ತಮ ಸಹಕಾರ ದೊರೆಯಲಿದ್ದು ಆಸ್ತಿ ಅಭಿವೃದ್ಧಿಯಾಗುವ ಸಾಧ್ಯತೆ. ಸರ್ಕಾರಿ ನೌಕರರಿಗೆ ಭಡ್ತಿ. ರೈತರಿಗೆ ಕೆಲಸ ಕಾರ್ಯಗಳಲ್ಲಿ ಸಮಸ್ಯೆಗಳು ಎದುರಾಗುವ ಸಾಧ್ಯತೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ವಿವಿಧತೆಯಲ್ಲಿ ಸಾಮರಸ್ಯ

ನೀಲವಿಸ್ತರವಿರಲು ನಕ್ಷತ್ರ ಬಿಂದು ಸೊಗ |
ಶೈಲದಚಲತೆಯಿರಲು ಝರಿಯ ವೇಗ ಸೊಗ ||
ಬಾಳು ಬಯಲಂತಿರಲು ಮನೆಯಚ್ಚುಕಟ್ಟಿಂಬು |
ವೈಲಕ್ಷಣದೆ ಚೆಂದ – ಮಂಕುತಿಮ್ಮ || 451 ||

ಪದ-ಅರ್ಥ: ನೀಲವಿಸ್ತರ = ಆಕಾಶದ ವಿಸ್ತರ, ಸೊಗ = ಸೊಗಸು, ಶೈಲದಚಲತೆ = ಶೈಲದ(ಪರ್ವತದ) + ಅಚಲತೆ(ಸ್ಥಿರತೆ), ಬಯಲಂತಿರಲು = -ಬಯಲಂತೆ + ಇರಲು, ಮನೆಯಚ್ಚುಕಟ್ಟಿಂಬು = -ಮನೆಯ + ಅಚ್ಚುಕಟ್ಟು + ಇಂಬು(ಅನುಕೂಲ) ವೈಲಕ್ಷಣ = ವಿವಿಧತೆ.

ವಾಚ್ಯಾರ್ಥ: ವಿಸ್ತಾರವಾದ ಆಕಾಶದಲ್ಲಿ ಒಂದು ಹೊಳೆಯುವ ನಕ್ಷತ್ರ ಸೊಗಸು. ಅಚಲವಾಗಿ ಬೆಟ್ಟಗಳು ನಿಂತಾಗ, ಹರಿಯುವ ನೀರಿನ ಝರಿಯ ವೇಗ ಚೆಂದ. ಬಾಳು ಬಯಲಂತಿರುವಾಗ ಕಟ್ಟಿಕೊಂಡ ಮನೆಯೇ ಅನುಕೂಲವಾದದ್ದು. ಈ ವೈವಿಧ್ಯತೆಯೇ ಬದುಕಿನ ಅಂದ.

ವಿವರಣೆ: ವಿಮಾನದಲ್ಲಿ ಕುಳಿತು ಆಕಾಶಕ್ಕೆ ಹಾರುವುದೇ ಒಂದು ಸೊಗಸು. ಕಿಟಕಿಯ ಪಕ್ಕ ಕುಳಿತು ಗಮನಿಸಿ. ವಿಮಾನ ನೆಲದ ಮೇಲೆ ಓಡುದಾರಿಯಲ್ಲಿ ನಿಂತು ಮೊದಲು ನಿಧಾನವಾಗಿ ಚಲಿಸಿ, ವೇಗವನ್ನು ಮೈಗೂಡಿಸಿಕೊಂಡು, ಭರದಿಂದ ನುಗ್ಗಿ ಸೊಂಯ್ ಎಂದು ನೆಲಬಿಟ್ಟು ಹಾರಿದಾಗ ಅದೆಷ್ಟು ಸಂತೋಷ. ಪ್ರತಿಕ್ಷಣಕ್ಕೂ ಹಿಂದೋಡುತ್ತಿರುವ ದೃಶ್ಯಗಳು, ಮೇಲಕ್ಕೆ ಹೋದಂತೆ ಇರುವೆಗಳಂತೆ ಕಾಣುವ ವಾಹನಗಳು, ಬೆಂಕಿಪೊಟ್ಟಣದಂತೆ ತೋರುವ ಮನೆಗಳು, ಬೆಳ್ಳಿಯ ಕಡ್ಡಿಯಂತೆ ಕಾಣಿಸುವ ನದಿಗಳು ಮನ ತುಂಬುತ್ತವೆ. ಮೇಲೆ ಪೂರ್ತಿ ಏರಿದ ಮೇಲೆ ಯಾವ ಸೊಬಗೂ ಇಲ್ಲ. ವಿಮಾನ ನಿಂತಲ್ಲಿಯೇ ನಿಂತಂತೆ ತೋರುತ್ತದೆ. ಗಟ್ಟಿಯಾದ, ಅಚಲವಾದ ನೆಲವಿದ್ದುದರಿಂದ ವಿಮಾನದ ರಭಸ ಎದ್ದು ಕಾಣುತ್ತದೆ. ಒಂದರ ಸ್ಥಿರತೆ ಮತ್ತೊಂದರ ಚಲನೆಗೆ ಪುಟಕೊಡುತ್ತದೆ. ಆಗಲೇ ವೇಗದ ಕಲ್ಪನೆ ಬರುವುದು. ಎರಡು ವಾಹನಗಳು ಒಂದೇ ವೇಗದಲ್ಲಿ ಸಾಗುತ್ತಿದ್ದರೆ, ತುಲನಾತ್ಮಕವಾಗಿ ಅವು ನಿಂತೇ ಇದ್ದಂತೆ ಭಾಸವಾಗುತ್ತದೆ. ಒಂದು ಸ್ಥಿರ ಮತ್ತೊಂದು ಚರವಾದಾಗ ಸೊಗಸು. ಅಂತೆಯೇ ವಿಶಾಲವಾದ ಕಪ್ಪು ಆಕಾಶದಲ್ಲಿ ಹೊಳೆಯುವ ಒಂದೇ ನಕ್ಷತ್ರ ಮನಸೆಳೆಯುತ್ತದೆ. ಜೋಗದ ಬೆಟ್ಟ ಭದ್ರವಾಗಿ ನಿಂತಾಗ ಜಲಪಾತದ ಸೌಂದರ್ಯ ಎದ್ದು ಕಾಣುತ್ತದೆ. ಹಿಮಾಲಯ ಪರ್ವತದ ವಿಸ್ತಾರದಲ್ಲಿ ದೂರದಲ್ಲಿ ಕಾಣುವ ಒಂಟಿ ಮನೆ ಎಷ್ಟು ಚಂದ!

ಹೀಗೆಂದರೇನಾಯಿತು? ಬದುಕು ಸುಂದರವಾಗಲು ಬೇಕಾದ ಗುಣಗಳು ಒಂದೇ ತೆರದುವಲ್ಲ. ಅವು ನಾನಾ ಪ್ರಕಾರದವುಗಳು. ಅವುಗಳು ಮೇಲ್ನೋಟಕ್ಕೆ ಪರಸ್ಪರ ವಿರೋಧಿಗಳಂತೆ ತೋರಬಹುದು. ಆದರೆ ಅವು ಜೊತೆ ಜೊತೆಯಲ್ಲಿದ್ದಾಗ ಸೌಂದರ್ಯದದ ಗಮ್ಯಸ್ಥಾನಗಳಾಗುತ್ತವೆ. ಸೌಂದರ್ಯವೃದ್ಧಿಗೆ ಅವುಗಳ ಸಮನ್ವಯತೆ ಕಾರಣವಾಗುತ್ತದೆ. ಸಂಮಿಳಿತತೆಯ ಸಮರಸ ಸ್ಥಿತಿಯಲ್ಲಿ ಅವು ಪರಸ್ಪರ ಸಹಕಾರಿಗಳೇ ಆಗುತ್ತವೆ. ಅದನ್ನು ಗಮನಿಸಿ, ಆಸ್ವಾದಿಸುವುದು ವಿವೇಕ.

ವಿವಿಧತೆಯಲ್ಲಿ ಸಾಮರಸ್ಯವನ್ನು ಕಾಣುವುದೇ ಔಚಿತ್ಯಜ್ಞಾನ. ಮನುಷ್ಯ ಜೀವನ ಸಮೃದ್ಧವಾಗಬೇಕಾದರೆ ಇಂಥ ತೋರಿಕೆಗೆ ಬೇರೆಯೆಂದು ಕಾಣುವ ನೂರಾರು ಗುಣಗಳು ಮೈತ್ರಿಯಿಂದ ಸಮ್ಮಿಳಿತವಾಗಬೇಕು.

ಪದಬಂಧ 4693


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭವಣೆಯಲ್ಲಿರುವ ಸಂಸಾರ (2)
3.ಪ್ರವಾಸದಿಂದ ಆಗಿರುವ ಸುಸ್ತು (3)
5.ವಿಷಯಾಸಕ್ತನಿವನು (3)
7.ಕೊನೆಗೆ ಹಾರವಿಟ್ಟರೆ ಸುತ್ತಲಿನ ಜನ ಕಾಣುವರೇ? (4)
9.ಗುಡಿಸಲು ಇಲ್ಲಿದೆ (3)
10.ಕಲೆಸಿದ ಗೋಧಿಹಿಟ್ಟು (3)
11.ಭಾನುವಾರವನ್ನು ಹೀಗೂ ಹೇಳುವರು (4)
13.ಮರದ ಹತ್ತಿರವಿರುವ ಮೊಸಳೆ (3)
15.ದಯೆಯಿಲ್ಲದ ಮಾತು (3)
16.ನಯನ ಇಲ್ಲಿ ಕಾಣುತ್ತಿದೆ (2)

ಮೇಲಿಂದ ಕೆಳಕ್ಕೆ

2.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
3.ಪ್ರತಿಬಿಂಬ ಇಲ್ಲಿ ಕಾಣುತ್ತಿದೆ (3)
4.ಸರಸದ ಮಾತುಕತೆ (3)
6.ತಾರ ನುಡಿಸಿದ ತಂತಿ ವಾದ್ಯ (3)
8.ಕಾಪಾಡುವವ ಇಲ್ಲಿದ್ದಾನೆ (3)
9.ಅಷ್ಟದಿಕ್ಪಾಲಕರಲ್ಲೊಬ್ಬ ಅತೀ ಶ್ರೀಮಂತ (3)
10.ಸುವರ್ಣ ಇಲ್ಲಿದೆ (3)
12.ರಾತ್ರಿಗೊಂದು ಪರ್ಯಾಯ ಪದ (3)
13.ಸವಿಯಾದುದು ಇಲ್ಲಿದೆ (3)
14.ಮಡಿವಾಳನಿವನು (3)



4692ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಓರಗಿತ್ತಿ 3.ಅನುಜ 4.ತಳವಾರ 6.ಪರ್ವ 7.ಸುತ 8.ನಟ 9.ಋಷಿ 10.ಕನ್ನ 11.ನೊಣ 13.ಆಮಳತ 15.ಬಡವ 16.ಮಹಾದ್ವಾರ

ಮೇಲಿಂದ ಕೆಳಕ್ಕೆ: 1.ಓಜಸ್ಸು 2.ತ್ತಿತ 3.ಅಗ್ನಿಶಾಮಕದಳ 5.ರಜತಮಹೋತ್ಸವ 6.ಪಟ 9.ಋಣ 12.ಅಂಬರ 14.ತಮ

ಸುಡೊಕು 5079

	5		7		2		8	
						3		4
	7	8	3		9		1	
1							2	3
	2							
8		7			1		5	9
2		3	9		6	5		8
	4	6		8			9	7
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5078 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಸುನಂದಾ ಪುಷ್ಕರ್ ಸಾವಿನ ಪ್ರಕರಣ: ಸಂಸದ ಶಶಿ ತರೂರ್ ಖುಲಾಸೆ


ಶಶಿ ತರೂರ್

ನವದೆಹಲಿ (ಪಿಟಿಐ): ತಮ್ಮ ಪತ್ನಿ ಸುನಂದಾ ಪುಷ್ಕರ್ ಸಾವಿನ ಪ್ರಕರಣದ ಆರೋಪ ಎದುರಿಸುತ್ತಿದ್ದ ಕಾಂಗ್ರೆಸ್ ನಾಯಕ ಶಶಿ ತರೂರ್ ಅವರನ್ನು ದೆಹಲಿ ಹೈಕೋರ್ಟ್ ಬುಧವಾರ ಖುಲಾಸೆಗೊಳಿಸಿದೆ.

ವಿಶೇಷ ನ್ಯಾಯಾಧೀಶೆ ಗೀತಾಂಜಲಿ ಗೋಯಲ್ ಅವರು ಬುಧವಾರ ವರ್ಚುವಲ್ ವಿಚಾರಣೆ ವೇಳೆ ಈ ಆದೇಶ ನೀಡಿದ್ದಾರೆ.

ಶಶಿ ತರೂರ್ ವಿರುದ್ಧ ಹಲವು ಆರೋಪಗಳನ್ನು ದಾಖಲಿಸುವಂತೆ ಪೊಲೀಸರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಆದರೆ, ಇದಕ್ಕೆ ವಿರೋಧ ವ್ಯಕ್ತಪಡಿಸಿದ ಶಶಿ ತರೂರ್ ಪರ ವಕೀಲ ವಿಕಾಸ್ ಪಹ್ವಾ,' ಈಗಾಗಲೇ ಎಸ್ಐಟಿ ಯು ಶಶಿ ತರೂರ್ ಅವರನ್ನು ಎಲ್ಲಾ ಆರೋಪಗಳಿಂದ ಮುಕ್ತಗೊಳಿಸಿದೆ' ಎಂದು ವಾದಿಸಿದರು.

2014ರ ಜನವರಿ 17ರಂದು ದೆಹಲಿಯ ಐಷಾರಾಮಿ ಹೋಟೆಲ್‌ನಲ್ಲಿ ಸುನಂದಾ ಪುಷ್ಕರ್ ಅವರ ಶವ ಪತ್ತೆಯಾಗಿತ್ತು. ಶಶಿ ತರೂರ್ ಅವರ ಅಧಿಕೃತ ಬಂಗಲೆ ನವೀಕರಣ ನಡೆಯುತ್ತಿದ್ದರಿಂದ ದಂಪತಿ ಹೋಟೆಲ್‌ನಲ್ಲಿ ತಂಗಿದ್ದರು.

ಇದಾದ ಬಳಿಕ ತರೂರ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದರು. ಆದರೆ, ಅವರನ್ನು ಬಂಧಿಸಿರಲಿಲ್ಲ. ಈ ಪ್ರಕರಣದಲ್ಲಿ ತರೂರ್ ಅವರಿಗೆ 2018ರ ಜುಲೈ 5ರಂದು ಜಾಮೀನು ಮಂಜೂರಾಗಿತ್ತು.

ಕೃತಜ್ಞತೆ ಸಲ್ಲಿಸಿದ ತರೂರ್: ನ್ಯಾಯಾಧೀಶರಿಗೆ ಕೃತಜ್ಞತೆ ಸಲ್ಲಿಸಿರುವ ತರೂರ್ ಅವರು, 'ಕಳೆದ ಏಳೂವರೆ ವರ್ಷಗಳಿಂದ ನಾನು ಚಿತ್ರಹಿಂಸೆ ಅನುಭವಿಸಿದ್ದೆ. ಈಗ ನನಗೆ ಸಮಾಧಾನ ತರಿಸಿದೆ' ಎಂದು ಹೇಳಿದ್ದಾರೆ. 'ಸುದೀರ್ಘ ಕಾಲದ ದುಃಸ್ವಪ್ನಕ್ಕೆ ಮಹತ್ವದ ತೀರ್ಪಿನ ಮೂಲಕ ಅಂತ್ಯ ದೊರೆತಿದೆ' ಎಂದಿದ್ದಾರೆ.

ಪ್ರಕಟಣೆಯೊಂದನ್ನು ಟ್ವೀಟ್ ಮಾಡಿರುವ ಅವರು, 'ಹತ್ತಾರು ಆಧಾರರಹಿತ ಆರೋಪಗಳನ್ನು ಮತ್ತು ಮಾಧ್ಯಮದ ನಿಂದನೆಯನ್ನು ತಾಳ್ಮೆಯಿಂದ ಎದುರಿಸಿದ್ದೇನೆ. ಭಾರತೀಯ ನ್ಯಾಯಾಂಗದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೆ. ಆ ನಂಬಿಕೆ ಇಂದು ಬಲವಾಗಿದೆ' ಎಂದು ಹೇಳಿದ್ದಾರೆ.

ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ, 'ಸತ್ಯವು ಯಾವಾಗಲೂ ಗೆಲ್ಲುತ್ತದೆ. ಅಸಂಬಂಧ ಹೇಳಿಕೆಗಳನ್ನು ನೀಡಿದ್ದ ಪ್ರಧಾನಿಯವರು ಕ್ಷಮೆ ಕೇಳುತ್ತಾರೆಯೇ? ಟಿ.ವಿ ನಿರೂಪಕರು ಚರ್ಚೆ ನಡೆಸಿ ಕ್ಷಮೆ ಕೇಳುತ್ತಾರೆಯೇ' ಎಂದು ಟ್ವಿಟರ್‌ನಲ್ಲಿ ಕೇಳಿದ್ದಾರೆ.

ಪೆಗಾಸಸ್: ಕೇಂದ್ರ, ಪ. ಬಂಗಾಳಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಸರ್ಕಾರ ತನಿಖಾ ಆಯೋಗ ರಚಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿ ಬಗ್ಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ ಮತ್ತು ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ಮುಖ್ಯನ್ಯಾಯಮೂರ್ತಿ ಎನ್. ವಿ. ರಮಣ ನೇತೃತ್ವದ ಪೀಠವು ಈ ಸಂಬಂಧ ಕೇಂದ್ರ ಮತ್ತು ಪಶ್ಚಿಮ ಬಂಗಾಳ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದ್ದು, ಮುಂದಿನ ವಿಚಾರಣೆಯನ್ನು ಆ. 25ರಂದು ನಡೆಸುವುದಾಗಿ ಹೇಳಿದೆ.

ಅರ್ಜಿದಾರರ ಪರ ವಕೀಲ ಸೌರಭ್ ಮಿಶ್ರಾ ಹಾಜರಿದ್ದರು. ಪಶ್ಚಿಮ ಬಂಗಾಳ ಸರ್ಕಾರವು ಕಳೆದ ತಿಂಗಳು ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಆಯೋಗ ರಚಿಸಿತ್ತು.

ಕೇಂದ್ರ ಒಪ್ಪಿಕೊಂಡಿದೆ: 'ಗೂಢಚರ್ಯೆ ಸಾಫ್ಟ್‌ವೇರ್ ಬಳಸಿರುವುದನ್ನು ಕೇಂದ್ರ ಸರ್ಕಾರವೇ ಒಪ್ಪಿಕೊಳ್ಳುತ್ತಿದೆ' ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ಪಿ. ಚಿದಂಬರಂ ಬುಧವಾರ ಹೇಳಿದ್ದಾರೆ.

'ಸರ್ಕಾರಕ್ಕೆ ಗೊತ್ತಿರುವ ಮಾಹಿತಿಯನ್ನು ಪ್ರಮಾಣಪತ್ರದ ಮೂಲಕ ಸಾರ್ವಜನಿಕವಾಗಿ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಸಾಲಿಸಿಟರ್ ಜನರಲ್ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ. ಹೀಗಾಗಿ, ಸಾಫ್ಟ್‌ವೇರ್ ಬಳಸಿರುವುದನ್ನು ಒಪ್ಪಿಕೊಂಡಂತಾಗಿದೆ' ಎಂದು ಅವರು ಹೇಳಿದ್ದಾರೆ.

ಪಟ್ಟಿಯಲ್ಲಿ ಮೂವರು ಮಹಿಳಾ ನ್ಯಾಯಮೂರ್ತಿಗಳ ಹೆಸರು

ಓಕಾ ಸೇರಿ 9 ಹೆಸರು 'ಸುಪ್ರೀಂ'ಗೆ ಶಿಫಾರಸು

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲು 9 ಜನರ ಹೆಸರನ್ನು, ಸುಪ್ರೀಂ ಕೋರ್ಟ್ ಕೊಲಿಜಿಯಂ ಬುಧವಾರ ಶಿಫಾರಸು ಮಾಡಿದೆ. ಇದರಲ್ಲಿ ವಿವಿಧ ಹೈಕೋರ್ಟ್‌ನ ಮೂವರು ಮಹಿಳಾ ನ್ಯಾಯಮೂರ್ತಿಗಳ ಹೆಸರೂ ಇದೆ.

'ಆಗಸ್ಟ್ 17ರಂದು ನಡೆದ ಕೊಲಿಜಿಯಂ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ದೇಶದ ಬೇರೆ-ಬೇರೆ ಹೈಕೋರ್ಟ್‌ನ 9 ಜನರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲು ಶಿಫಾರಸು ಮಾಡಲಾಗಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ ಓಕಾ ಮತ್ತು ನ್ಯಾಯಮೂರ್ತಿ ಬಿ.ವಿ. ನಾಗರತ್ನ, ಕೇರಳ ಹೈಕೋರ್ಟ್‌ನ ನ್ಯಾಯಮೂರ್ತಿ ಸಿ.ಟಿ.ರವಿಕುಮಾರ್, ಮದ್ರಾಸ್ ಹೈಕೋರ್ಟ್‌ನ ಎಂ.ಎಂ. ಸುಂದ್ರೇಶ್, ಗುಜರಾತ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಕ್ರಂನಾಥ್ ಮತ್ತು ನ್ಯಾಯಮೂರ್ತಿ ಬೇಲಾ ತ್ರಿವೇದಿ, ಸಿಕ್ಕಿಂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಜಿತೇಂದ್ರ ಕುಮಾರ್ ಮಹೇಶ್ವರಿ, ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರನ್ನು ಕೊಲಿಜಿಯಂ ಶಿಫಾರಸು ಮಾಡಿದೆ.

ನಾಗರತ್ನ ಅವರ ಹೆಸರಿಗೆ ಅನುಮೋದನೆ ಸಿಕ್ಕರೆ 2027ರಲ್ಲಿ ಇವರು ಸುಪ್ರೀಂ ಕೋರ್ಟ್‌ನ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಆಗಲಿದ್ದಾರೆ.

ನಾಗರತ್ನ ಅವರು ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟ ರಾಮಯ್ಯ ಅವರ ಮಗಳು.

ಹಿರಿಯ ವಕೀಲ ಮತ್ತು ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಪಿ.ಎಸ್.ನರಸಿಂಹ ಅವರನ್ನು ಕೊಲಿಜಿಯಂ ಶಿಫಾರಸು ಮಾಡಿದೆ. ನರಸಿಂಹ ಅವರು ನೇಮಕವಾದರೆ ಅವರು, ವಕೀಲರಿಂದಲೇ ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾದ ಆರನೇ ವ್ಯಕ್ತಿ ಎನಿಸಿಕೊಳ್ಳಲಿದ್ದಾರೆ.

ನ್ಯಾಯಮೂರ್ತಿ ನೇಮಕ: ಊಹಾಪೋಹಕ್ಕೆ ಅತೃಪ್ತಿ



ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಅಧಿಕೃತವಾಗಿ ಪ್ರಕಟಿಸುವ ಮುನ್ನವೇ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಬಡ್ತಿ ಪಡೆಯಲಿರುವ ಒಂಬತ್ತು ನ್ಯಾಯಮೂರ್ತಿಗಳ ನೇಮಕಾತಿ ಬಗ್ಗೆ ಮಾಧ್ಯಮಗಳು ವರದಿ ಮಾಡಿರುವುದಕ್ಕೆ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕೊಲಿಜಿಯಂ ಶಿಫಾರಸು ಮಾಡಿದ್ದಾಗಿ ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಯು ಊಹಾಪೋಹದ್ದು. ಅಷ್ಟೇ ಅಲ್ಲ. ಬೇಜವಾಬ್ದಾರಿಯಿಂದಲೂ ಕೂಡಿದೆ. ಇಂತಹ ವರದಿಗಳು, ಅರ್ಹ ಪ್ರತಿಭೆಗಳಿಗೆ ದಕ್ಕಬಹುದಾಗಿದ್ದ ಅವಕಾಶಗಳನ್ನೂ ಹಾಳು ಮಾಡುತ್ತವೆ. ಇಂಥ ವರದಿಗಳು ಪ್ರಕಟವಾಗಿದ್ದು ದುರದೃಷ್ಟಕರ' ಎಂದಿರುವ ಅವರು, ಇದರಿಂದ ತಮಗೆ ತೀವ್ರ ಬೇಸರವಾಗಿದೆ ಎಂದು ಹೇಳಿದರು.

ಬುಧವಾರ ನಿವೃತ್ತಿಯಾದ, ನ್ಯಾಯಮೂರ್ತಿ ನವೀನ್ ಸಿನ್ಹಾ ಅವರ ಬೀಳ್ಕೊಡುವ ಕಾರ್ಯಕ್ರಮದಲ್ಲಿ ಮಾತನಾಡಿದ ರಮಣ, 'ನ್ಯಾಯಮೂರ್ತಿಗಳ ನೇಮಕಾತಿ ಪ್ರಕ್ರಿಯೆ ಪವಿತ್ರವಾಗಿದ್ದು ಅದಕ್ಕೆ ಅದರದ್ದೇ ಆದ ಘನತೆ ಇದೆ. ಮಾಧ್ಯಮಗಳು ಅದರ ಪಾವಿತ್ರ್ಯವನ್ನು ಅರ್ಥಮಾಡಿಕೊಂಡು ನಡೆಯಬೇಕು' ಎಂದರು.

'ಸಿಬಿಐ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲಿ'

ಮದುರೈ (ಪಿಟಿಐ): 'ಕೇಂದ್ರ ತನಿಖಾ ದಳವು (ಸಿಬಿಐ) ಸರ್ಕಾರದ ನಿಯಂತ್ರಣಕ್ಕೊಳಪಡದೇ ಸ್ವತಂತ್ರವಾಗಿ ತನ್ನ ಕಾರ್ಯ ನಿರ್ವಹಿಸಬೇಕು. ಸಿಬಿಐನ ನಿರ್ದೇಶಕರಿಗೆ ನೇರವಾಗಿ ಪ್ರಧಾನಿಗೆ ವರದಿ ಮಾಡಿಕೊಳ್ಳುವ ವಿಶೇಷ ಅಧಿಕಾರ ನೀಡಬೇಕು' ಎಂದು ಬುಧವಾರ ಮದ್ರಾಸ್ ಹೈಕೋರ್ಟ್ ಹೇಳಿದೆ.

ರಾಮನಾಥಪುರಂ ಜಿಲ್ಲೆಯಲ್ಲಿ ನಡೆದ ₹ 300 ಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಪ್ರಕರಣದ ವಿಚಾರಣೆ ವೇಳೆ, ನ್ಯಾಯಮೂರ್ತಿಗಳಾದ ಕೆ. ಕಿರುಬಾಕರನ್ ಮತ್ತು ಪಿ. ಪುಗಲೆಂದಿ ಅವರನ್ನೊಳಗೊಂಡ ನ್ಯಾಯಪೀಠವು, 'ಸಿಬಿಐ ಸ್ವತಂತ್ರವಾಗಿರಬೇಕು ಮತ್ತು ಅದು ಯಾವುದೇ ಸರ್ಕಾರದ ನಿಯಂತ್ರಣಕ್ಕೊಳಪಡದೇ ಸ್ವಾಯತ್ತವಾಗಿ ಕಾರ್ಯ ನಿರ್ವಹಿಸಬೇಕು' ಎಂದು ಹೇಳಿದೆ.

'ಸಿಬಿಐಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು 6 ವಾರಗಳೊಳಗೆ ಕಲ್ಪಿಸಬೇಕು' ಎಂದೂ ಪೀಠ ಹೇಳಿದೆ.

ಸಿಬಿಐ ತನಿಖೆ: ಮಹಾರಾಷ್ಟ್ರದ ಅರ್ಜಿ ವಜಾ

ನವದೆಹಲಿ (ಪಿಟಿಐ): ಅನಿಲ್ ದೇಶಮುಖ್ ಅವರು ಮಹಾರಾಷ್ಟ್ರದ ಗೃಹ ಸಚಿವರಾಗಿದ್ದ ಅವಧಿಯಲ್ಲಿ ನಡೆದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ವರ್ಗಾವಣೆ ಮತ್ತು ಹುದ್ದೆ ನಿಯೋಜನೆಗೆ ಸಂಬಂಧಿಸಿದಂತೆ ಸಿಬಿಐ ಕೈಗೊಂಡಿರುವ ತನಿಖೆ ವಿರುದ್ಧ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಈ ಬಗ್ಗೆ ಬಾಂಬೆ ಹೈಕೋರ್ಟ್ ಜುಲೈ 22ರಂದು ನೀಡಿರುವ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರನ್ನೊಳಗೊಂಡ ಪೀಠವು ತಿಳಿಸಿತು.

'ಆರೋಪಕ್ಕೆ ಸಂಬಂಧಿಸಿದ ಎಲ್ಲ ಅಂಶಗಳ ಬಗ್ಗೆಯೂ ಸಿಬಿಐ ಸಮಗ್ರವಾಗಿ ತನಿಖೆ ಮಾಡಬೇಕು. ಸೀಮಿತ ವಿಷಯಗಳ ಬಗ್ಗೆ ಮಾತ್ರ ತನಿಖೆ ಕೈಗೊಳ್ಳುವಂತೆ ಸಿಬಿಐ ಅನ್ನು ನಿಯಂತ್ರಿಸುವುದಿಲ್ಲ. ಹೈಕೋರ್ಟ್ ಆದೇಶ ಪಾಲಿಸಬೇಕು. ಇಲ್ಲದಿದ್ದರೆ, ಸಾಂವಿಧಾನಿಕ ನ್ಯಾಯಾಲಯದ ಅಧಿಕಾರವನ್ನು ಕಡಿಮೆ ಮಾಡಿದಂತಾಗುತ್ತದೆ' ಎಂದು ಪೀಠವು ಅಭಿಪ್ರಾಯಪಟ್ಟಿತು.

'ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ವರ್ಗಾವಣೆ ಹಾಗೂ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದ ಸಚಿನ್ ವಾಜೆ ಮರುನೇಮಕಕ್ಕೆ ಸಂಬಂಧಿಸಿದಂತೆ ತನಿಖೆಗೆ ಅವಕಾಶ ನೀಡುತ್ತಿಲ್ಲ. ಈ ಮೂಲಕ ರಾಜ್ಯ ಸರ್ಕಾರವು ಮಾಜಿ ಗೃಹ ಸಚಿವರನ್ನು ರಕ್ಷಿಸುತ್ತಿದೆ ಎನ್ನುವ ಭಾವನೆ ಸೃಷ್ಟಿಯಾಗುತ್ತಿದೆ' ಎಂದು ಪೀಠವು ಹೇಳಿದೆ.

ರಾಜ್ ಕುಂದ್ರಾಗೆ ಮಧ್ಯಂತರ ರಕ್ಷಣೆ ನೀಡಿದ ಹೈಕೋರ್ಟ್


ರಾಜ್ ಕುಂದ್ರಾ

ಮುಂಬೈ (ಪಿಟಿಐ): 2020ರಲ್ಲಿನ ಅಶ್ಲೀಲ ಚಿತ್ರಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಉದ್ಯಮಿ ರಾಜ್ ಕುಂದ್ರಾ ಅವರನ್ನು ಬಂಧಿಸದಂತೆ ಬಾಂಬೆ ಹೈಕೋರ್ಟ್ ಬುಧವಾರ ಮಧ್ಯಂತರ ರಕ್ಷಣೆ ನೀಡಿದೆ.

ನಗರ ಪೊಲೀಸರು ಈ ಬಗ್ಗೆ ಪ್ರಕರಣ ದಾಖಲಿಸಿದ್ದರು. ಕುಂದ್ರಾ ಅವರು ಸಲ್ಲಿಸಿರುವ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಆಗಸ್ಟ್ 25ಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಮೂರ್ತಿ ಎಸ್.ಕೆ. ಶಿಂಧೆ ಅವರು ಪೊಲೀಸರಿಗೆ ಸೂಚಿಸಿದ್ದಾರೆ.

'ಪೊಲೀಸರು ಪ್ರತಿಕ್ರಿಯೆ ಸಲ್ಲಿಸುವವರೆಗೆ, ಅಂದರೆ ಆಗಸ್ಟ್ 25ರವರೆಗೆ ಮಧ್ಯಂತರ ರಕ್ಷಣೆ ನೀಡಲಾಗಿದೆ' ಎಂದು ನ್ಯಾಯಮೂರ್ತಿ ಶಿಂಧೆ ತಿಳಿಸಿದ್ದಾರೆ.

ಮಹಾರಾಜಾ ರಂಜಿತ್ ಸಿಂಗ್ ಪ್ರತಿಮೆ ಧ್ವಂಸ: ಪ್ರತಿಭಟನೆ


ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿ ಮಹಾರಾಜ ರಂಜಿತ್ ಸಿಂಗ್ ಪ್ರತಿಮೆ ಧ್ವಂಸಗೊಳಿಸಿರುವುದನ್ನು ಖಂಡಿಸಿ ದೆಹಲಿಯ ಪಾಕ್ ಹೈಕಮಿಷನರ್ ಕಚೇರಿ ಬಳಿ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ಕ್ಷಮೆ ಕೇಳುವಂತೆ ಆಗ್ರಹಿಸಿ, ಯುವ ಮೋರ್ಚಾ, ಪೂರ್ವಾಂಚಲ್ ಮೋರ್ಚಾ ಮತ್ತು ಬಿಜೆಪಿ ದೆಹಲಿಯ ಸಿಖ್ ಘಟಕದ ಮುಖಂಡರು ಮತ್ತು ಕಾರ್ಯಕರ್ತರು ಘೋಷಣೆಗಳನ್ನು ಕೂಗಿದರು.

'ಇಮ್ರಾನ್ ಖಾನ್ ಅವರು ಹಿಂದೂ ಮತ್ತು ಸಿಖ್ಖರ ಮೇಲಿನ ಕಿರುಕುಳ ನಿಲ್ಲಿಸುವ ಜೊತೆಗೆ ದೇಗುಲ ಮತ್ತು ವಿಗ್ರಹಗಳನ್ನು ಅಪವಿತ್ರಗೊಳಿಸುವುದಿಲ್ಲ ಎಂಬ ಭರವಸೆಯನ್ನು ನೀಡಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಲಾಹೋರ್ ಕೋಟೆಯಲ್ಲಿದ್ದ ಸಿಖ್ ದೊರೆ ಮಹಾರಾಜ ರಂಜಿತ್ ಸಿಂಗ್ ಅವರ ಪ್ರತಿಮೆಯನ್ನು ಮಂಗಳವಾರ ಧ್ವಂಸಗೊಳಿಸಲಾಗಿತ್ತು.

ಷೇರುಪೇಟೆ ವಹಿವಾಟು 163



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,614
ಇಂದಿನ ಅಂತ್ಯ	16,568
▼	46
ದಿನದ ಕನಿಷ್ಠ	16,535

ವಿನಿಮಯ ದರ

$ ಡಾಲರ್	74.24
£ ಪೌಂಡ್	102.06
€ ಯುರೊ	86.98
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1525 (1530)
ಸೋಯಾ (ರಿಫೈನ್ಡ್)	₹1400 (1412)
ಸೂರ್ಯಕಾಂತಿ (ರಿಫೈನ್ಡ್)	₹1490(1500)
ಪಾಮೋಲಿನ್	₹1272 (1290)

ಬೆಂಗಳೂರು ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1800-2000
ಮಧ್ಯಮ	₹1500-1800
ಸಣ್ಣ	₹1000-1500

ಎಲ್‌ಪಿಜಿ ಬೆಲೆ ಏರಿಕೆ



ನವದೆಹಲಿ (ಪಿಟಿಐ): ಮನೆಗಳಲ್ಲಿ ಬಳಸುವ ಅಡುಗೆ ಅನಿಲ (ಎಲ್‌ಪಿಜಿ) ದರವನ್ನು 14.2 ಕೆ.ಜಿ.ಯ ಸಿಲಿಂಡರ್‌ಗೆ ₹ 25ರಂತೆ ಹೆಚ್ಚಿಸಲಾಗಿದೆ. ಹಿಂದಿನ ತಿಂಗಳಲ್ಲಿಯೂ ಎಲ್‌ಪಿಜಿ ಬೆಲೆ ಹೆಚ್ಚಳ ಆಗಿತ್ತು. ಈಗಿನ ಹೆಚ್ಚಳದ ನಂತರ ಬೆಂಗಳೂರಿನಲ್ಲಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 862 ಆಗಿದೆ.

ಜುಲೈ 1ರಂದು ಎಲ್‌ಪಿಜಿ ಬೆಲೆಯನ್ನು ₹ 25ರಷ್ಟು ಹೆಚ್ಚಿಸಲಾಗಿತ್ತು. ವಾಣಿಜ್ಯ ಬಳಕೆಯ (19 ಕೆ.ಜಿ. ತೂಕದ) ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಆಗಸ್ಟ್ 1ರಂದು ಹೆಚ್ಚಿಸಲಾಗಿತ್ತು. ಆದರೆ ಆಗ, ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ ಜಾಸ್ತಿ ಮಾಡಿರಲಿಲ್ಲ.

ಈಗ ಮಾಡಿರುವ ಬೆಲೆ ಹೆಚ್ಚಳವನ್ನೂ ಪರಿಗಣಿಸಿದರೆ, ಜನವರಿ 1ರ ನಂತರ ಆಗಿರುವ ಒಟ್ಟು ಬೆಲೆ ಹೆಚ್ಚಳವು ₹ 165 ಆಗಿದೆ. ಕಳೆದ ಏಳು ವರ್ಷಗಳ ಅವಧಿಯಲ್ಲಿ ಎಲ್‌ಪಿಜಿ ಸಿಲಿಂಡರ್ ಬೆಲೆಯು ಎರಡು ಪಟ್ಟಿಗಿಂತ ಹೆಚ್ಚಾಗಿದೆ. 2014ರ ಮಾರ್ಚ್ 1ರಂದು 14.2 ಕೆ.ಜಿ. ಸಿಲಿಂಡರ್ ಬೆಲೆಯು ₹ 410.5 ಆಗಿತ್ತು.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಬುಧವಾರ ಡೀಸೆಲ್ ಬೆಲೆಯನ್ನು ಲೀಟರಿಗೆ ಗರಿಷ್ಠ 21 ಪೈಸೆಯವರೆಗೆ ತಗ್ಗಿಸಿವೆ. ಪೆಟ್ರೋಲ್ ಬೆಲೆಯಲ್ಲಿ ಬದಲಾವಣೆ ಆಗಿಲ್ಲ.

ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ ಮಾಹಿತಿ

ಕೈಗಾರಿಕೆಗಾಗಿ ಮತ್ತೆ ಭೂ ಬ್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂ ಬ್ಯಾಂಕ್' ಪರಿಕಲ್ಪನೆಯನ್ನು ಮರು ಆರಂಭಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ' ಎಂದು ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ ತಿಳಿಸಿದರು.

'ಪ್ರಜಾವಾಣಿ' ಜೊತೆ ಬುಧವಾರ ಮಾತನಾಡಿದ ಅವರು, 'ಹಲವು ಯೋಜನೆಗಳು ಭೂಮಿ ಸಿಗದೇ ಇರುವುದರಿಂದ ಆರಂಭವಾಗುವುದೇ ಇಲ್ಲ. ಹೀಗಾಗಿ, ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಭೂ ಬ್ಯಾಂಕ್ ಪರಿಕಲ್ಪನೆ ಅಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

'ಈ ಹಿಂದೆ ನಾನು ಕೈಗಾರಿಕೆ ಸಚಿವನಾಗಿದ್ದಾಗ ಭೂ ಬ್ಯಾಂಕ್ ಯೋಜನೆ ಆರಂಭಿಸಿದ್ದೆ. ಅದನ್ನು ಮುಂದುವರಿಸಲು ನಾವು ಪ್ರಯತ್ನಿಸಿದರೂ, ಬಳಿಕ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಸರ್ಕಾರ ಮುಂದುವರಿಸಲಿಲ್ಲ. ಹಿಂದೆ, ಕೈಗಾರಿಕೆಗಳ ಸ್ಥಾಪನೆ ಉದ್ದೇಶಕ್ಕಾಗಿ 1.25 ಲಕ್ಷ ಎಕರೆ ಕೃಷಿ ಮಾಡದ ಭೂಮಿಯನ್ನು ರೈತರಿಂದ ಸರ್ಕಾರ ಖರೀದಿಸಿತ್ತು' ಎಂದರು.



ಮುರುಗೇಶ್ ನಿರಾಣಿ

'ರಾಜ್ಯಕ್ಕೆ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು, ಕೈಗಾರಿಕೆಗಳ ಸ್ಥಾಪನೆಯ ಉದ್ದೇಶಕ್ಕೆಂದೇ ಮೀಸಲಿಟ್ಟ ಭೂಮಿ ನಮ್ಮಲ್ಲಿ ಇರಬೇಕು. ಈ ಕಾರಣಕ್ಕೆ, ಲಭ್ಯ ಭೂಮಿಯ ಬಗ್ಗೆ ಜಿಲ್ಲಾವಾರು ಮಾಹಿತಿ ಸಂಗ್ರಹಿಸಲಾಗುತ್ತಿದೆ. ಆ ಬಳಿಕ, ಅಗತ್ಯವಾದ ಭೂಮಿಯ ಬಗ್ಗೆ ತೀರ್ಮಾನಕ್ಕೆ ಬರಲಾಗುವುದು. ದಿನದಿಂದ ದಿನಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ಕಷ್ಟದ ಕೆಲಸ ಆಗುತ್ತಿದೆ.

ಮುಖ್ಯಾಂಶಗಳು
- ಭೂಮಿ ಲಭ್ಯ ಇರುವ ಬಗ್ಗೆ ಜಿಲ್ಲಾವಾರು ಮಾಹಿತಿ ಸಂಗ್ರಹ
- ಬಂಡವಾಳ ಹೂಡಿಕೆದಾರರ ವಿಶ್ವಾಸ ಹೆಚ್ಚಿಸಲು ಕ್ರಮ: ನಿರಾಣಿ
- '2022ರ ಮಾರ್ಚ್‌ನಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ'

ಹೀಗಾಗಿ, ಕೈಗಾರಿಕೆಗಳ ಸ್ಥಾಪನೆಗೆ ಅಗತ್ಯವಾದ ಭೂಮಿ ನಮ್ಮಲ್ಲಿ ಲಭ್ಯವಿದೆ ಎಂಬ ಭಾವನೆಯನ್ನು ಹೂಡಿಕೆದಾರರಲ್ಲಿ ಮೂಡಿಸಬೇಕಿದೆ' ಎಂದೂ ಅವರು ಹೇಳಿದರು.

2022ರ ಮಾರ್ಚ್‌ನಲ್ಲಿ ಸಮಾವೇಶ: 'ರಾಜ್ಯದ ಮಹತ್ವಾಕಾಂಕ್ಷಿ ಕಾರ್ಯಕ್ರಮವಾದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು 2022ರ ಮಾರ್ಚ್‌ನಲ್ಲಿ ಆಯೋಜಿಸುವ ಚಿಂತನೆ ಇದೆ. ಕೋವಿಡ್ ಕಾರಣದಿಂದ, ಈ ವರ್ಷ ಸಮಾವೇಶ ನಡೆಸಲು ಸಾಧ್ಯವಾಗಿಲ್ಲ. ಈ ಸಮಾವೇಶದ ವೇಳೆಗೆ ಭೂಮಿ, ಸ್ಪರ್ಧಾತ್ಮಕ ದರದಲ್ಲಿ ವಿದ್ಯುತ್ ಮತ್ತು ಇತರ ಮೂಲಸೌಲಭ್ಯಗಳ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳಬೇಕಿದೆ' ಎಂದು ಹೇಳಿದರು.

'ಯೋಜನೆಗಳಿಗೆ ಸರ್ಕಾರ ಅನುಮೋದನೆ ಪಡೆದ ತಕ್ಷಣ, ಆ ಯೋಜನೆಯ ಹೂಡಿಕೆದಾರರನ್ನು ಬ್ಯಾಂಕುಗಳು ನೇರವಾಗಿ ಸಂಪರ್ಕಿಸಲು ಸಾಧ್ಯವಾಗುವಂಥ ವ್ಯವಸ್ಥೆಯನ್ನು ಇಲಾಖೆ ಶೀಘ್ರದಲ್ಲಿ ರೂಪಿಸಲಿದೆ. ಆ ಮೂಲಕ, ಹೂಡಿಕೆದಾರರ ವಿಶ್ವಾಸ ಹೆಚ್ಚಿಸಲು ಕೂಡಾ ಪ್ರಯತ್ನಿಸಲಾಗುವುದು' ಎಂದೂ ನಿರಾಣಿ ತಿಳಿಸಿದರು.

ಟಾಟಾ 'ಟಿಗಾರ್ ಇವಿ' ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯು ಜಿಪ್‌ಟ್ರಾನ್ ತಂತ್ರಜ್ಞಾನದ ಬಳಕೆ ಇರುವ 'ಟಿಗಾರ್ ಇವಿ'ಯನ್ನು ಬುಧವಾರ ಅನಾವರಣ ಮಾಡಿದೆ.

ವಿದ್ಯುತ್ ಚಾಲಿತ ವೈಯಕ್ತಿಕ ವಾಹನ ವಿಭಾಗದಲ್ಲಿ 'ನೆಕ್ಸಾನ್ ಇವಿ' ಬಳಿಕ ಗ್ರಾಹಕರ ಮುಂದೆ ಇರಿಸಿರುವ ಎರಡನೇ ಮಾದರಿ ಇದಾಗಿದೆ ಎಂದು ಕಂಪನಿಯು ಹೇಳಿಕೊಂಡಿದೆ.

ಕಂಪನಿಯು ತನ್ನ ಆಯ್ದ ವಿತರಣಾ ಕೇಂದ್ರಗಳಲ್ಲಿ ಬುಧವಾರದಿಂದ 'ಟಿಗಾರ್ ಇವಿ' ಬುಕಿಂಗ್ ಆರಂಭಿಸಿದೆ. ₹ 21 ಸಾವಿರ ಪಾವತಿಸಿ ಈ ಕಾರು ಬುಕ್ ಮಾಡಬಹುದು. ಆಗಸ್ಟ್ 31ರಿಂದ ಗ್ರಾಹಕರಿಗೆ ವಿತರಣೆ ಶುರುವಾಗುವ ನಿರೀಕ್ಷೆ ಇದೆ.

ತಂತ್ರಜ್ಞಾನ, ಆರಾಮ ಮತ್ತು ಸುರಕ್ಷತೆಯ ಆಧಾರದ ಮೇಲೆ ಇದನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

'ವಿದ್ಯುತ್ ಚಾಲಿತ ವಾಹನಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದರಿಂದ ಇಂತಹ ವಾಹನ ಖರೀದಿಸಲು ಬಯಸುವವರಿಗೆ ಬಗೆಬಗೆಯ ಆಯ್ಕೆಗಳನ್ನು ನೀಡುವುದು ಅತ್ಯವಶ್ಯಕ' ಎಂದು ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನ ವಿಭಾಗದ ಉಪಾಧ್ಯಕ್ಷ ಆನಂದ್ ಕುಲಕರ್ಣಿ ಹೇಳಿದ್ದಾರೆ.



ಟಿಗಾರ್ ಇವಿ

26 ಕಿಲೊವಾಟ್ ಲೀಥಿಯಂ ಅಯಾನ್ ಬ್ಯಾಟರಿ ಪ್ಯಾಕ್ ಈ ಕಾರಿನಲ್ಲಿ ಇದ್ದು, ಎಂಟು ವರ್ಷಗಳ ಬ್ಯಾಟರಿ ಮತ್ತು ಮೋಟರ್ ವಾರಂಟಿ ಇದೆ ಎಂದು ಕಂಪನಿ ತಿಳಿಸಿದೆ.

ರಿಮೋಟ್ ಕಮಾಂಡ್ಸ್ ಮತ್ತು ರಿಮೋಟ್ ಡಯಾಗ್ನಸ್ಟಿಕ್ಸ್ ಒಳಗೊಂಡು 30ಕ್ಕೂ ಅಧಿಕ ವೈಶಿಷ್ಟ್ಯಗಳು ಈ ಕಾರಿನಲ್ಲಿವೆ. ಗ್ರಾಹಕರು ಸ್ಮಾರ್ಟ್‌ಫೋನ್ ಮೂಲಕ ತಮ್ಮ ಕಾರಿನೊಂದಿಗೆ ಸಂಪರ್ಕದಲ್ಲಿ ಇರಬಹುದಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಪರಿಷ್ಕೃತ ನಿಯಮಗಳು 2022ರ ಜನವರಿ 1ರಿಂದ ಜಾರಿಗೆ: ಆರ್‌ಬಿಐ

ಬ್ಯಾಂಕ್ ಲಾಕರ್: ಹೊಸ ನಿಯಮ

ಮುಂಬೈ (ಪಿಟಿಐ): ಬ್ಯಾಂಕ್ ಲಾಕರ್‌ಗಳಿಗೆ ಅನ್ವಯವಾಗುವ ಪರಿಷ್ಕೃತ ನಿಯಮಗಳನ್ನು ಆರ್‌ಬಿಐ ಬುಧವಾರ ಹೊರಡಿಸಿದೆ. ಇದರ ಅನ್ವಯ, ಅಗ್ನಿ ಅನಾಹುತ, ಕಳ್ಳತನ, ಕಟ್ಟಡ ಕುಸಿತ ಅಥವಾ ಬ್ಯಾಂಕ್‌ನ ಸಿಬ್ಬಂದಿಯಿಂದ ವಂಚನೆ ನಡೆದಲ್ಲಿ ಬ್ಯಾಂಕ್‌ಗಳು ಭರಿಸಬೇಕಾದ ಮೊತ್ತವು ಲಾಕರ್‌ನ ವಾರ್ಷಿಕ ಬಾಡಿಗೆ ಮೊತ್ತದ ನೂರು ಪಟ್ಟು ಮೊತ್ತಕ್ಕೆ ಸೀಮಿತ ಆಗಲಿದೆ.

ಪರಿಷ್ಕೃತ ನಿಯಮಗಳು 2022ರ ಜನವರಿ 1ರಿಂದ ಜಾರಿಗೆ ಬರಲಿವೆ. ಇದರ ಅಡಿಯಲ್ಲಿ, ಅಕ್ರಮವಾದ ಅಥವಾ ಅಪಾಯಕಾರಿಯಾದ ಯಾವುದೇ ವಸ್ತುವನ್ನು ಲಾಕರ್‌ನಲ್ಲಿ ಇರಿಸುವುದಿಲ್ಲ ಎಂಬ ಒಪ್ಪಂದಕ್ಕೆ ಬ್ಯಾಂಕ್‌ಗಳು ಲಾಕರ್ ಸೌಲಭ್ಯ ಪಡೆಯುವವರಿಂದ ಸಹಿ ಮಾಡಿಸಿಕೊಳ್ಳಬೇಕಾಗುತ್ತದೆ. ಹೊಸ ನಿಯಮಗಳು ಈಗಾಗಲೇ ಇರುವ ಲಾಕರ್‌ಗಳಿಗೂ, ಹೊಸ ಲಾಕರ್‌ಗಳಿಗೂ ಅನ್ವಯವಾಗಲಿದೆ.



ಬ್ಯಾಂಕ್‌ಗಳು ಲಾಕರ್ ಹಂಚಿಕೆ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು ಎಂದು ಆರ್‌ಬಿಐ ಹೇಳಿದೆ. 'ಹಂಚಿಕೆ ಮಾಡಲು ಲಾಕರ್‌ಗಳು ಲಭ್ಯವಿಲ್ಲದಿದ್ದರೆ, ಲಾಕರ್ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿದವರಿಗೆ, ಅರ್ಜಿ ಸ್ವೀಕೃತಿ ಪತ್ರ ನೀಡಬೇಕು, ಕಾಯುವಿಕೆ ಸಂಖ್ಯೆಯನ್ನು ಕೂಡ ಅವರಿಗೆ ನೀಡಬೇಕು' ಎಂದು ಪರಿಷ್ಕೃತ ನಿಯಮಗಳಲ್ಲಿ ಹೇಳಲಾಗಿದೆ.

'ಯಾವುದೇ ಪ್ರಾಕೃತಿಕ ವಿಕೋಪದಿಂದಾಗಿ, ಭೂಕಂಪ, ಪ್ರವಾಹ, ಸಿಡಿಲು ಅಥವಾ ಮನುಷ್ಯನ ನಿಯಂತ್ರಣಕ್ಕೆ ಮೀರಿದ ಸಂಗತಿಗಳಿಂದಾಗಿ, ಗ್ರಾಹಕನ ಪೂರ್ಣ ಅಜಾರೂಕತೆಯಿಂದಾಗಿ ಲಾಕರ್‌ನಲ್ಲಿ ಇರಿಸಿದ ವಸ್ತುವಿಗೆ ಹಾನಿಯಾದರೆ ಬ್ಯಾಂಕ್ ಹೊಣೆಗಾರ ಅಲ್ಲ' ಎಂದು ಸ್ಪಷ್ಟಪಡಿಸಲಾಗಿದೆ. ಆದರೆ, ಲಾಕರ್ ಇರುವ ಸ್ಥಳದ ಸುರಕ್ಷತೆಯ ಮೇಲೆ ನಿಗಾ ಇಡಬೇಕಾಗಿರುವುದು ಬ್ಯಾಂಕ್‌ನ ಹೊಣೆ ಎಂದು ಹೇಳಲಾಗಿದೆ.

ಮುಖ್ಯಾಂಶಗಳು
- ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಆರ್‌ಬಿಐ ಸೂಚನೆ
- 'ಅಪಾಯಕಾರಿ ವಸ್ತು ಇಡದಂತೆ ಒಪ್ಪಂದಕ್ಕೆ ಸಹಿ ಪಡೆಯಬೇಕು'

'ಗ್ರಾಹಕರ ವಿಚಾರದಲ್ಲಿ ತಮಗೆ ಯಾವುದೇ ಹೊಣೆ ಇಲ್ಲವೆಂದು ಬ್ಯಾಂಕ್‌ಗಳು ಹೇಳುವಂತಿಲ್ಲ. ಅಗ್ನಿ ಅನಾಹುತ, ಕಳ್ಳತನ ಅಥವಾ ಬ್ಯಾಂಕ್ ಸಿಬ್ಬಂದಿಯಿಂದ ವಂಚನೆ ನಡೆದಲ್ಲಿ ಬ್ಯಾಂಕ್ ಹೊಣೆ ಹೊರಬೇಕಾಗುತ್ತದೆ. ಆ ಹೊಣೆಯು ಲಾಕರ್‌ನ ಅಂದಿನ ವಾರ್ಷಿಕ ಬಾಡಿಗೆ ಮೊತ್ತದ ನೂರುಪಟ್ಟಿಗೆ ಸೀಮಿತ ಆಗಿರುತ್ತದೆ' ಎಂದು ನಿಯಮಗಳಲ್ಲಿ ಹೇಳಲಾಗಿದೆ.

ಲಾಕರ್ ಸೌಲಭ್ಯ ಪಡೆದವರು ಸತತ ಮೂರು ವರ್ಷ ಬಾಡಿಗೆ ನೀಡದಿದ್ದಲ್ಲಿ, ನಿಯಮಗಳ ಅನುಸಾರ ಲಾಕರ್ ಒಡೆಯುವ ಅಧಿಕಾರವು ಬ್ಯಾಂಕ್‌ಗಳ ಬಳಿ ಇರಲಿದೆ.

ಸರ್ಕಾರಿ ಸ್ವಾಮ್ಯದ ದೊಡ್ಡ ಬ್ಯಾಂಕೊಂದು ಸಣ್ಣ ಗಾತ್ರದ ಲಾಕರ್ ಸೌಲಭ್ಯಕ್ಕೆ ವಾರ್ಷಿಕ ₹ 2,000, ಮಧ್ಯಮ ಗಾತ್ರದ ಲಾಕರ್‌ಗೆ ₹ 4,000 (ನಗರ ಮತ್ತು ಮಹಾನಗರಗಳಲ್ಲಿ) ಹಾಗೂ ದೊಡ್ಡ ಪ್ರಮಾಣದ ಲಾಕರ್‌ಗೆ ₹ 8,000 ಬಾಡಿಗೆ ಪಡೆಯುತ್ತದೆ. ಈ ಮೊತ್ತದಲ್ಲಿ ಜಿಎಸ್‌ಟಿ ಸೇರಿಲ್ಲ.

ಮುಂಬೈ ಧಾರಣೆ

ಶೇಂಗಾ

18-8-2021

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	9700-9750
ದಪ್ಪ ಗುಜರಾತ್(ಹೊಸ)	9450-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1535 (1540)
ಒಂದು ವಾರದ ಡೆಲಿವರಿ	1530 (1535)
ಸೋಯಾ ಕಚ್ಚಾ	1370 (1375)
ಪಾಮ್ ವಾರದ ಡೆಲಿವರಿ	1270 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1440)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,050 (47,400)
ಬೆಳ್ಳಿ ಕೆ.ಜಿ 63,300 (64,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಲಾಭಗಳಿಕೆ ಒತ್ತಡ: ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಲಾಭ ಗಳಿಕೆಯ ಒತ್ತಡಕ್ಕೆ ಒಳಗಾಗಿ ಷೇರುಪೇಟೆಗಳು ಬುಧವಾರ ಇಳಿಕೆ ಕಂಡವು. ಹೂಡಿಕೆದಾರರು ಬ್ಯಾಂಕಿಂಗ್, ಹಣಕಾಸು ಮತ್ತು ಐ.ಟಿ. ವಲಯದ ಷೇರುಗಳನ್ನು ಮಾರಾಟ ಮಾಡಿ ಲಾಭ ಗಳಿಸಿಕೊಳ್ಳಲು ಮುಂದಾಗಿದ್ದರಿಂದ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು. ಇದರಿಂದ ಸೂಚ್ಯಂಕಗಳ ನಾಲ್ಕು ದಿನಗಳ ದಾಖಲೆಯ ಓಟಕ್ಕೆ ತಡೆ ಬಿದ್ದಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 163 ಅಂಶ ಇಳಿಕೆ ಕಂಡು 55,629 ಅಂಶಗಳಿಗೆ ತಲುಪಿತು. ದಿನದ ವಹಿವಾಟಿನ ಒಂದು ಹಂತದಲ್ಲಿ 56,118 ಅಂಶಗಳ ಗರಿಷ್ಠ ಮಟ್ಟವನ್ನೂ ತಲುಪಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಕುಮಟ	
ಚಿಪ್ಪು	32509-34509
ಕೋಕ	15699-21609
ಫ್ಯಾಕ್ಟರಿ	22099-32019
ಹಳೆಚಾಲಿ	41599-43509
ಹೊಸಚಾಲಿ	39809-40809
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	29699-35599
ಚಾಲಿ	37999-41209
ಕೋಕ	23899-33399
ಕೆಂಪುಗೋಟು	27089-31609
ರಾಶಿ	39249-42369
ತಟ್ಟಿಬೆಟ್ಟೆ	30709-40079
ಶಿರಸಿ	
ಬೆಟ್ಟೆ	31299-39699
ಬಿಳಿಗೋಟು	23029-36699
ಚಾಲಿ	38099-41399
ರಾಶಿ	36099-43299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ / ಹಾಸನ	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	---	12350	--- ಸೆಂಟ್ಸ್
ಎಸಿ	---	---	4925	
ಆರ್‌ಪಿ	---	---	6050	ಲಂಡನ್
ಆರ್‌ಸಿ	---	---	3465	--- ಡಾಲರ್ಸ್

'ಪಿತೃವಿಯೋಗದ ನೋವಿನಲ್ಲಿ ಅರಳಿದ ಪ್ರತಿಭೆ ಸಿರಾಜ್'

ನವದೆಹಲಿ (ಪಿಟಿಐ): ಹೋದ ನವೆಂಬರ್ ತಿಂಗಳಿನಲ್ಲಿ ಆಸ್ಟ್ರೇಲಿಯಾದ ಆ ಹೋಟೆಲ್‌ನಲ್ಲಿ ಕಟ್ಟುನಿಟ್ಟಾದ 'ಗೃಹಬಂಧನ'ದಲ್ಲಿದ್ದಾಗಲೇ ಬಂದಪ್ಪಳಿಸಿದ ಪಿತೃವಿಯೋಗದ ಸಂಗತಿ ಆ ಹುಡುಗನ ಮನಸ್ಸನ್ನು ಜರ್ಜರಿತಗೊಳಿಸಿತ್ತು. ಮನದುಂಬಿ ಅತ್ತುಬಿಡಬೇಕೆಂದರೆ ಗೆಳೆಯರ ಭುಜದಾಸರೆಯೂ ಸಿಗದಂತಹ ಆ ವಾತಾವರಣದಲ್ಲಿಯೇ ಛಲದಂಕಮಲ್ಲನಾಗಿ ಅರಳಿದ ಆ ಹುಡುಗನೇ ಮೊಹಮ್ಮದ್ ಸಿರಾಜ್.

ಕೋವಿಡ್ ಕಾಲಘಟ್ಟದಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಭಾರತವು ಐತಿಹಾಸಿಕ ಜಯ ಸಾಧಿಸುವಲ್ಲಿ ಹೈದರಾಬಾದ್ ಮಧ್ಯಮವೇಗಿ ಸಿರಾಜ್ ಮಹತ್ವದ ಪಾತ್ರ ವಹಿಸಿದ್ದರು. ಆ ಸರಣಿಯಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಸಿರಾಜ್ ಅವರ ನಂತರದ ಜೀವನವೇ ಯಶೋಗಾಥೆಯಾಗಿ ಮಾರ್ಪಟ್ಟಿದೆ. ಎರಡು ದಿನಗಳ ಹಿಂದೆ ಲಾರ್ಡ್ಸ್‌ನಲ್ಲಿಯೂ ಇಂಗ್ಲೆಂಡ್ ತಂಡಕ್ಕೆ ಸಿಂಹಸ್ವಪ್ನರಾದರು.

ಅವರ ಯಶೋಗಾಥೆಯು 'ಮಿಷನ್ ಡಾಮಿನೇಷನ್: ಯಾನ್ ಅನ್‌ಫಿನಿಷ್ಡ್ ಕ್ವೆಸ್ಟ್' ಪುಸ್ತಕದಲ್ಲಿ ದಾಖಲಾಗಿದೆ. ಕ್ರೀಡಾ ಬರಹಗಾರ ಬೊರಿಯಾ ಮುಜುಂದಾರ್ ಮತ್ತು ಕುಶಾನ್ ಸರ್ಕಾರ್ ಈ ಪುಸ್ತಕವನ್ನು ಬರೆದಿದ್ದಾರೆ.



ಮೊಹಮ್ಮದ್ ಸಿರಾಜ್– ಎಎಫ್‌ಪಿ ಚಿತ್ರ

'ಆಸ್ಟ್ರೇಲಿಯಾದಲ್ಲಿ ಸಿರಾಜ್ 14 ದಿನಗಳ ಕಡ್ಡಾಯ ಕ್ವಾರಂಟೈನ್‌ನಲ್ಲಿದ್ದಾಗ ಅವರ ತಂದೆ ಹೈದರಾಬಾದ್‌ನಲ್ಲಿ ಹೃದಯಸ್ತಂಭನದಿಂದ ನಿಧನರಾಗಿದ್ದರು. ಸಿರಾಜ್ ಟೆಸ್ಟ್ ಆಡಬೇಕೆಂಬುದು ಅಪ್ಪನ ಕನಸಾಗಿತ್ತು. ತಂಡವನ್ನು ಬಿಟ್ಟು ತವರಿಗೆ ಮರಳುವುದೋ, ಅಲ್ಲಿಯೇ ಇದ್ದು ಸರಣಿಯಲ್ಲಿ ಆಡುವುದೋ ಎಂಬ ಗೊಂದಲದಲ್ಲಿತ್ತು. ಪ್ರತಿಯೊಬ್ಬ ಆಟಗಾರನಿಗೂ ಪ್ರತ್ಯೇಕ ಕೋಣೆಯಿತ್ತು. ಸಹ ಆಟಗಾರರು ಸಿರಾಜ್ ಬಳಿ ತೆರಳಿ ಸಂತೈಸುವ ಅವಕಾಶವೂ ಅಲ್ಲಿ ಇರಲಿಲ್ಲ. ಪ್ರತಿಯೊಂದು ಕೋಣೆಗೂ ಪೊಲೀಸ್ ಕಾವಲು ಇತ್ತು. ಪಕ್ಕದ ಕೋಣೆಯಲ್ಲಿದ್ದವರೆಲ್ಲರೂ ವಿಡಿಯೊ ಕಾಲ್ ಮೂಲಕವೇ ಸಂತೈಸುತ್ತಿದ್ದರು. ಎಲ್ಲರ ಕೋಣೆಗೆ ಚಿಕಿತ್ಸೆ ನೀಡುವ ಉದ್ದೇಶದಿಂದ ಹೋಗುವ ಅವಕಾಶ ಫಿಸಿಯೊಗೆ ಮಾತ್ರ ಇತ್ತು. ಫಿಸಿಯೊ ನಿತಿನ್ ಪಟೇಲ್ ಈ ಅವಕಾಶವನ್ನು ಬಳಸಿಕೊಂಡು ಸಿರಾಜ್ ಬಳಿ ಹೋಗಿ ಸಂತೈಸುತ್ತಿದ್ದರು. ಕುಸಿದುಹೋಗಿದ್ದ ಹುಡುಗನಲ್ಲಿ ಧೈರ್ಯ ತುಂಬುತ್ತಿದ್ದರು' ಎಂದು ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ.

'ಗಟ್ಟಿ ಮನೋಬಲದೊಂದಿಗೆ ಕಣಕ್ಕಿಳಿದ ಹೈದರಾಬಾದ್ ಹುಡುಗ ಇಡೀ ದೇಶದ ಕಣ್ಮಣಿಯಾದರು. ಇದು ಎಲ್ಲರಿಗೂ ಪ್ರೇರಣಾದಾಯಕ ಕತೆ' ಎಂದು ಲೇಖಕರು ಬಣ್ಣಿಸಿದ್ದಾರೆ.

ಐಸಿಸಿ ರ‍್ಯಾಂಕಿಂಗ್: ರಾಹುಲ್ ಜಿಗಿತ

ದುಬೈ (ಪಿಟಿಐ): ಲಾರ್ಡ್ಸ್ ಟೆಸ್ಟ್‌ನಲ್ಲಿ ಶತಕ ಬಾರಿಸಿದ್ದ ಕೆ.ಎಲ್. ರಾಹುಲ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ರ‍್ಯಾಂಕಿಂಗ್‌ನಲ್ಲಿ 19 ಸ್ಥಾನಗಳ ಬಡ್ತಿ ಗಳಿಸಿದ್ದಾರೆ. ವಿರಾಟ್ ಕೊಹ್ಲಿ ಐದನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಬುಧವಾರ ಐಸಿಸಿಯು ಬಿಡುಗಡೆ ಮಾಡಿರುವ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ 56ನೇ ಸ್ಥಾನದಿಂದ 37ನೇ ಸ್ಥಾನಕ್ಕೆ ರಾಹುಲ್ ಜಿಗಿದಿದ್ದಾರೆ. ಅವರು ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ 129 ರನ್ ಗಳಿಸಿದ್ದರು. ಆ ಪಂದ್ಯದಲ್ಲಿ ಭಾರತವು 151 ರನ್‌ಗಳಿಂದ ಜಯಿಸಲು ಅವರ ಶತಕದಾಟ ಮಹತ್ವದ್ದಾಗಿತ್ತು.

ನಾಯಕ ಕೊಹ್ಲಿ ಐದನೇ, ರೋಹಿತ್ ಶರ್ಮಾ ಮತ್ತು ವಿಕೆಟ್‌ಕೀಪರ್ -ಬ್ಯಾಟ್ಸ್‌ಮನ್ ರಿಷಭ್ ಪಂತ್ ಕ್ರಮವಾಗಿ ಆರು ಮತ್ತು ಏಳನೇ ಸ್ಥಾನ ಗಳಿಸಿದ್ದಾರೆ.

ಈ ಸರಣಿ ಆರಂಭವಾಗುವ ಮುನ್ನ ಐದನೇ ಸ್ಥಾನದಲ್ಲಿದ್ದ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಎರಡು ಸ್ಥಾನಗಳ ಬಡ್ತಿ ಪಡೆದಿದ್ದಾರೆ. ಅವರು ಒಟ್ಟು 893 ಶ್ರೇಯಾಂಕಗಳನ್ನು ಪಡೆದಿದ್ದಾರೆ.



ರಾಹುಲ್

ಸಮಿತ್ ದ್ರಾವಿಡ್ ಅಜೇಯ ಶತಕ

ಬೆಂಗಳೂರು: ಸಮಿತ್ ದ್ರಾವಿಡ್ (ಔಟಾಗದೆ 100, 115 ಎಸೆತ, 12 ಬೌಂಡರಿ) ಹಾಗೂ ಸ್ಮರಣ್ ಆರ್. (ಔಟಾಗದೆ 100, 80 ಎ. 10 ಬೌ. 3 ಸಿ.) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ವಲ್ಚರ್ಸ್ ಕ್ರಿಕೆಟ್ ಕ್ಲಬ್ ತಂಡವು ಜಯ ಗಳಿಸಿತು. ಕೆಎಸ್‌ಸಿಎ ಒಂದನೇ ಗುಂಪಿನ 1,2 ಹಾಗೂ ಮೂರನೇ ಡಿವಿಷನ್‌ನ 19 ವರ್ಷದೊಳಗಿನವರ ಅಂತರ ಕ್ಲಬ್ ಟೂರ್ನಿಯಲ್ಲಿ ಮಂಗಳವಾರ 9 ವಿಕೆಟ್‌ಗಳಿಂದ ಫ್ರೆಂಡ್ಸ್ ಯೂನಿಯನ್ ಕ್ರಿಕೆಟ್ ಕ್ಲಬ್ (2) ತಂಡವನ್ನು ಸೋಲಿಸಿತು.



ಸಮಿತ್ ದ್ರಾವಿಡ್

ಇನ್ನೊಂದು ಪಂದ್ಯದಲ್ಲಿ ವಿಶ್ವೇಶ್ವರಪುರಂ ಕ್ರಿಕೆಟ್ ಕ್ಲಬ್ (1) ತಂಡವು 313 ರನ್‌ಗಳಿಂದ ಫ್ರೆಂಡ್ಸ್ ಇಲೆವನ್ ಕ್ರಿಕೆಟ್ ಕ್ಲಬ್ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಫ್ರೆಂಡ್ಸ್ ಯೂನಿಯನ್ ಕ್ರಿಕೆಟ್ ಕ್ಲಬ್ (2): 50 ಓವರ್‌ಗಳಲ್ಲಿ 9 ವಿಕೆಟ್‌ಗೆ 240 (ಶ್ರವಣ್ ಎಸ್. ಬಾಬು 112, ರವಿ ಕೈರವ್ ರೆಡ್ಡಿ 25, ರೋಹನ್ ಯರೇಶ್ಮಿ 25; ಶಿಖರ್ ಶೆಟ್ಟಿ 36ಕ್ಕೆ 2, ರಾಹುಲ್ ಪ್ರಸನ್ನ 27ಕ್ಕೆ 2,). ವಲ್ಚರ್ಸ್ ಕ್ರಿಕೆಟ್ ಕ್ಲಬ್: 41.5 ಓವರ್‌ಗಳಲ್ಲಿ 1 ವಿಕೆಟ್‌ಗೆ 245 (ಸಮಿತ್ ದ್ರಾವಿಡ್ ಔಟಾಗದೆ 100, ಸ್ಮರಣ್ ಆರ್. ಔಟಾಗದೆ 100, ರಾಹುಲ್ ಪ್ರಸನ್ನ 31). ಫಲಿತಾಂಶ: ವಲ್ಚರ್ಸ್ ಕ್ರಿಕೆಟ್ ಕ್ಲಬ್‌ಗೆ 9 ವಿಕೆಟ್‌ಜಯ.

ವಿಶ್ವೇಶ್ವರಪುರಂ ಕ್ರಿಕೆಟ್ ಕ್ಲಬ್ (1): 50 ಓವರ್‌ಗಳಲ್ಲಿ 5 ವಿಕೆಟ್‌ಗೆ 438 (ಅಶ್ವಿನ್ ಸಂತೋಷ್ 103, ಶುಭಂ ಬಿಸ್ವಾಲ್ 112, ದಿವಾಕರ್ ಶಂಕರ್ 59, ಮಾಣಿಕ್ ಭಾರದ್ವಾಜ್ ಔಟಾಗದೆ 88; ವಿನಯ್ ಕೆ. 100ಕ್ಕೆ 2). ಫ್ರೆಂಡ್ಸ್ ಇಲೆವನ್ ಕ್ರಿಕೆಟ್ ಕ್ಲಬ್, ದೊಡ್ಡಬಳ್ಳಾಪುರ: 29.1 ಓವರ್‌ಗಳಲ್ಲಿ 125 (ಚಾರ್ಲ್ಸ್ ಕ್ವಾನ್ 45; ಅರ್ನಾವ್ ಗೋಖಲೆ 36ಕ್ಕೆ 4, ಹುಜೈಫಾ ಎಂ.ಬಾಗಿ 19ಕ್ಕೆ 2, ಆರ್ಯನ್ ಸಂತೋಷ್ 7ಕ್ಕೆ 2).

ಹೈಟಿಯಲ್ಲಿ ಭೂಕಂಪ: ಮುಗಿಯದ ಸಂತ್ರಸ್ತರ ಸಂಕಷ್ಟ

ಲೆಸ್ ಕೆಯೆಸ್, ಹೈಟಿ (ರಾಯಿಟರ್ಸ್): ಹೈಟಿಯಲ್ಲಿ ಭೀಕರ ಭೂಕಂಪನದಿಂದ ಸುಮಾರು 2,000 ಜನರು ಸಾವಿಗೀಡಾಗಿದ್ದು, ಸಾವಿರಾರು ಮಂದಿ ನೆಲೆ ಕಳೆದುಕೊಂಡಿದ್ದಾರೆ. ಸರ್ಕಾರದ ನೆರವು ಇಲ್ಲದೆ, ಅನೇಕ ಸಂತ್ರಸ್ತರು ಬುಧವಾರ ನಾಲ್ಕನೇ ರಾತ್ರಿಯನ್ನು ಬಯಲು ಪ್ರದೇಶದಲ್ಲಿ ಶುದ್ಧ ನೀರು ಮತ್ತು ಆಹಾರವೂ ಇಲ್ಲದೆ ಕಳೆದರು.

ನೈರುತ್ಯ ಹೈಟಿಯಲ್ಲಿ ಶನಿವಾರ ಸಂಭವಿಸಿದ 7.2 ರ ತೀವ್ರತೆಯ ಭೂಕಂಪನದ ನಂತರ ಅತಿಹೆಚ್ಚು ಹಾನಿಗೊಳಗಾದ ಪಟ್ಟಣ ಲೆಸ್ ಕೆಯೆಸ್‌ಗೆ ಭೇಟಿ ನೀಡಿದ ಪ್ರಧಾನಿ ಏರಿಯಲ್ ಹೆನ್ರಿ, ಸಂತ್ರಸ್ತರ ಧೈರ್ಯವನ್ನು ಶ್ಲಾಘಿಸಿದರು. ಸಂತ್ರಸ್ತರಿಗೆ ಶೀಘ್ರ ನೆರವು ಒದಗಿಸುವ ಭರವಸೆ ನೀಡಿದರು.

'ಸರ್ಕಾರದಿಂದ ಯಾರೂ ಇಲ್ಲಿಗೆ ಬಂದಿಲ್ಲ. ಏನೂ ನೆರವು ನೀಡಿಲ್ಲ' ಎಂದು ಈ ಪ್ರದೇಶದ ರೇಡಿಯೋ ಮತ್ತು ದೂರದರ್ಶನ ಕೇಂದ್ರಗಳಿಗೆ ಭೇಟಿ ನೀಡಿದ ಪಾದ್ರಿ ರೂಸ್‌ವೆಲ್ಟ್ ಮಿಲ್‌ಫೋರ್ಡ್ ಹೇಳಿದರು.

ಆಸ್ಪತ್ರೆಗಳಿಗೂ ಹಾನಿ, ತಾತ್ಕಾಲಿಕ ಡೇರೆಗಳಲ್ಲಿ ಚಿಕಿತ್ಸೆ: ಭೂಕಂಪನದ ಹಾನಿಯಿಂದ ಹಲವು ಪ್ರಮುಖ ಆಸ್ಪತ್ರೆಗಳ ಕಾರ್ಯನಿರ್ವಹಣೆಗೆ ಅಡ್ಡಿಯಾಗಿದೆ. ತಾತ್ಕಾಲಿಕ ಡೇರೆಗಳಲ್ಲಿರುವ ವೈದ್ಯರು ಚಿಕ್ಕ ಮಕ್ಕಳಿಂದ ವೃದ್ಧರವರೆಗೆ ಗಾಯಗೊಂಡವರನ್ನು ರಕ್ಷಿಸಲು ಅವಿರತ ಶ್ರಮಿಸುತ್ತಿದ್ದಾರೆ.

'ಸುಡೊಕು ಪಿತಾಮಹ' ಮಕಿ ಕಾಜಿ ನಿಧನ

ಟೋಕಿಯೊ (ಎಎಫ್‌ಪಿ): 'ಸುಡೊಕು ಪಿತಾಮಹ' ಎಂದು ಕರೆಯಲಾಗುತ್ತಿದ್ದ ಮಕಿ ಕಾಜಿ (69) ಕ್ಯಾನ್ಸರ್ ಕಾಯಿಲೆಯಿಂದ ನಿಧನರಾಗಿದ್ದಾರೆ.

ಜಗತ್ತಿನಾದ್ಯಂತ ಲಕ್ಷಾಂತರ ಜನರಿಂದ ಸುಡೊಕು ಮೆಚ್ಚುಗೆ ಪಡೆದಿದೆ. ಸುಡೊಕು ಜನಪ್ರಿಯಗೊಳಿಸುವಲ್ಲಿ ಕಾಜಿ ಮಹತ್ವದ ಪಾತ್ರ ವಹಿಸಿದ್ದರು.

'ಆಗಸ್ಟ್ 10ರಂದೇ ಮಕಿ ಕಾಜಿ ಅವರು ನಿಧನರಾಗಿದ್ದಾರೆ' ಎಂದು ಅವರ ಜಪಾನ್‌ನ ಪ್ರಕಾಶಕ ನಿಕೊಲಿ ತಿಳಿಸಿದ್ದಾರೆ.



ಸಂಖ್ಯಾ ಆಧಾರಿತ ಸುಡೊಕು ಅನ್ನು ಸ್ವಿಟ್ಜರ್ಲೆಂಡ್‌ನ ಗಣಿತ ತಜ್ಞ ಲೆಯಾನ್ ಹಾರ್ಡ್ ಯುಲೆರ್ 18ನೇ ಶತಮಾನದಲ್ಲಿ ಮೊದಲು ರಚಿಸಿದ್ದರು. ಆಧುನಿಕ ಆವೃತ್ತಿಯ ಸುಡೊಕುಗೆ ಅಮೆರಿಕದಲ್ಲಿ ಹೊಸ ರೂಪ ನೀಡಲಾಯಿತು. ಆದರೆ, ಕಾಜಿ ಅವರಿಗೆ ಸುಡೊಕುವನ್ನು ಜನಪ್ರಿಯಗೊಳಿಸಿದ ಖ್ಯಾತಿ ಸಲ್ಲುತ್ತದೆ.

ಟೆಸ್ಟ್: ಮಲಾನ್‌ಗೆ ಸ್ಥಾನ; ಸಿಬ್ಲಿ ಔಟ್

ಲಂಡನ್(ಪಿಟಿಐ): ಭಾರತದ ಎದುರಿನ ಟೆಸ್ಟ್ ಕ್ರಿಕೆಟ್ ಸರಣಿಯ ಮೂರನೇ ಪಂದ್ಯದಲ್ಲಿ ಆಡಲಿರುವ ಇಂಗ್ಲೆಂಡ್ ತಂಡದಲ್ಲಿ ಬ್ಯಾಟ್ಸ್‌ಮನ್ ಡೇವಿಡ್ ಮಲಾನ್ ಅವರಿಗೆ ಸ್ಥಾನ ನೀಡಲಾಗಿದೆ.

ಮೂರನೇ ಟೆಸ್ಟ್ ಇದೇ 25ರಿಂದ ಲೀಡ್ಸ್‌ನಲ್ಲಿ ನಡೆಯಲಿದೆ.

ತಂಡ: ಜೋ ರೂಟ್ (ನಾಯಕ), ಮೋಯಿನ್ ಅಲಿ, ಜೇಮ್ಸ್ ಆ್ಯಂಡರ್ಸನ್, ಜೊನಾಥನ್ ಬೆಸ್ಟೊ, ರೋರಿ ಬರ್ನ್ಸ್, ಜೊಸ್ ಬಟ್ಲರ್, ಸ್ಯಾಮ್ ಕರನ್, ಹಸೀಬ್ ಹಮೀದ್, ಡ್ಯಾನ್ ಲಾರೆನ್ಸ್, ಸಕೀಬ್ ಮೆಹಮೂದ್, ಡೇವಿಡ್ ಮಲಾನ್, ಕ್ರೆಗ್ ಓವರ್ಟನ್, ಪೋಪ್, ರಾಬಿನ್ಸನ್, ಮಾರ್ಕ್ ವುಡ್.

ಪ್ಯಾರಾಲಿಂಪಿಕ್ಸ್: ಟೋಕಿಯೊಗೆ ತೆರಳಿದ ಭಾರತದ ಮೊದಲ ತಂಡ

ನವದೆಹಲಿ (ಪಿಟಿಐ): ಪ್ಯಾರಾಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿರುವ ಭಾರತದ ಅಥ್ಲೀಟ್‌ಗಳ ಮೊದಲ ತಂಡವು ಬುಧವಾರ ಟೋಕಿಯೊಗೆ ಪ್ರಯಾಣ ಬೆಳೆಸಿತು. ಇಂದಿರಾ ಗಾಂಧಿ ವಿಮಾನ ನಿಲ್ದಾಣದಲ್ಲಿ ತಂಡವನ್ನು ಅದ್ದೂರಿಯಾಗಿ ಬೀಳ್ಕೊಡಲಾಯಿತು.

ಕ್ರೀಡಾ ಸಚಿವಾಲಯ, ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಮತ್ತು ಭಾರತ ಪ್ಯಾರಾಲಿಂಪಿಕ್ ಸಮಿತಿ (ಪಿಸಿಐ) ಅಧಿಕಾರಿಗಳು ಎಂಟು ಸದಸ್ಯರ ಗುಂಪನ್ನು ಕಳುಹಿಸಿಕೊಟ್ಟರು. ಭಾರತದ ಧ್ವಜಧಾರಿ ಮರಿಯಪ್ಪನ್ ತಂಗವೇಲು, ಟೆಕ್ ಚಾಂದ್, ವಿನೋದ್ ಕುಮಾರ್ ಈ ತಂಡದಲ್ಲಿದ್ದರು.

'ಪ್ರಧಾನ ಮಂತ್ರಿ, ಕ್ರೀಡಾ ಸಚಿವರು ಸೇರಿದಂತೆ ಇಡೀ ದೇಶ ಇವತ್ತು ನಮ್ಮನ್ನು ಹುರಿದುಂಬಿಸಿದೆ. ಸ್ಪರ್ಧೆಯಲ್ಲಿ ಭಾಗವಹಿಸಲಿರುವ ನೀವೆಲ್ಲರೂ ಈಗಾಗಲೇ ಜಯಶಾಲಿಗಳಾಗಿದ್ದೀರಿ, ಶುಭವಾಗಲಿ' ಎಂದು ಪಿಸಿಐ ಅಧ್ಯಕ್ಷೆ ದೀಪಾ ಮಲಿಕ್ ಹೇಳಿದ್ದಾರೆ.



ನವದೆಹಲಿಯ ಇಂದಿರಾ ಗಾಂಧಿ ವಿಮಾನ ನಿಲ್ದಾಣದಲ್ಲಿ ಭಾರತದ ಪ್ಯಾರಾಲಿಂಪಿಕ್ಸ್ ತಂಡ– ಟ್ವಿಟರ್ ಚಿತ್ರ

ಆರು ತಂಡಗಳ ಮಹಿಳಾ ಐಪಿಎಲ್: ಮಂದಾನ ಒಲವು

ನವದೆಹಲಿ (ಪಿಟಿಐ): ಆರು ತಂಡಗಳ ಮಹಿಳಾ ಐಪಿಎಲ್ ಟೂರ್ನಿಯನ್ನು ಪರಿಚಯಿಸಲು ಇದು ಸಕಾಲ ಎಂದು ಭಾರತ ಕ್ರಿಕೆಟ್ ತಂಡದ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಅಭಿಪ್ರಾಯಪಟ್ಟಿದ್ದಾರೆ. ದೇಶದಲ್ಲಿ ಮಹಿಳಾ ಕ್ರಿಕೆಟ್ ಈಗ ಸಾಕಷ್ಟು ಸಾಮರ್ಥ್ಯವನ್ನು ಹೊಂದಿದೆ ಎಂದು ಅವರು ಹೇಳಿದ್ದಾರೆ.

ಐಪಿಎಲ್ ಟಿ -20 ಲೀಗ್ ಬಂದ ನಂತರ ಪುರುಷರ ಕ್ರಿಕೆಟ್‌ನಲ್ಲಿ ದೇಶೀಯ ಆಟಗಾರರ ಗುಣಮಟ್ಟ ಸುಧಾರಿಸಿದೆ ಮತ್ತು ಮಹಿಳಾ ಕ್ರಿಕೆಟ್‌ನಲ್ಲೂ ಇದೇ ರೀತಿ ಆಗಬಹುದು ಎಂದು 25 ವರ್ಷದ ಬ್ಯಾಟರ್ ನುಡಿದರು.

'ಆರಂಭದಲ್ಲಿ ಪುರುಷರ ಐಪಿಎಲ್‌ನಲ್ಲೂ ಕಡಿಮೆ ತಂಡಗಳಿದ್ದವು. ವರ್ಷಗಳು ಕಳೆದಂತೆ ಗುಣಮಟ್ಟವು ಹೆಚ್ಚುತ್ತಾ ಹೋಯಿತು. ತಂಡಗಳೂ ಹೆಚ್ಚಾದವು' ಎಂದು ಕ್ರಿಕೆಟಿಗ ರವಿಚಂದ್ರನ್ ಅಶ್ವಿನ್ ಅವರ ಯೂಟ್ಯೂಬ್ ಚಾನೆಲ್‌ನಲ್ಲಿ ಮಂದಾನ ಹೇಳಿದರು.

'ಇಂದು ಐಪಿಎಲ್ ಏನಾಗಿದೆಯೋ.. ಅದು 10 ಅಥವಾ 11 ವರ್ಷಗಳ ಹಿಂದೆ ಹಾಗೆ ಇರಲಿಲ್ಲ. ಮಹಿಳಾ ಕ್ರಿಕೆಟ್‌ಗೂ ಇದು ಅನ್ವಯಿಸುತ್ತದೆ. ಸದ್ಯ, ಮಹಿಳೆಯರ ಐಪಿಎಲ್ ಟೂರ್ನಿ ಆಯೋಜಿಸಲು ನಾವು ಉತ್ತಮ ಸಾಮರ್ಥ್ಯದ ಐದು ಅಥವಾ ಆರು ತಂಡಗಳನ್ನು ಹೊಂದಿದ್ದೇವೆ. ಬಹುಶಃ ಒಂದು ಅಥವಾ ಎರಡು ವರ್ಷಗಳಲ್ಲಿ ಎಂಟು ತಂಡಗಳಾಗಿ ಬೆಳೆಯುತ್ತೇವೆ ಎಂಬ ಭರವಸೆಯಿದೆ' ಎಂದು ಮಂದಾನ ಹೇಳಿದ್ದಾರೆ.



ಸ್ಮೃತಿ ಮಂದಾನ


4X400 ಮೀ. ಮಿಶ್ರ ರಿಲೆಯಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದ ಭರತ್ ಎಸ್, ಪ್ರಿಯಾ ಮೋಹನ್, ಸಮ್ಮಿ ಹಾಗೂ ಕಪಿಲ್– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್

ಮಿಶ್ರ ರಿಲೆಯಲ್ಲಿ ಭಾರತಕ್ಕೆ ಕಂಚು

ನೈರೋಬಿ (ಪಿಟಿಐ): ಕರ್ನಾಟಕದ ಪ್ರಿಯಾ ಮೋಹನ್ ಅವರನ್ನೊಳಗೊಂಡ ಭಾರತ ತಂಡವು 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 4X400 ಮೀ. ಮಿಶ್ರ ರಿಲೆಯಲ್ಲಿ ಕಂಚಿನ ಪದಕಕ್ಕೆ ಮುತ್ತಿಟ್ಟಿದೆ.

20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಇದು ಐದನೇ ಪದಕವಾಗಿದೆ.

ಭರತ್ ಎಸ್., ಪ್ರಿಯಾ, ಸಮ್ಮಿ ಹಾಗೂ ಕಪಿಲ್ ಅವರಿದ್ದ ತಂಡವು ಫೈನಲ್‌ನಲ್ಲಿ 3 ನಿಮಿಷ 20.60 ಸೆಕೆಂಡುಗಳಲ್ಲಿ ಗುರಿ ತಲುಪಿತು. ನೈಜೀರಿಯಾ (3 ನಿ. 19.70 ಸೆ.) ಹಾಗೂ ಪೋಲೆಂಡ್ (3 ನಿ. 19.80 ಸೆ.) ತಂಡಗಳು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ತಮ್ಮದಾಗಿಸಿಕೊಂಡವು.

ಭಾರತ ತಂಡದವರು ಒಟ್ಟಾರೆ ಎರಡನೇ ಸ್ಥಾನದೊಂದಿಗೆ ಫೈನಲ್‌ಗೆ ಪ್ರವೇಶ ಪಡೆದಿದ್ದರು. ಹೀಟ್ಸ್‌ನಲ್ಲಿ ಮೊದಲ ಸ್ಥಾನ ಗಳಿಸಿದ್ದರು. 20 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸೀಮಾ ಅಂಟಿಲ್ (ಡಿಸ್ಕಸ್ ಥ್ರೊ, 2002), ನವಜೀತ್ ಕೌರ್ ದಿಲ್ಲೋನ್ (ಡಿಸ್ಕಸ್ ಥ್ರೊ, 2014), ಒಲಿಂಪಿಕ್ಸ್ ಚಾಂಪಿಯನ್ ನೀರಜ್ ಚೋಪ್ರಾ (ಜಾವೆಲಿನ್ ಥ್ರೊ, 2016) ಮತ್ತು ಹಿಮಾ ದಾಸ್ (400 ಮೀ. ಓಟ, 2018) ಪದಕ ಗೆದ್ದುಕೊಂಡಿದ್ದರು.

ಮುಖ್ಯಾಂಶಗಳು

- ತಂಡದಲ್ಲಿ ಕರ್ನಾಟಕದ ಪ್ರಿಯಾ ಮೋಹನ್
- ಯುವ ಅಥ್ಲೆಟಿಕ್ಸ್ ವಿಶ್ವ ಕೂಟದಲ್ಲಿ ಭಾರತಕ್ಕೆ ಇದು ಐದನೇ ಪದಕ
- ನೈಜೀರಿಯಾ ತಂಡಕ್ಕೆ ಚಿನ್ನ

ಟಿಟಿ: ಪ್ರೀಕ್ವಾರ್ಟರ್‌ಗೆ ಹರ್ಮಿತ್

ಬುಡಾಪೆಸ್ಟ್ (ಪಿಟಿಐ): ಭಾರತದ ಜಿ. ಸತ್ಯನ್ ಹಾಗೂ ಹರ್ಮಿತ್ ದೇಸಾಯಿ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ.

ಬುಧವಾರ ನಡೆದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಸತ್ಯನ್ 14-12 11-5 7-11 11-4ರಿಂದ ಫ್ರಾನ್ಸ್‌ನ ಕಾನ್ ಅಕ್ಕುಜು ಅವರ ಸವಾಲು ಮೀರಿದರು.

ಮುಂದಿನ ಸುತ್ತಿನಲ್ಲಿ ಅವರು ಇಟಲಿಯ ನಿಯಾಗೊಲ್ ಸ್ಟೊಯನೊವ್ ಅವರನ್ನು ಎದುರಿಸುವರು.

ಮೊದಲ ಸುತ್ತಿನ ಇನ್ನೊಂದು ಹಣಾಹಣಿಯಲ್ಲಿ ಹರ್ಮಿತ್ ದೇಸಾಯಿ ಅವರು 6-11 7-11 13-11 11-7 11-4ರಿಂದ ಹಂಗರಿಯ ಸಾಬಾ ಆ್ಯಂಡ್ರಸ್ ಅವರನ್ನು ಮಣಿಸಿದರು. ಮಾನವ್ ಥಕ್ಕರ್ 12-10 11-9 11-6ರಿಂದ ಬೆಲಾರಸ್‌ನ ಪಾವೆಲ್ ಪ್ಲಾಟನೊವ್ ಎದುರು ಜಯಿಸಿ 16ರ ಘಟ್ಟಕ್ಕೆ ಲಗ್ಗೆಯಿಟ್ಟರು.

ಮುಂದಿನ ಪಂದ್ಯದಲ್ಲಿ ಹರ್ಮಿತ್ ಜರ್ಮನಿಯ ಡ್ಯಾಂಗ್ ಕ್ಯೂ ಎದುರು ಆಡುವರು.


ಹರ್ಮಿತ್ ದೇಸಾಯಿ– ಪಿಟಿಐ ಚಿತ್ರ



ಕುಸ್ತಿ: ರವೀಂದರ್‌ಗೆ ಬೆಳ್ಳಿ

ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್: ಫೈನಲ್‌ಗೆ ಬಿಪಾಶಾ


ಯುಫಾ, ರಷ್ಯಾ (ಪಿಟಿಐ):ಭಾರತದ ರವೀಂದರ್ ಇಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು.

ಬುಧವಾರ ನಡೆದ ಬಾಲಕರ 61 ಕೆಜಿ ವಿಭಾಗದ ಫೈನಲ್‌ನಲ್ಲಿ ಇರಾನ್ ಕುಸ್ತಿಪಟು ರೆಹಮಾನ್ ಮೌಸಾ ಅಮೌಜಾದಕಲಿಲಿ 9-3ರಿಂದ ರವೀಂದರ್ ಅವರನ್ನು ಮಣಿಸಿದರು. ಹೋದ ಜೂನ್‌ನಲ್ಲಿ ರೆಹಮಾನ್ ಸೀನಿಯರ್ ಕುಸ್ತಿಯಲ್ಲಿ ಯಾಸರ್ ದೊಗು ವಿರುದ್ಧ ಗೆದ್ದಿದ್ದರು.

ಇಲ್ಲಿ ರವೀಂದರ್ ಯಾವುದೇ ಹಂತದಲ್ಲಿಯೂ ಮೇಲುಗೈ ಸಾಧಿಸದಂತೆ ಇರಾನಿ ಕುಸ್ತಿಪಟು ನೋಡಿಕೊಂಡರು. ಬಿಗಿಪಟ್ಟುಗಳನ್ನು ಹಾಕಿದ ಅವರು ಜಯಭೇರಿ ಬಾರಿಸಿದರು.

ಯಶ್, ಪೃಥ್ವಿ, ಅನಿರುದ್ಧಗೆ ಕಂಚು: 74 ಕೆಜಿ ವಿಭಾಗದ ರಿಪೇಚ್‌ನಲ್ಲಿ ಭಾರತದ ಯಶ್ ಗೆದ್ದು ಕಂಚಿನ ಪದಕ ಗಳಿಸಿದರು. ಈ ಸುತ್ತಿನಲ್ಲಿ ಅವರು 9–2ರಿಂದ ಆರ್ಮೆನಿಯಾದ ಅರ್ಮನ್ ಮುಸಿಕಿಯಾನ್ ವಿರುದ್ಧ, ಇನ್ನೊಂದು ಬೌಟ್‌ನಲ್ಲಿ 12 –5ರಿಂದ ಕಿರ್ಗಿಸ್ತಾನದ ಸ್ತಾಂಬುಲ್ ಝ್ಯುನಿಬೆಕ್ ಉಲು ಎದುರು ಗೆದ್ದರು.

92 ಕೆಜಿ ವಿಭಾಗದಲ್ಲಿ ಪೃಥ್ವಿ ಬಾಬಾಸಾಹೇಬ್ ಪಾಟೀಲ ಮತ್ತು 125 ಕೆಜಿ ವಿಭಾಗದಲ್ಲಿ ಅನಿರುದ್ಧ ಕೂಡ ಕಂಚಿನ ಪದಕ ಜಯಿಸಿದರು.


ಭಾರತದ ರವಿಂದರ್(ಎಡ)– ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ಟ್ವಿಟರ್ ಸಂಗ್ರಹ ಚಿತ್ರ

ಗೌರವ್ ಬಲಿಯಾನ್ ಮತ್ತು ದೀಪಕ್ ಮಂಗಳವಾರ ಕಂಚು ಗೆದ್ದಿದ್ದರು. ಇದರೊಂದಿಗೆ ಭಾರತಕ್ಕೆ ಇದುವರೆಗೆ ಒಟ್ಟು ಆರು ಪದಕಗಳು ಸಂದಿವೆ.

ಫೈನಲ್‌ಗೆ ಬಿಪಾಶಾ: ಮಹಿಳೆಯರ 76 ಕೆಜಿ ವಿಭಾಗದ ಫೈನಲ್‌ಗೆ ಭಾರತದ ಬಿಪಾಶಾ ಲಗ್ಗೆಯಿಟ್ಟರು. ಇದರಿಂದಾಗಿ ಈ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸುವ ಮತ್ತೊಂದು ಭರವಸೆ ಮೂಡಿದೆ.ಸೆಮಿಫೈನಲ್‌ನಲ್ಲಿ ಬಿಪಾಶಾ 9–4ರಿಂದ ಮಂಗೋಲಿಯಾದ ಒದ್ಬಗ್ ಯುಲ್ಜಿಬತ್ ವಿರುದ್ಧ ಗೆದ್ದರು. ಅವರು ಎಂಟರಘಟ್ಟದ ಹಣಾಹಣಿಯಲ್ಲಿ 6–3ರಿಂದ ಕಜಕಸ್ತಾನದ ದಿಲ್‌ನಾಜ್ ಮುಲ್ಕಿನೊವಾ ಎದುರು ಜಯಿಸಿದರು.

50 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಸಿಮ್ರನ್ 18–8ರಿಂದ ಅಜರ್‌ಬೈಜಾನ್‌ನ ಗುಲ್ತಕಿನ್ ಶಿರಿನೊವಾ ಅವರನ್ನು ಪರಾಭಗೊಳಿಸಿದರು. ಇದಕ್ಕೂ ಮೊದಲು ಅವರು ರುಮೇನಿಯಾದ ಜಾರ್ಜಿಯಾನಾ ಲಾವಿನಿಯಾ ಅಂಟುಕಾ ಎದುರು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಜಯ ಸಾಧಿಸಿದ್ದರು.

ಎನ್‌ಸಿಎ: ಅರ್ಜಿ ಸಲ್ಲಿಸಿದ ದ್ರಾವಿಡ್


ದ್ರಾವಿಡ್

ನವದೆಹಲಿ (ಪಿಟಿಐ): ರಾಹುಲ್ ದ್ರಾವಿಡ್ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥರಾಗಿ ಮರುನೇಮಕ ಬಯಸಿ ಅರ್ಜಿ ಸಲ್ಲಿಸಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಈ ಹುದ್ದೆಯ ನೇಮಕಕ್ಕಾಗಿ ಈಚೆಗೆ ಅರ್ಜಿ ಆಹ್ವಾನಿಸಿತ್ತು. ಪ್ರಸ್ತುತ ಮುಖ್ಯಸ್ಥರಾಗಿರುವ ರಾಹುಲ್ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಇದುವರೆಗೆ ಅವರನ್ನು ಬಿಟ್ಟು ಬೇರೆ ಯಾರೂ ಅರ್ಜಿ ಹಾಕಿಲ್ಲ.ಆದ್ದರಿಂದ ಮಂಡಳಿಯು ಅರ್ಜಿ ಸ್ವೀಕಾರದ ಅವಧಿಯನ್ನು ವಿಸ್ತರಿಸಿದೆ. ಅಗಸ್ಟ್ 15ಕ್ಕೆ ಕೊನೆಯ ದಿನವಿತ್ತು. ಈಗ ಕೆಲವು ದಿನಗಳ ವರೆಗೆ ಅವಕಾಶ ನೀಡಿದೆ.

‘ರಾಹುಲ್ ದ್ರಾವಿಡ್ ಅವರಿಗೆ ಸರಿಸಮನಾಗಿ ಪೈಪೋಟಿಯೊಡ್ಡುವವರೂ ಕಡಿಮೆ ಇದ್ದಾರೆ. ಆದರೆ, ಅವರು ಎರಡು ವರ್ಷಗಳ ಅವಧಿಯನ್ನು ಈಗಾಗಲೇ ಪೂರೈಸಿದ್ದಾರೆ. ಮುಂದುವರಿಸುವ ನಿಯಮ ಇಲ್ಲ. ಆದ್ದರಿಂದ ಸಂದರ್ಶನ ಪ್ರಕ್ರಿಯೆಯ ಮೂಲಕವೇ ಮರುನೇಮಕವಾಗಬೇಕು. ಆದ್ದರಿಂದ ಆಸಕ್ತರು ಅರ್ಜಿ ಸಲ್ಲಿಸಲು ಮತ್ತಷ್ಟು ಕಾಲಾವಕಾಶ ನೀಡಲಾಗಿದೆ’ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಥಾಮಸ್, ಊಬರ್ ಕಪ್ ಬ್ಯಾಡ್ಮಿಂಟನ್

ಭಾರತಕ್ಕೆ ಬಲಿಷ್ಠ ತಂಡಗಳ ಸವಾಲು

ನವದೆಹಲಿ (ಪಿಟಿಐ): ಡೆನ್ಮಾರ್ಕಿನ ಆರ್‌ಹಾಸ್‌ನಲ್ಲಿ ಅಕ್ಟೋಬರ್‌ನಲ್ಲಿ ನಡೆಯಲಿರುವ ಥಾಮಸ್ ಮತ್ತು ಊಬರ್ ಕಪ್ ಬ್ಯಾಡ್ಮಿಂಟನ್ ಫೈನಲ್‌ನಲ್ಲಿ ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಕಣಕ್ಕಿಳಿಯಲಿವೆ.

ಪುರುಷರ ವಿಭಾಗದಲ್ಲಿ ಸಿ ಗುಂಪಿನಲ್ಲಿ ಭಾರತ ತಂಡಕ್ಕೆ ಹಾಲಿ ಚಾಂಪಿಯನ್ ಚೀನಾ, ನೆದರ್ಲೆಂಡ್ಸ್ ಮತ್ತು ತಾಹಿತಿ ತಂಡಗಳ ಸವಾಲು ಎದುರಾಗಲಿದೆ.

ಮಹಿಳೆಯರ ಬಿ ಗುಂಪಿನಲ್ಲಿ ಭಾರತ ತಂಡವು ಹೋದ ಸಲದ ರನ್ನರ್ಸ್ ಅಪ್ ಥಾಯ್ಲೆಂಡ್, ಸ್ಪೇನ್ ಮತ್ತು ಸ್ಕಾಟ್ಲೆಂಡ್ ತಂಡಗಳ ಸವಾಲು ಎದುರಿಸಲಿದೆ.

ಕೌಲಾಲಂಪುರದಲ್ಲಿರುವ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಆಡಳಿತ ಕಚೇರಿಯಲ್ಲಿ ಡ್ರಾ ಬಿಡುಗಡೆ ನಡೆಯಿತು.

ಲೀಗ್ ಹಂತದಲ್ಲಿ ಪ್ರತಿ ಗುಂಪಿನಲ್ಲಿ ಅಗ್ರ ಎರಡು ಸ್ಥಾನ ಗಳಿಸುವ ತಂಡಗಳು ನಾಕ್‌ಔಟ್ ಸುತ್ತಿಗೆ ಪ್ರವೇಶ ಪಡೆಯಲಿವೆ. 2018ರಲ್ಲಿ ಭಾರತ ತಂಡಗಳು ಎಂಟರ ಘಟ್ಟ ತಲುಪುವಲ್ಲಿ ವಿಫಲವಾಗಿದ್ದವು.

13 ಬಾರಿ ಪ್ರಶಸ್ತಿ ಗೆದ್ದು ದಾಖಲೆ ಮಾಡಿರುವ ಇಂಡೋನೇಷ್ಯಾ ತಂಡವು ಎ ಗುಂಪಿನಲ್ಲಿ ಆಡಲಿದೆ. ತೈಪೆ, ಅಲ್ಜಿರಿಯಾ ತಂಡಗಳು ಇದೇ ಗುಂಪಿನಲ್ಲಿವೆ.

ಈ ಟೂರ್ನಿಯು ಹೋದ ಸೆಪ್ಟೆಂಬರ್ ನಲ್ಲಿ ನಡೆಯಬೇಕಿತ್ತು. ಆದರೆ, ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ಇಂಡೋನೇಷ್ಯಾ, ದಕ್ಷಿಣ ಕೊರಿಯಾ, ಥಾಯ್ಲೆಂಡ್ ಮತ್ತು ತೈಪೆ ತಂಡಗಳು ಹಿಂದೆ ಸರಿದಿದ್ದವು. ಆದ್ದರಿಂದ ಟೂರ್ನಿಯನ್ನು ಮುಂದೂಡಲಾಗಿತ್ತು.

ಎಟಿಕೆಎಂಬಿಗೆ ಜಯ

ಮಾಲೆ, ಮಾಲ್ಡೀವ್ಸ್ (ಪಿಟಿಐ): ಎರಡು ವರ್ಷಗಳ ಬಳಿಕ ಎಟಿಕೆ ಮೋಹನ್ ಬಾಗನ್ ತಂಡವನ್ನು ಸೋಲಿಸುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ಕನಸು ನನಸಾಗಲಿಲ್ಲ.

ನಾಯಕ ರಾಯ್ ಕೃಷ್ಣ ಹಾಗೂ ಸುಭಾಶಿಶ್ ಬೋಸ್ ಗಳಿಸಿದ ಗೋಲುಗಳ ಬಲದಿಂದ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವು ಎಎಫ್‌ಸಿ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 2–0ಯಿಂದ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿಯನ್ನು ಮಣಿಸಿತು.

ಬುಧವಾರ ನಡೆದ ‘ಡಿ’ ಗುಂಪಿನ ಹಣಾಹಣಿಯಲ್ಲಿ ವಿಜೇತ ತಂಡದ ರಾಯ್ ಕೃಷ್ಣ 39ನೇ ನಿಮಿಷದಲ್ಲಿ ಗೋಲು ದಾಖಲಿಸಿದರೆ, ಸುಭಾಶಿಸ್ 46ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.


ರಾಯ್ ಕೃಷ್ಣ

ಬಿಎಫ್‌ಸಿ ತಂಡವು 2019ರ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಎಟಿಕೆಎಂಬಿ ತಂಡವನ್ನು ಕೊನೆಯ ಬಾರಿ ಮಣಿಸಿತ್ತು.

ಪಂದ್ಯದಲ್ಲಿ ಸ್ವತಃ ಚೆಟ್ರಿ ಅವರಿಗೂ ಉತ್ತಮ ಸಾಮರ್ಥ್ಯ ತೋರಲು ಸಾಧ್ಯವಾಗಲಿಲ್ಲ. 68ನೇ ನಿಮಿಷದಲ್ಲಿ ಅವರ ಸ್ಥಾನಕ್ಕೆ ಲಿಯೊನ್ ಅಗಸ್ಟಿನ್ ಬದಲಿ ಆಟಗಾರನಾಗಿ ಬಂದರು.

ಮುಂದಿನ ಪಂದ್ಯದಲ್ಲಿ ಎಟಿಕೆಎಂಬಿ ತಂಡವು ಶನಿವಾರ ಮಾಲ್ಡೀವ್ಸ್‌ನ ಮಜಿಯಾ ಸ್ಪೋರ್ಟ್ಸ್ ಆ್ಯಂಡ್ ರಿಕ್ರಿಯೇಷನ್ ತಂಡವನ್ನು ಎದುರಿಸಲಿದೆ. ಅದೇ ದಿನ ಬೆಂಗಳೂರು ತಂಡಕ್ಕೆ ಬಾಂಗ್ಲಾದೇಶದ ಬಶುಂಧರಾ ಕಿಂಗ್ಸ್ ಸವಾಲು ಎದುರಾಗಿದೆ.

